ನಮ್ಮ ದೇಶದಲ್ಲಿ ಈ ವರ್ಷದ ಅಭಾವ ಪರಿಸ್ಥಿತಿಯನ್ನು ಮಾನ್ಯ ರೆವಿನ್ಯೂ ಸಚಿವರು ಈ ಸಭೆಯ ಮುಂದೆ ಒಂದು ಹೇಳಿಕೆಯ ಮುಖಾಂತರವಾಗಿ ಇಟ್ಟಿದ್ದಾರೆ. ಅವರು ಹೇಳಿರತಕ್ಕಂಥ ರೀತಿಯಲ್ಲಿ ಈ ವರ್ಷ ಮಳೆ ಬಾರದೆ ಬೆಳೆ ಆಗದೆ ಕೆರೆಗಳಿಗೆ ನೀರು ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಉಂಟಾಗಿದೆ.

Sri V. N. PATIL:—Sir, just now I have received information from Markal Village in Bidar District, about a place in respect of which I have also sent a short-notice question. We have not yet taken up discussion on that subject. I also requested discussion of that subject. Eight ladies have come from that place saying that they are beaten and harassed by the police. They say that harassment is going on day and night. On the floor of this House, it was said that no atrocities are done in Bidar District. We want to know to whom we should represent about these police atrocities. It is said that even rowdies are allowed to go in police dress and police are lending their uniform to them and they are committing all sorts of atrocities. I want to know to whom I should represent and whom I should approach.

Sri B. D. JATTI.—Sir, if there is call attention motion, that will be attended. If there is a short notice question that will be replied. If there is any matter that can be represented, Government can reply. Where is the difficulty, I do not know.

Sri V. N. PATIL.—I have given notice for discussion. We have not yet reached that subject.

Mr. DEPUTY SPEAKER.—The hon. Member can send a representation and it will be dealt with.

DISCUSSION ON THE SCARCITY CONDITIONS IN THE STATE

5-30 P.M.

† ಶ್ರೀ ಎಸ್. ಶಿವಪ್ಪ.—ಈಗ ಈ ಅಭಾವ ಪರಿಸ್ಥಿತಿಯ ಚರ್ಚೆಗೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇಲ್ಲದೇ ಇರುವುದು ಶೋಚನೀಯವಾದುದು. ದೇಶದಲ್ಲಿ ಮಳೆ ಬಾರದೆ ಬೆಳೆ ಹೋಗಿ ಕ್ಷಾಮ ಪರಿಸ್ಥಿತಿ ಬಂದಿರುವಾಗ ಸಂಬಂಧಪಟ್ಟ ಮಂತ್ರಿಗಳು ಊರಿನಲ್ಲಿದ್ದು ಈ ಸಭೆಗೆ ಬಾರದೆ ಇರುವುದನ್ನು ನೋಡಿದರೆ, ಇಂತಹ ಘೋರ ಸಮಸ್ಯೆಯನ್ನು ಪರಿಹಾರಮಾಡುವ ಕಾರ್ಯದಲ್ಲಿ ಎಷ್ಟೊಂದು ಅಲಸ್ಯಮನೋಭಾವನೆಯನ್ನು ಹೊಂದಿದ್ದಾರೆಂಬುದು ವ್ಯಕ್ತವಾಗುತ್ತದೆ. ಈ ದಿವಸ ಈ ಚರ್ಚೆಯು ಆಗುವುದರಿಂದ ಜನತೆಗೆ ಪ್ರಯೋಜನವಾಗುತ್ತದೆಂದು ನಾವು ತಿಳಿದಿದ್ದೆವು. ಆದರೆ ಇಲ್ಲಿ ಕೇವಲ ನಮ್ಮ ಕಂಠಶೋಷಣೆಯಾದರೆ ಸುಮ್ಮನೆ ನಾವು ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಇಷ್ಟಪಡುವುದಿಲ್ಲ. ನಿಜವಾಗಿ ಈ ಚರ್ಚೆಯಿಂದ ಪೂರ್ಣ ಫಲಕಾರಿಯಾಗಬೇಕಾದರೆ ಇದಕ್ಕೆ ಸಂಬಂಧಪಟ್ಟ ಸಚಿವರು ಇಲ್ಲಿಗೆ ಬರಬೇಕು. ಇಲ್ಲದಿದ್ದರೆ ಈ ಚರ್ಚೆಯನ್ನೇ ಮುಂದಕ್ಕೆ ಹಾಕಬೇಕು. ಮೈಸೂರಿನಲ್ಲಿ ಸುಮಾರು ಅರ್ಧ ಭಾಗದಲ್ಲಿ ಮಳೆಬಾರದೆ ಬೆಳೆ ಹೋಗಿದೆ. ಜನರು ಹಾಹಾಕಾರ ಪಟ್ಟಿರುವ ಇಂತಹ ಒಂದು ಸಂದರ್ಭದಲ್ಲಿ ಈ ಸರ್ಕಾರಕ್ಕೆ ಇದರ ವಿಚಾರ ಕೇಳಲು ಸಾಕಷ್ಟು ಶಕ್ತಿ ಹಾಗೂ ಅಸಕ್ತಿ ಇಲ್ಲದೇ ಹೋದರೆ ನಾವು ಇಲ್ಲಿ ಮಾತನಾಡಿ ಪ್ರಯೋಜನವೇನು ? ಪಾಪ ಏನು ಮಾಡಿಯಾರು ಆಹಾರ ಸಚಿವರು ಮಾತ್ರ ಇಲ್ಲಿದ್ದಾರೆ, ಕಂದಾಯ ಸಚಿವರು ಎಲ್ಲಿ ? ಪೋಲೀಸ್ ಮಂತ್ರಿಗಳು, ಎಲೆಕ್ಟ್ರಿಸಿಟಿ ಮಂತ್ರಿಗಳು, ಆಹಾರ ಮಂತ್ರಿಗಳು—ಎಲ್ಲವೂ ಅವರೇ ಆಗಬೇಕು. ಆದ್ದರಿಂದ ಇಂದು ಸರ್ಕಾರವಿದೆಯೇ ಎಂಬ ಪ್ರಶ್ನೆ ಬರುತ್ತದೆ. ಏಕೆಂದರೆ ಎಲ್ಲಾ ಮಂತ್ರಿಗಳ ಕೆಲಸ ಆಹಾರ ಮಂತ್ರಿಗಳೊಬ್ಬರೇ ವಹಿಸಬೇಕೆಂದರೆ ಹೇಗೆ ? ಎಲ್ಲಾ ಚೋಟಾ ಮಂತ್ರಿಗಳದೇ ಆಗಿದೆ.

ಶ್ರೀ ಆಲೂರು ಹನುಮಂತಪ್ಪ (ಸಣ್ಣ ನೀರಾವರಿ ಶಾಖೆಯ ಉಪಮಂತ್ರಿಗಳು).—ರೆವಿನ್ಯೂ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಅವರಿಗೆ ಸಂಬಂಧಪಟ್ಟ ಮಸೂದೆ ಚರ್ಚೆಯಾಗುತ್ತಿರುವುದರಿಂದ ಅಲ್ಲಿ ಇದ್ದಾರೆ. ಮಾನ್ಯ ಸದಸ್ಯರಿಗೆ ಆ ಮಂತ್ರಿಗಳಿಗೆ ಸಂಬಂಧಪಟ್ಟ ವಿಷಯವಾಗಿ ಏನು ಬೇಕಾದರೂ ಅದನ್ನು ಕೂಲಂಕಷವಾಗಿ ಬರೆದುಕೊಂಡು ಉತ್ತರ ಕೊಡಲು ನಾನು ತಯಾರಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಜಿಲ್ಲಾಧಿಕಾರಿಗಳ ಸಮ್ಮೇಳನ ನಡೆಯುತ್ತಿದೆ. ಕೆಲವರು ಅಲ್ಲಿಗೆ ಹೋಗಿದ್ದಾರೆ.

ಶ್ರೀ ಅಜೀಜ್ ಸೇಟ್.—ಜಿಲ್ಲಾಧಿಕಾರಿಗಳ ಸಮ್ಮೇಳನ ಈ ಸಭೆಗಿಂತ ಜಾಸ್ತಿಯೇ? ಹಾಗಿದ್ದ ಪಕ್ಷದಲ್ಲಿ ನಾವು ಇಲ್ಲಿ ಮಾತನಾಡಿ ಏನು ಪ್ರಯೋಜನ?

ಶ್ರೀ ಎಚ್. ಸಿದ್ದವೀರಪ್ಪ.—ಅಧಿಕಾರಿಗಳ ಸಭೆ ಶಾಸನ ಸಭೆಗಿಂತ ಮುಖ್ಯವೆಂದು ಅವರು ಹೇಳಿದರೆ ಈ ಶಾಸನ ಸಭೆಯನ್ನು ಮುಂದಕ್ಕೆ ಹಾಕಿ, ಅವರು ಅಲ್ಲಿಗೇ ಹೋಗಲಿ.

ಶ್ರೀ ಎಸ್. ಶಿವಪ್ಪ.—ಉಪಮಂತ್ರಿಗಳೂ ಸಹ ಇಲ್ಲ.

(Sri B. Rachaiah entered the House)

ಶ್ರೀ ಬಿ. ರಾಚಯ್ಯ.—ದಯವಿಟ್ಟು ಕ್ಷಮಿಸಬೇಕು. ನಾನು ಮೇಲ್ಮನೆಯಲ್ಲಿ ಇದ್ದೆ. ಕ್ಷಾಮ ಪರಿಸ್ಥಿತಿಯ ಬಗ್ಗೆ ಚರ್ಚೆ ಆರಂಭವಾಗಿದೆಯೆಂದು ತಿಳಿದಕೂಡಲೇ ಅಲ್ಲಿಂದ ಈಗತಾನೆ ಇಲ್ಲಿಗೆ ಬಂದೆ.

ಶ್ರೀ ಎಚ್. ಸಿದ್ದವೀರಪ್ಪ.—ನಿಮ್ಮ ಉಪಸಚಿವರು ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿ; ನಾವು ವಿಧಾನಪರಿಷತ್ತಿನಲ್ಲಿ; ನಾವು ಇಲ್ಲಿದ್ದುಕೊಂಡು ದೇವರ ಪೂಜೆಗೆ ಸಾಮಾನುಗಳನ್ನು ತಂದುಕೊಡಿ, ದೇವರ ಪೂಜೆ ಮಾಡುತ್ತೇವೆ.

†ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಕಳೆದ ಎರಡು ವರ್ಷಗಳಿಂದಲೂ ಕೂಡ ಈ ದೇಶದಲ್ಲಿ ಕ್ಷಾಮವನ್ನು ಕಂಡಿದ್ದು ಆಯಿತು. ಮೂರನೆಯ ವರ್ಷವೂ ಮಳೆ ಬಾರದೆ, ಬೆಳೆ ಇಲ್ಲದೆ ಕೆರೆಗಳಿಗೆ ನೀರು ಬಾರದೆ ಅವು ಒಣಗಿಹೋಗಿವೆ. ಇವತ್ತು ಅಭಾವ ಪರಿಸ್ಥಿತಿಗೊಳಗಾಗಿರುವ ಜನಗಳು ಕಂಗೆಟ್ಟು ಹಾಹಾಕಾರಪಡುತ್ತಿದ್ದಾರೆ. ಅವರ ಜೀವನದ ಕಠಿಣ ಪರಿಸ್ಥಿತಿ ಎಲ್ಲಾ ಕಡೆಯೂ ಎದ್ದು ಕಾಣುತ್ತಿದೆ. ಅವರು ತಮ್ಮ ಹೊಟ್ಟೆಯನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಹಳ್ಳಿಗಾಡುಗಳಲ್ಲಿ ಅದರಲ್ಲಿಯೂ ರೈತರು ತಮ್ಮ ಮನೆಮಠಗಳನ್ನೂ, ದನಕರುಗಳನ್ನೂ, ಅಡುಕುರಿಗಳನ್ನೂ ಮತ್ತು ಪಾತ್ರೆಗಳನ್ನೂ ಮಾರಿ ಹೊಟ್ಟೆಪಾಡನ್ನು ಸಾಗಿಸುತ್ತಿದ್ದಾರೆ. ಕಡು ಬಡವರು ಎಲ್ಲಾ ಕಡೆಗಳಲ್ಲಿಯೂ ಇದ್ದಾರೆ. ಅವರ ಮಕ್ಕಳು ಬೆತ್ತಲೆಯಲ್ಲಿರುವ ಚಿತ್ರವನ್ನೂ ಸಹ ನಾವು ಅನೇಕ ಕಡೆಗಳಲ್ಲಿ ನೋಡುತ್ತಿದ್ದೇವೆ. ಈಗ ಮೂರನೆಯ ವರ್ಷ ಮಳೆ ಹೋಗಿದೆ. ಕಳೆದ ಎರಡು ವರ್ಷಗಳಿಂದಲೂ ಮನೆಯಲ್ಲಿದ್ದುದನ್ನೆಲ್ಲಾ ಮಾರಿ ಹೊಟ್ಟೆ ಹೊರೆದುಕೊಂಡರು. ಈ ಸಾರಿ ಅದೂ ಇಲ್ಲ. ಮಳೆ ಇಲ್ಲ, ಬೆಳೆ ಇಲ್ಲ, ಆಹಾರವಿಲ್ಲ. ಇಂತಹ ಪರಿಸ್ಥಿತಿಯನ್ನು ದೇಶದಲ್ಲಿ ನಾವು ಈಗ ನೋಡುತ್ತಿದ್ದೇವೆ. ಇಂತಹ ಘೋರ ಪರಿಸ್ಥಿತಿ ಇರುವಾಗ ಕಂದಾಯ ಸಚಿವರು ಈ ಸಭೆಯ ಮುಂದೆ ನಮ್ಮ ದೇಶದ ಈಗಿನ ಅಭಾವ ಪರಿಸ್ಥಿತಿಯನ್ನು ನೀಗುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆಂಬ ಪಟ್ಟಿಯನ್ನು ಅವರು ಅಚ್ಚು ಹಾಕಿಸಿ ನಮ್ಮ ಕೈಗೆ ಕೊಟ್ಟಿದ್ದಾರೆ. ಇದರಲ್ಲಿ ಏನಿದೆಯೆಂದರೆ, ಈ ಸಮಸ್ಯೆ ಬಹಳ ದೊಡ್ಡದು, ಜನಗಳು ಹೊರಗೆ ಬಹಳವಾಗಿ ಒದ್ದಾಡುತ್ತಿದ್ದಾರೆಂದು ಒಪ್ಪಿಕೊಂಡಮೇಲೆ ಅವರು ಕೊಟ್ಟಿರತಕ್ಕ ಪರಿಹಾರ ಹೇಗಿದೆಯೆಂದರೆ, ಸಮುದ್ರದಲ್ಲಿ ಒಂದು ತೊಟ್ಟು ನೀರು ಹಾಕಿದರೆ ಅದು ಯಾವರೀತಿ ತುಂಬೀತು, ಆ ರೀತಿಯಾಗಿದೆ. ಬಾವಿಗಳನ್ನು ತೋಡುವ ಕೆಲಸ, ಮಣ್ಣಿನ ಕಾಮಗಾರಿ, ಇತರ ಸಾಮಾನ್ಯ ಕೆಲಸಗಳು, ನೀರಾವರಿ ಬಾವಿಗಳ ಕೆಲಸ—ಇವನ್ನು ಮಾಡುತ್ತಿದ್ದೇವೆಂದು ಹೇಳುತ್ತಾರೆ. ಒಂದನೇ, ಎರಡನೇ ಮತ್ತು ಮೂರನೇ ಪಂಚವಾರ್ಷಿಕ ಯೋಜನೆಗಳಲ್ಲಿಯೂ ಇವನ್ನೇ ಮಾಡುತ್ತಿದ್ದೇವೆಂದು ಹೇಳಿದರು. ಈಗಲೂ ಅದನ್ನೇ ಒಂದೇ ಪಾಠವನ್ನು ಹೇಳುತ್ತಿದ್ದಾರೆ. ಕ್ಷಾಮನಿವಾರಣೆಗೋಸ್ಕರವಾಗಿ ಬಂದಿರತಕ್ಕ ಇಂತಹ ಉತ್ಕಟ ಪರಿಸ್ಥಿತಿಯಲ್ಲಿ ವಿಶೇಷವಾದ ಜನರ ಬೇಡಿಕೆಗಳಿಗೆ ಇವರು ಅಷ್ಟಾಗಿ ಗಮನ ಕೊಡುತ್ತ ಇಲ್ಲ. ಅವರ ವಿಶೇಷವಾದ ಬೇಡಿಕೆಗೆ ಸಾಕಷ್ಟು ಹಣವನ್ನು ಕೊಟ್ಟಿಲ್ಲ. ಪಿ. ಡಬ್ಲ್ಯು. ಡಿ. ತಾಲ್ಲೂಕುಬೋರ್ಡ್, ರೆವಿನ್ಯೂ ಇಲಾಖೆ ಮುಖಾಂತರ ತಕಾವಿ ಸಾಲಗಳನ್ನು ಕೊಡುತ್ತೇವೆ, ಪಿ. ಡಬ್ಲ್ಯು. ಡಿ. ಮುಖಾಂತರ ಮೈನರ್ ಇರಿಗೇಷನ್ ಕೆಲಸಗಳನ್ನು ಮಾಡಿಸುತ್ತೇವೆಂದು ಹೇಳುತ್ತಾರೆ. ಆದರೆ ಕ್ಷಾಮನಿವಾರಣೆಗೋಸ್ಕರ, ಪರಿಹಾರಕ್ಕೋಸ್ಕರ ಎಷ್ಟು ಹಣವನ್ನು ಕೊಡುತ್ತಿದ್ದೇವೆಂದು ನಿಗದಿಯಾಗಿ, ವಿವರವಾಗಿ ಹೇಳಲಿಲ್ಲ. ಅಲ್ಲಿ ಸೇರಿಸಿದ್ದೇವೆ, ಇಲ್ಲಿ ಸೇರಿಸಿದ್ದೇವೆಂದು ಕಣ್ಣಿಗೆ ಮಣ್ಣು ಎರಚುವ ಕೆಲಸವನ್ನು ಮಾಡುತ್ತಿದ್ದಾರೆ. ಹಾಹಾಕಾರದಿಂದ ಜನ ಸಾಯುತ್ತಿದ್ದಾರೆ.

ಅಂತಹವರಿಗೆ ಏನೂ ಸಹಾಯವಿಲ್ಲ. ಇವತ್ತು ಕೆರೆಗಳಿಗೆ ನೀರು ಇಲ್ಲ. ಬೆಳೆ ಹೋಗಿರುವ ರೈತರ ಸಂಖ್ಯೆಯ ಜೊತೆಗೆ ಆಹಾರ ಭೂಮಿಯ ಕೆಳಗೆ ಹೋಗಿ ಎಷ್ಟೋ ಜನರಿಗೆ ಆಹಾರವಿಲ್ಲದೆ ತೊಂದರೆ ಪಡುತ್ತಿದ್ದಾರೆ, ಎಷ್ಟರಮಟ್ಟಿಗೆ ಆಹಾರೋತ್ಪತ್ತಿ ಆಗಿದೆ, ದನಗಳಿಗೆ ಮೇವು ಇಲ್ಲದೆ ಎಷ್ಟು ಹೋಗಿವೆ, ಎಷ್ಟೊಂದು ಜನಗಳು ಮನೆಗಳನ್ನು ಮಾರಿ ಬೆತ್ತಲೆಯಾಗಿದ್ದಾರೆ ಎಂಬ ಬಗ್ಗೆ ಸರ್ಕಾರ ದವರು ಅಂಕಿಅಂಶಗಳನ್ನು ಕೊಡಲಿ ಎಂದು ನಾನು ಕೇಳುತ್ತೇನೆ. ಎಷ್ಟು ಜನ ರೈತರು ಸಾಲ ಮಾಡಿ ಸಾಲಗಾರರಾಗಿದ್ದಾರೆಂಬುದನ್ನು ಕೊಡಲಿ ಇವು ಯಾವೊಂದೂ ಕೊಟ್ಟಿಲ್ಲ. ಅಂಕಿ ಅಂಶಗಳು ಇವರಲ್ಲಿಲ್ಲ. ಇನ್ನು ರಿಲೀಫ್ ಮೆಷರ್ಸ್ ಬೇಕಾದಷ್ಟು ಮಾಡಿದ್ದೇವೆಂದು ಹೇಳುತ್ತಾರೆ. ಬೆಂಗಳೂರು ಡಿವಿಷನ್ನಿಗೆ 6 ಲಕ್ಷ ರೂಪಾಯಿಗಳನ್ನು ಮತ್ತು ಬೆಳಗಾಂಗೆ 11 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ ಎಂಬುದಾಗಿ ಹೇಳುತ್ತಾರೆ. ಸಾಮಾನ್ಯವಾಗಿ ಒಂದು ಜಿಲ್ಲೆಯಲ್ಲಿ ಎಷ್ಟು ಜನರಿದ್ದಾರೆ, ಎಷ್ಟೊಂದು ಗ್ರಾಮಗಳಿವೆ, ಎಂಬುದನ್ನು ಸರ್ಕಾರದವರು ಯೋಚನೆಮಾಡಿ ಹಣ ಸಹಾಯ ಮಾಡಬೇಕು. ಈ ರೀತಿ ಕ್ಷಾಮನಿವಾರಣೆಗೆ ಎಂದು ಕೇವಲ 10–11 ಲಕ್ಷರೂಪಾಯಿಗಳನ್ನು ಮಾತ್ರ ಕೊಟ್ಟರೆ ಒಂದೊಂದು ಜಿಲ್ಲೆಗೆ ಕೇವಲ 2 ಲಕ್ಷವೂ ಆಗಿಲ್ಲ. ಹಾಸನ ಜಿಲ್ಲೆಯ ಲೆಕ್ಕವನ್ನು ಹೇಳುವುದಾದರೆ ಕಳೆದ 3 ವರ್ಷಗಳಿಂದ ಬೆಳೆ ಇಲ್ಲದೆ ಹೋಗಿದೆ. ಈ ವರ್ಷ ಸುತರಾಂ ಮಳೆ ಇಲ್ಲ. ಸುಮಾರು 10 ಲಕ್ಷ ಜನಗಳು ಇರುವ ಜಿಲ್ಲೆ. ಸುಮಾರು 5 ಲಕ್ಷ ಜನ ಹೊಟ್ಟೆ ತುಂಬ ತಿನ್ನಬಹುದು. ಇನ್ನು ಮಿಕ್ಕ 5 ಲಕ್ಷ ಜನಗಳು ಹಸಿವಿಗೆ ತುತ್ತಾಗುತ್ತಿದ್ದಾರೆ. ಈ 5 ಲಕ್ಷ ಜನರಿಗೆ ಕೂಲಿಕೊಟ್ಟು ಕಾಪಾಡ ಬೇಕಾದರೆ ಏನು ಮಾಡುತ್ತೀರಿ ಎಂಬುದಕ್ಕೆ ನನಗೆ ಸರ್ಕಾರ ಲೆಕ್ಕ ಕೊಡಲಿ. ಇವತ್ತು ಒಂದು ದಿವಸಕ್ಕೆ ಒಬ್ಬ ಮನುಷ್ಯನಿಗೆ ಕನಿಷ್ಠಪಕ್ಷ ಒಂದು ರೂಪಾಯಿ ಬೇಕು. ಆದ್ದರಿಂದ ಸರ್ಕಾರದವರು 5 ಲಕ್ಷ ರೂಪಾಯಿಗಳನ್ನು ಒಂದು ದಿನಕ್ಕೆ ಖರ್ಚು ಮಾಡುವ ವ್ಯವಸ್ಥೆ ಮಾಡಿದರೆ ಈ ಪ್ರಜಾ ಪ್ರಭುತ್ವದ ಸ್ವಾತಂತ್ರ್ಯ ಕಾಲದಲ್ಲಿ ಈಗಿನ ಅಭಾವಪರಿಸ್ಥಿತಿಯನ್ನು ಎದುರಿಸಬಹುದು. ಒಂದು ಜಿಲ್ಲೆಗೆ ಒಂದು ದಿವಸಕ್ಕೆ ಸರ್ಕಾರದವರು 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು. ಅದನ್ನು ಬಿಟ್ಟು ಕೇವಲ 6–10 ಲಕ್ಷ ರೂಪಾಯಿಗಳನ್ನು ಒಂದೊಂದು ಜಿಲ್ಲೆಗೆ ಅಥವಾ ಡಿವಿಜನ್ನಿಗೆ ಕೊಟ್ಟರೆ ಅದನ್ನು ಕ್ಷಾಮನಿವಾರಣೆಗೆ ಕೊಟ್ಟಿದೆ ಎಂಬುದಾಗಿ ಸರ್ಕಾರದವರು ಯಾವ ರೀತಿ ಹೇಳು ತ್ತಾರೆ ? ಒಬ್ಬೊಬ್ಬ ಮನುಷ್ಯನಿಗೆ ಒಂದೊಂದು ಹೊತ್ತು ಊಟ ಕೊಡಬೇಕಾದರೆ ಈಗ ಕೇವಲ ಒಂದು ರೂಪಾಯಿ ಆದರೂ ಬೇಕು. ಮಾನ್ಯ ಶ್ರೀ ಸಿದ್ಧವೀರಪ್ಪನವರು ಹೇಳಿದಹಾಗೆ ಸರ್ಕಾರ ದವರು ಕ್ಷಾಮನಿವಾರಣೆಗೋಸ್ಕರ ಹಣ ಸಹಾಯ ಮಾಡಿರುವುದರಿಂದ ಒಂದೊಂದು ಕಡಲೆಕಾಯಿ ಬೀಜವನ್ನೂ ಜನಗಳಿಗೆ ಕೊಡುವುದಕ್ಕಾಗುವುದಿಲ್ಲ. ಇಷ್ಟೊಂದು ಕಡಿಮೆ ಹಣವನ್ನು ಕೊಟ್ಟು ಕ್ಷಾಮ ನಿವಾರಣೆಮಾಡುತ್ತೇವೆಂದು ಸರ್ಕಾರದವರು ಹೇಳುವುದು ಒಂದು ಅಪಹಾಸ್ಯಕರ. ಇವತ್ತು ಇದರ ಒಂದು ಘೋರವಾದ ಚಿತ್ರ ದೇಶದ ಮುಂದಿದೆ. ಇವತ್ತು ಇವರು ದೇಶದಲ್ಲಿ ಬದುಕಬೇಕಾದರೆ ಮೊದಲು ಜನತೆಯ ಸಹಾಯ, ಹಾಗೂ ಸಹಕಾರಕ್ಕೆ ಹೋಗಬೇಕು. ಇಲ್ಲದಿದ್ದರೆ ಜನತೆಯ ಈಗಿನ ಒಂದು ಹಸಿವಿನ ಜ್ವಾಲೆ ಬೆಂಕಿ ರೂಪದಲ್ಲಿ ಎದ್ದು ಆ ಜ್ವಾಲೆಗೆ ಇವರು ಈಡಾಗಬೇಕಾಗುತ್ತದೆ. ಜನ ಹಸಿವಿನ ಜ್ವಾಲೆಯಿಂದ ಈಗಾಗಲೇ ರೊಚ್ಚಿಗೆದ್ದಿದ್ದಾರೆ. ಜೀವನದಲ್ಲಿ ಬೇಸತ್ತು ತಮ್ಮ ಜೀವನ ವನ್ನು ಕಳೆದುಕೊಳ್ಳುವುದಕ್ಕೂ ಸಿದ್ಧರಾಗಿದ್ದಾರೆ. ಆದರೆ ಅವರು ಸುಮ್ಮನೆ ಸಾಯುವುದಿಲ್ಲ. ಈ ಸರ್ಕಾರಕ್ಕೆ ಶಾಪ ಹಾಕಿ ಬೆಂಕಿ ಹಚ್ಚಿ ಸಾಯುತ್ತಾರೆ. ದೇಶದಲ್ಲಿ ಈ ಹಸಿವಿನ ಜ್ವಾಲೆಯನ್ನು ನಾವು ಭಯಂಕರವಾಗಿ ನೋಡುತ್ತಿದ್ದೇವೆ. ಈ ದೇಶದ ಮಕ್ಕಳ ಮೈಮೇಲೆ ಬಟ್ಟೆ ಇಲ್ಲ. ರೈತರ ಮನೆಗಳಲ್ಲಿ ಪಾತ್ರೆಗಳಿಲ್ಲ, ಅಷ್ಟೊಂದು ನಿರ್ಗತಿಕರಾಗಿದ್ದಾರೆ. ನಿಜವಾಗಿ ಈ ಸರ್ಕಾರ ಅಂತಹ ಜನರನ್ನು ನೋಡಿದೆಯೇ ?

ಇವೊತ್ತು ಈ ಪರಿಸ್ಥಿತಿಯಲ್ಲಿ ದೇಶದಲ್ಲಿ ಸಹಸ್ರಾರುಹಳ್ಳಿಗಳಲ್ಲಿ ಈ ಒಂದು ನಗ್ನ ಚಿತ್ರ ಇದೆ. ಅದನ್ನು ಪರಿಹಾರ ಮಾಡಬೇಕಾಗಿದ್ದರೆ ಯುದ್ಧ ಸಮಯದಲ್ಲಿ ಯಾವ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಂಡು ಕೆಲಸ ಕಾರ್ಯಗಳನ್ನು ಮಾಡುತ್ತಾರೆಯೋ ಆ ರೀತಿ ಮಾಡಿದರೆ ಸಾಧ್ಯವೇ ಹೊರತು ಬರೀ ನಾಮಕಾವಸ್ತೆಗೆ ಮಾಡಿದರೆ ಏನೂ ಸಾಧ್ಯವಿಲ್ಲ ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಹೇಳುತ್ತೇನೆ. ರೈತನ ವಿಷಯದಲ್ಲಿ ನಿಮಗೆ ಕರುಣೆ ಇದ್ದ ಪಕ್ಷದಲ್ಲಿ ಒಂದೊಂದು ಹಳ್ಳಿಯಲ್ಲಿಯೂ, ಪಂಚಾಯ್ತಿ ಕ್ಷೇತ್ರಗಳಲ್ಲೂ ಡಿಪೋಗಳನ್ನು ತೆರೆದು ಸಬ್ಸಿಡಿ ಕೊಟ್ಟು ಒಂದು ರೂಪಾಯಿಗೆ ಒಂದು ಸೇರು ಅಕ್ಕಿಯಂತೆ ಮಾರಿದರೆ ಸಾಕು. ಎಷ್ಟೋ ಕೋಟಿ ರೂಪಾಯಿಗಳನ್ನು ನಾನಾ ರೀತಿಯಲ್ಲಿ ಖರ್ಚು ಮಾಡುವಾಗ ದೇಶದ ಜನತೆಗಾಗಿ ಸರ್ಕಾರ ಏತಕ್ಕೆ ಹಣವನ್ನು ಖರ್ಚು ಮಾಡಬಾರದು ? ಆದ್ದರಿಂದ ಎಲ್ಲಾ ಹಳ್ಳಿಗಳಲ್ಲಿಯೂ ಸರ್ಕಾರದವರೇ ನೇರವಾಗಿ ಡಿಪೋಗಳನ್ನು ತೆರೆದು ಜನಗಳಿಗೆ ಆಹಾರವನ್ನು ಹಂಚುವ ಕೆಲಸವನ್ನು ಮಾಡಬೇಕು. ಕಂದಾಯವನ್ನು ರದ್ದು ಮಾಡಬೇಕು. ಕಳೆದ ಮೂರು ವರ್ಷಗಳಿಂದ ಮಳೆಬಾರದೆ ಬೆಳೆ ಹೋಗಿರತಕ್ಕ ಪ್ರದೇಶಗಳಲ್ಲಿ ಕಂದಾಯವನ್ನು ರದ್ದು ಮಾಡುವುದಕ್ಕೆ ಸರ್ಕಾರಿ ಆಜ್ಞೆಯನ್ನು ಹೊರಡಿಸಬೇಕು ಎಂದು ನಾನು ತಮ್ಮಲ್ಲಿ ಆಗ್ರಹದಿಂದ ಬೇಡಿಕೆ

(ಶ್ರೀ ಎಸ್. ಶಿವಪ್ಪ)

ಯನ್ನು ಇಡುತ್ತಿದ್ದೇನೆ. ಅದಕ್ಕಿಂತ ಹೆಚ್ಚಾಗಿ ನಮ್ಮ ದೇಶದಲ್ಲಿ ಗೋಸಂಪತ್ತು ನಾಶವಾಗುವ ಪರಿಸ್ಥಿತಿ ಬಂದಿದೆ. ಆ ಗೋವುಗಳಿಗೆ ಮೊದಲು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು. ಗೋಸಂಪತ್ತು ಪೂಜಾರ್ಹವಾದುದು. ಅದರಲ್ಲೂ ನಿಮ್ಮ ಕಾಂಗ್ರೆಸ್ಸಿನವರ ಚುನಾವಣೆಯ ಚಿನ್ಹೆ ಬಸವಣ್ಣ. ಆದರೂ ಕೂಡ ಆ ಬಸವಣ್ಣನ ಮೇಲೆ ನಿಮಗೆ ಕರುಣೆ ಇಲ್ಲವೇ? ಇಲ್ಲಿ ನಾನು ಹೇಳತಕ್ಕದ್ದು ಜೀವ ಇರತಕ್ಕ ಬಸವಣ್ಣನ ವಿಷಯ. ಅದಕ್ಕೋಸ್ಕರ ದನಕರುಗಳಿಗೆ ಮೇವಿನ ವ್ಯವಸ್ಥೆ ಯನ್ನು ಮಾಡಿ. ರಿಲೀಫ್ ಕಾಮಗಾರಿಗಳನ್ನು ನೆಪಮಾತ್ರಕ್ಕೆ ಮಾಡಬೇಡಿ. ಅದು ಸಾಲದು. ಎಲ್ಲೆಲ್ಲಿ ಕೆರೆ ರಿಪೇರಿ ಕೆಲಸ, ಕೆರೆಯಲ್ಲಿ ಹೂಳು ತೆಗೆಸುವ ಕೆಲಸ, ರಸ್ತೆ ಕೆಲಸ, ಗೋಕಟ್ಟೆಯ ಕೆಲಸ ಇದೆಯೋ ಅದನ್ನೆಲ್ಲಾ ಮಾಡಬೇಕು. ಎಲ್ಲೆಲ್ಲಿ ನೀರಾವರಿ ಯೋಜನೆಯನ್ನು ಮಾಡುತ್ತೀರೋ ಅಲ್ಲಿ ಮಣ್ಣು ಕಾಮಗಾರಿಗಳನ್ನು ಮಾಡಿಸುವುದು, ಕಾಲುವೆ ಕೆಲಸಗಳನ್ನು ಮಾಡಿಸುವುದು ಇವುಗಳನ್ನೆಲ್ಲಾ ಪರಿಹಾರ ಕಾಮಗಾರಿಗಳಲ್ಲಿ ಸೇರಿಸಿಕೊಂಡು ಅದಕ್ಕೆ ಹೆಚ್ಚಿನ ಹಣವನ್ನು ಹಾಕಿದರೆ ಎಲ್ಲರಿಗೂ ಕೆಲಸ ಸಿಕ್ಕುತ್ತದೆ.

ಆಮೇಲೆ ಎಲ್ಲಕ್ಕಿಂತ ಹೆಚ್ಚಾಗಿ ನಾನು ಸಲಹೆ ಮಾಡತಕ್ಕದ್ದು ಕ್ರಾಪ್ ಇನ್‌ಷ್ಯೂರೆನ್ಸ್–ಬೆಳೆಯ ವಿಮೆಯನ್ನು ಜಾರಿಗೆ ತರಬೇಕು. ಯಾವ ರೈತ ಬೆಳೆಯನ್ನು ಬೆಳೆಯುತ್ತಾನೆಯೋ ಅವನ ಫಸಲನ್ನು ವಿಮೆ ಮಾಡಬೇಕು. ಕ್ಷಾಮ ಕಾಲದಲ್ಲಿ, ಮಳೆ ಹೋದಾಗ ರೈತನಿಗೆ ಲುಕ್ಸಾನು ಆಗುತ್ತದೆ. ಅಂಥಾ ಸಂದರ್ಭದಲ್ಲಿ ಕ್ರಾಪ್ ಇನ್‌ಷ್ಯೂರೆನ್ಸ್ ಮಾಡಿಸಿದ್ದರೆ ರೈತನಿಗೆ ಅನುಕೂಲವಾಗುತ್ತದೆ.

ಇನ್ನು ಆಹಾರ ಸಚಿವರಿಗೆ ಪಾಪ ಯಾವ ಯಾವ ಇಲಾಖೆಗಳನ್ನೋ ಸೇರಿಸುತ್ತಾರೆ. ಅವರ ಗಮನವನ್ನು ಆಹಾರ ಪರಿಸ್ಥಿತಿಯ ಕಡೆಗೆ ಸೆಳೆಯಬೇಕು. ಈ ಲೆವಿ ಪದ್ಧತಿ ಇದೆ ಇದರಿಂದ ರೈತರಿಗೆ ತುಂಬಾ ಹಿಂಸೆಯಾಗುತ್ತಿದೆ. 150 ರೂಪಾಯಿ ಧಾರಣೆ ಇರತಕ್ಕ ವಸ್ತುವಿಗೆ, ಧಾನ್ಯಕ್ಕೆ ಸರ್ಕಾರದವರು 50 ರೂಪಾಯಿಗಳನ್ನು ಕೊಡುತ್ತಾರೆ. ರೈತರಿಗೆ ಎರಡು ಎಕರೆ ಇರಲಿ, 10 ಎಕರೆ ಇರಲಿ ಪ್ರತಿಯೊಬ್ಬರೂ ಕೂಡ ಎಕರೆಗೆ ಇಷ್ಟು ಲೆವಿ ಕೊಡಬೇಕೆಂದು ಒಂದು ಸುಗ್ರೀವಾಜ್ಞೆಯನ್ನು ಸರ್ಕಾರದವರು ಹೊರಡಿಸಿದ್ದಾರೆ. ಆ ಆಜ್ಞೆಯನ್ನು ಪರಿಪಾಲನೆ ಮಾಡತಕ್ಕ ಸೈನಿಕರು ಏನಿದ್ದಾರೆಯೋ ಅವರು ರೈತರ ಮೇಲೆ ಧಾಳಿ ಮಾಡುತ್ತಿದ್ದಾರೆ. ರೈತರು ಆಹಾರವನ್ನು ಬೆಳೆಯಲಿ, ಬೆಳೆಯದೇ ಇರಲಿ ಅವನಿಗೆ ನೋಟೀಸ್ ಕೊಟ್ಟು ಅವನಿಂದ ಮೊದಲು ಲೆವಿಯನ್ನು ವಸೂಲು ಮಾಡುತ್ತಾರೆ. ಈ ತರಹ ಕಟ್ಟಾಜ್ಞೆಯನ್ನು ಮಾಡಿದ್ದಾರೆ. ಅವಿದ್ಯಾವಂತರಾದ ರೈತರು ಪಡಬಾರದ ಕಷ್ಟಗಳನ್ನು ಪಟ್ಟಿದ್ದಾರೆ. ಬತ್ತವನ್ನು ಮಿಲ್ ಮಾಡಿಸಲು ಮಿಲ್ಲಿಗೆ ಒಂದು ಗಾಡಿ ಹೋದರೆ ಮೊದಲು ನಮಗೆ ಲೆವಿ ಕೊಡಿ ಎಂದು ಅರ್ಧ ಮೂಟೆಯನ್ನು ಮಿಲ್ಲಿನವರು ಹೊತ್ತುಕೊಂಡು ಹೋಗುತ್ತಾರೆ. ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಹೋದರೆ ಅಲ್ಲಿ ಹಿಂಸೆಯನ್ನು ಮಾಡುತ್ತಾರೆ. ಆ ರೀತಿ ಲೆವಿ ಮೂಲಕ ಆಹಾರ ಧಾನ್ಯವನ್ನು ರೈತರಿಂದ ವಸೂಲು ಮಾಡತಕ್ಕ ಪದ್ಧತಿಯಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಇದನ್ನು ವಜಾ ಮಾಡಬೇಕು. ಇದರಿಂದ ಪ್ರಯೋಜನವಿಲ್ಲ. ಸರ್ಕಾರದವರಿಗೆ ಆಹಾರ ಧಾನ್ಯ ಬೇಕಾದರೆ ಮಾರು ಕಟ್ಟೆಯಲ್ಲಿ ಕೊಂಡುಕೊಳ್ಳಲಿ. ಸಬ್ಸಿಡಿ ಕೊಟ್ಟು ಜನಗಳಿಗೆ ಹಂಚಲಿ. ಇವೊತ್ತು ಆಹಾರ ಪದಾರ್ಥಗಳನ್ನು ಬೆಳೆಯತಕ್ಕ ರೈತನಿಂದ ಲೆವಿ ವಸೂಲು ಮಾಡಲು ಸುಗ್ರೀವಾಜ್ಞೆಯನ್ನು ಮಾಡಿ ಬಹುತೇಕ ರೈತರು ಕಷ್ಟಕ್ಕೀಡಾಗಿದ್ದಾರೆ. ಹಳ್ಳಿಗಳಲ್ಲಿ ರೈತರು ಅಧಿಕಾರಿಗಳ ಚಿತ್ರ ಹಿಂಸೆಗೆ ಗುರಿಯಾಗಿದ್ದಾರೆ. ಇಷ್ಟೊಂದು ಕಷ್ಟಕ್ಕೆ ಒಳಗಾಗಿರುವ ರೈತರು ಬೇಜಾರಾಗಿದ್ದಾರೆ ಬೇಸತ್ತಿದ್ದಾರೆ. ಅನ್ನವನ್ನು ಸೃಷ್ಟಿಮಾಡತಕ್ಕ ರೈತನಿಗೆ ತೊಂದರೆಯನ್ನು ಕೊಡಬೇಡಿ. ಆಹಾರ ಧಾನ್ಯಕ್ಕಾಗಿ ಅಮೇರಿಕಾ ಮುಂತಾದ ದೇಶಗಳಿಗೆ ಭಿಕ್ಷಾಪಾತ್ರೆಯನ್ನು ಒಡ್ಡಿಕೊಂಡು ಹೋಗುವ ಬದಲು ನಿಮ್ಮ ಸಹೋದರನಾದ ರೈತನಿಗೆ ಬೆನ್ನುತಟ್ಟಿ ಅವನು ಆಹಾರವನ್ನು ಉತ್ಪಾದನೆ ಮಾಡುವುದಕ್ಕೆ ಪ್ರೋತ್ಸಾಹವನ್ನು ಕೊಡಿ. ಅವನಿಗೂ ಮರ್ಯಾದೆ ಇರುತ್ತದೆ, ನಿಮಗೂ ಮರ್ಯಾದೆ ಇರುತ್ತದೆ. ಇವೊತ್ತು ನೀವು ರೈತನಿಗೆ ಲೆವಿ ವಸೂಲು ಮಾಡಲು ಹಿಂಸೆ ಕೊಟ್ಟು ಅವನ ಮೂಳೆಯನ್ನು ಮುರಿಯ ತಕ್ಕ ಕೆಲಸವನ್ನು ಮಾಡಬಾರದು. ಅದನ್ನು ಮಾಡಿದರೆ ರೈತ ನಿಮ್ಮ ಬೆನ್ನು ಮೂಳೆಯನ್ನು ಮುರಿದಾನು. ಆ ರೀತಿ ಮಾಡಬಾರದು. ನಾನು ಇನ್ನು ಹೆಚ್ಚು ಮಾತನಾಡುವುದಕ್ಕೆ ಅವಕಾಶವಿಲ್ಲ. ಇಲ್ಲಿ ಈಗ ಆಹಾರ ಸಚಿವರೂ ಇದ್ದಾರೆ. ಕಂದಾಯ ಸಚಿವರೂ ಇದ್ದಾರೆ. ಇವೊತ್ತು ಈ ಅಭಾವ ಪರಿಸ್ಥಿತಿಯಿಂದಾಗಿ ರೈತ ದೇಶದಲ್ಲಿ ಅಪಾರವಾದ ತೊಂದರೆಗೀಡಾಗಿದ್ದಾನೆ. ಆದ್ದರಿಂದ ಅವನಿಗೆ ಸರ್ಕಾರದವರು ಸಹಾಯ ಮಾಡಬೇಕು. ಮತ್ತು ಯುದ್ಧ ಸಮಯದಲ್ಲಿ ಯಾವ ರೀತಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸಕಾರ್ಯಗಳನ್ನು ಮಾಡುತ್ತಾರೆಯೋ ಅದೇ ರೀತಿ ಈ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಲು ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡಿದರೆ ಇದನ್ನು ಪರಿಹಾರ ಮಾಡುವುದಕ್ಕೆ ಸಾಧ್ಯ. ಇಲ್ಲದಿದ್ದರೆ ಸಾಧ್ಯವಿಲ್ಲ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ (ಹೊಸಪೇಟೆ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಒಂದು ಅಭಾವ ಪರಿಸ್ಥಿತಿಯು ನಮ್ಮ ಮೈಸೂರು ರಾಜ್ಯದಲ್ಲಿ ಬಯಲು ಸೀಮೆಯಲ್ಲಿ ವರ್ಷಕ್ಕೆ 30–40 ಇಂಚು ಮಳೆ ಬೀಳತಕ್ಕ ಪ್ರದೇಶದಲ್ಲಿ ಬಹಳ ಅಧಿಕವಾಗಿ ತಲೆದೋರುತ್ತಿದೆ. ಈ ವಿಷಯದಲ್ಲಿ ನನಗೆ ತಿಳಿದಮಟ್ಟಿಗೆ ಈ ಸಭೆಯಲ್ಲಿ ಅನೇಕ ಸಾರಿ ಚರ್ಚೆಯಾಗಿದೆ. ಈ ದೇಶದಲ್ಲಿ ಅಭಾವ ಪರಿಸ್ಥಿತಿ ಬಂದಾಗ, ಅಭಾವ ಪೀಡಿತ ಪ್ರದೇಶಗಳಲ್ಲಿ ಏನೇನು ಪರಿಹಾರ ಕಾಮಗಾರಿಗಳನ್ನು ಮಾಡಬೇಕೋ ಅದನ್ನೆಲ್ಲಾ ಸರ್ಕಾರದವರು ಅನೇಕ ಸಲ ಮಾಡಿದ್ದಾರೆ. ಅದಕ್ಕಾಗಿ ಸರ್ಕಾರದವರು ಹಣವನ್ನು ಖರ್ಚು ಮಾಡತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಈಗ 2–3 ವರ್ಷಗಳ ಹಿಂದೆ ಈ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಬೇಕಾದರೆ ಶಾಶ್ವತವಾದ ಕೆಲಸಗಳನ್ನು ಮಾಡಿಸಬೇಕು ಎಂದು ಒಂದು ಯೋಜನೆಯನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಸಬ್‌ಡಿವಿಜನ್ ಮಟ್ಟದಲ್ಲಿ ತಯಾರು ಮಾಡಿದರು. ಅವನ್ನು ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆಂದು ನಾನು ಕೇಳಿದ್ದೇನೆ. ನಾನೂ ಸಹ ಅನೇಕ ಸಲ ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಈ ಅಭಾವ ಪೀಡಿತ ಪ್ರದೇಶಗಳಲ್ಲಿ ಒಂದು ಶಾಶ್ವತವಾದ ಕೆಲಸಗಳನ್ನು ಮಾಡುವುದಕ್ಕೆ ಏನು ಒಂದು ಯೋಜನೆಯನ್ನು ತಯಾರುಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆಯೋ ಅದನ್ನು ಕೇಂದ್ರದಲ್ಲಿ ಒತ್ತಾಯ ಮಾಡಿ ಅದಕ್ಕೆ ಕೇಂದ್ರ ಸರ್ಕಾರದವರ ಮಂಜೂರಾತಿಯನ್ನು ಪಡೆದು, ಅದನ್ನು ಕಾರ್ಯಗತ ಮಾಡುವುದಕ್ಕೆ ಹಣವನ್ನು ಪಡೆದುಕೊಂಡು ಈ ಒಂದು ಶಾಶ್ವತವಾದ ಪರಿಹಾರಕಾರ್ಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸಭೆಯ ಮೂಲಕ ಸರ್ಕಾರದವರನ್ನು ಒತ್ತಾಯ ಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಇವತ್ತಿನ ದಿವಸ ಬೆಳೆ ಹಾಳಾಗುತ್ತಿರುವುದಕ್ಕೆ ಮಳೆಯ ಅಭಾವವೇ ಕಾರಣ. ಕಳೆದ ಎರಡು ವರ್ಷಗಳಲ್ಲಿ ಸರಿಯಾಗಿ ಮಳೆಯಾಗಿಲ್ಲ. ಸಮಯಕ್ಕೆ ಸರಿಯಾಗಿ ಮಳೆ ಬರದೆ ಕೈಗೆ ಬರತಕ್ಕಂಥ ಬೆಳೆಯೂ ಸಹ ನಾಶವಾಗಿದೆ. ಬಯಲು ಸೀಮೆ ಮತ್ತು ಮಲೆನಾಡುಗಳಲ್ಲೂ ಸಹ ಮಳೆ ಕಡಿಮೆ ಯಾಗುತ್ತಿದೆ. ಇದಕ್ಕೆ ಕಾರಣ ಮರಗಳನ್ನು ಹೆಚ್ಚು ಹೆಚ್ಚು ಕಡಿಯುತ್ತಿರುವುದು. ತಜ್ಞರುಗಳು ಮತ್ತು ಹಳ್ಳಿಗಳಲ್ಲಿರುವ ಹಿರಿಯರು ಹೇಳುತ್ತಾರೆ, ಹೆಚ್ಚು ಹೆಚ್ಚು ಅರಣ್ಯ ಸಂಪತ್ತು ಇದ್ದರೆ ಕಾಲಕ್ಕೆ ಸರಿಯಾಗಿ ಮಳೆಯಾಗುತ್ತದೆಂದು. ಎಲ್ಲರಿಗೂ ತಿಳಿದಿರುವಂತೆ ಪ್ರತಿಯೊಂದು ಹಳ್ಳಿ ಮತ್ತು ಊರು ಗಳಲ್ಲೂ ಸಹ ಒಂದೊಂದು ಅಶ್ವಥ್‌ಕಟ್ಟೆಯಿರುತ್ತದೆ. ಬಯಲು ಸೀಮೆಗಳಲ್ಲಿ ಇರುವ ಮರಗಳನ್ನೆಲ್ಲಾ ಕಡಿದು ಒಂದೂ ಸಹ ಮರಗಳು ಇಲ್ಲದಂತೆ ಮಾಡಿದ್ದಾರೆ. ಅದಕ್ಕೆ ತಕ್ಕಂತೆ ಮಳೆಯೂ ಸಹ ಕಡಿಮೆಯಾಗುತ್ತಿದೆ. ಇಂತಹ ಪ್ರದೇಶಗಳಲ್ಲಿ ವರ್ಷಕ್ಕೆ ಒಂದು ಬೆಳೆಯೂ ಸಹ ಆಗುವುದಿಲ್ಲ. ಆದ್ದರಿಂದ ಇಂತಹ ಪ್ರದೇಶಗಳಲ್ಲಿ ಶಾಶ್ವತವಾದ ಕಾಮಗಾರಿಗಳನ್ನು ಅಂದರೆ, ಹೆಚ್ಚು ಹೆಚ್ಚು ವೃಕ್ಷಗಳನ್ನು ಬೆಳೆಸುವುದಕ್ಕೆ ಸರ್ಕಾರದವರು ತಕ್ಕ ಏರ್ಪಾಡು ಮಾಡಬೇಕು.

ಶ್ರೀ ಪಿ. ವೆಂಕಟಗಿರಿಯಪ್ಪ.—ಮರಗಳನ್ನು ಕಡಿಯುತ್ತಿರುವುದಕ್ಕೆ ನೀವೇ ಕಾರಣ.

ಶ್ರೀ ಎನ್. ಚಿಕ್ಕೇಗೌಡ.—ಎಲ್ಲರೂ ಕಾರಣ. ಸಂಘಸಂಸ್ಥೆಗಳ ಮೂಲಕ ಬಂಜರು ಭೂಮಿಗಳಲ್ಲಿ ಹೆಚ್ಚು ಹೆಚ್ಚು ಮರಗಳನ್ನು ಬೆಳೆಸುವುದಕ್ಕೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ರೀತಿಯ ಒಂದು ಯೋಜನೆ ಈಗ ಜಾರಿಯಲ್ಲಿದೆ. ಅದನ್ನು ಇನ್ನೂ ಯಶಸ್ವಿಯಾಗಿ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಉದ್ದೇಶಕ್ಕಾಗಿ ಕೇವಲ 300 ರಿಂದ 500 ರೂಪಾಯಿಗಳವರೆಗೆ ಮಾತ್ರ ಒಂದೊಂದು ಕಡೆಗೆ ಟೋಕನ್ ಗ್ರ್ಯಾಂಟ್ ಎಂದು ಕೊಡುತ್ತಿದ್ದೀರಿ. ನಾನು ಸಹ ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟ್ ಆಗಿದ್ದೇನೆ. ಈ ಬಗ್ಗೆ ನನಗೆ ಎಲ್ಲಾ ರೀತಿಯ ಅನುಭವವಾಗಿದೆ. ನೀವು ಕೊಡುತ್ತಿರುವ ಹಣ ಸಾಲದು. ಸಾಗುವಳಿಗೆ ಯೋಗ್ಯವಲ್ಲದಂಥ ಕೆಲವು ಭೂಮಿಗಳಿರುತ್ತವೆ. ಅಂತಹ ಪ್ರದೇಶಗಳಲ್ಲಿ ಮರಗಳನ್ನು ಬೆಳೆಸಲು ರೆವಿನ್ಯೂ ಅಧಿಕಾರಿಗಳ ಅನುಮತಿಯನ್ನು ಕೇಳಿದರೆ ಅವರು ಜಿಲ್ಲಾಧಿಕಾರಿಯವರನ್ನು ಕೇಳಬೇಕೆಂದು ಹೇಳುತ್ತಾರೆ. ಅಂತೂ ಆ ಪ್ರದೇಶದಲ್ಲಿ ಮರಗಳನ್ನು ಬೆಳೆಸಲು ಅನುಮತಿ ತೆಗೆದುಕೊಳ್ಳುವುದರೊಳಗೆ ಮೂರು ವರ್ಷಗಳಾಗುತ್ತದೆ. ಸೂಲಿಬೆಲೆಯಲ್ಲಿರುವ ಒಂದು ಜಮೀನನ್ನು ಈ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬೇಕಾದರೆ 3 ವರ್ಷಕಾಲ ಕಾಯಬೇಕಾಯಿತು. ಈಗ ಎರಡು ಮೂರು ವರ್ಷಗಳಿಂದ ಸರಿಯಾಗಿ ಮಳೆಯಾಗದೆ ಅನೇಕ ಕಡೆಗಳಲ್ಲಿ ಅಭಾವ ಪರಿಸ್ಥಿತಿ ಉಂಟಾಗಿದೆ. ಅಂತಹ ಪ್ರದೇಶಗಳಲ್ಲಿ ಸರ್ಕಾರದವರು ಶಾಶ್ವತವಾದ ಪರಿಹಾರಗಳನ್ನು ಕಂಡುಹಿಡಿಯಬೇಕು. ಒಂದು ರೀತಿಯಲ್ಲಿ ನೋಡಿದರೆ, ಯಾವ ಜಿಲ್ಲೆಯಲ್ಲಿ ಆಗಲೀ, ಯಾವ ತಾಲ್ಲೂಕ್‌ನಲ್ಲಿ ಆಗಲೀ ಅಭಾವ ಪರಿಸ್ಥಿತಿ ಬಂದರೆ ಕೂಡಲೆ ಪರಿಹಾರ ಕಾಮಗಾರಿಗಳನ್ನು ನಡೆಸುವುದಕ್ಕೆ ತಕ್ಕ ಏರ್ಪಾಡು ಇರಬೇಕು. ಈ ರೀತಿ ಮಾಡಿಸುವ ಕಾಮಗಾರಿ ಕೆಲಸಗಳು ಚೆನ್ನಾಗಿರಬೇಕು. ಒಂದು ನಿದರ್ಶನ ಹೇಳುವುದಾದರೆ, ಕೆಲವು ಕಡೆಗಳಲ್ಲಿ ರಸ್ತೆಗಳನ್ನು

(ಶ್ರೀ ಎನ್. ಚಿಕ್ಕೇಗೌಡ)

ಮಾಡಿಸುತ್ತಾರೆ, ಎರಡು ಮೂರು ವರ್ಷಗಳು ಕಳೆದ ಮೇಲೆ ಅಲ್ಲಿ ರಸ್ತೆ ಇರುವುದೇ ತಿಳಿಯುವುದಿಲ್ಲ. ಇಂತಹ ಕೆಲಸಗಳನ್ನು ಮಾಡಿಸುವುದು ಸರಿಯಲ್ಲ. ನಮ್ಮ ಮೈಸೂರು ಸಂಸ್ಥಾನದಲ್ಲಿ ಹೆಸರುವಾಸಿಯಾದ ಸಣ್ಣ ನೀರಾವರಿ ಕೆರೆಗಳಿವೆ. ಅವುಗಳನ್ನು ಜೀರ್ಣೋದ್ಧಾರ ಮಾಡಿ, ಅವುಗಳ ಕೋಡಿ ಮತ್ತು ತೂಬುಗಳನ್ನು ಸರಿಪಡಿಸಿದರೆ, ಮಳೆ ಬಂದಾಗ ನೀರು ಅಲ್ಲಿ ಸರಿಯಾಗಿ ನಿಲ್ಲುತ್ತದೆ. ನಂತರ ಒಂದು ಬೆಳೆಯನ್ನಾದರೂ ಬೆಳೆದುಕೊಳ್ಳುವುದಕ್ಕೆ ರೈತರಿಗೆ ಅನುಕೂಲವಾಗುತ್ತದೆ. ಈ ರೀತಿ ಮಾಡಿಸಲು ಸರ್ಕಾರದವರು ತಮ್ಮಲ್ಲಿ ಹಣವಿಲ್ಲವೆಂದು ಹೇಳುತ್ತಾರೆ. ಈರೀತಿ ಹಣವಿಲ್ಲವೆಂದು ಹೇಳಿದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. ಮುಖ್ಯವಾಗಿ 1964-65ರಲ್ಲಿ ಮಳೆಬೆಳೆ ಚೆನ್ನಾಗಿ ಆಗಿಲ್ಲ. ಈ ವಿಚಾರ ಎಲ್ಲರಿಗೂ ಗೊತ್ತು. ಮಾನ್ಯ ರೆವಿನ್ಯೂ ಸಚಿವರು ಮತ್ತು ಮುಖ್ಯಮಂತ್ರಿಗಳು ಹೇಳಿದ್ದರು, ಎಲ್ಲಿ ನಾಲ್ಕಾಣಿಗಿಂತ ಕಡಿಮೆ ಬೆಳೆಯಾಗಿದೆ, ಅಂತಹಕಡೆಗಳಲ್ಲಿ ಕಂದಾಯ ವಜಾ ಮಾಡುತ್ತೇವೆ, ಪರಿಹಾರ ಕಾಮಗಾರಿಗಳನ್ನು ಕೈಕೊಳ್ಳುತ್ತೇವೆಂದು. ಆದರೆ ಸರ್ಕಾರದವರು ಜಿಲ್ಲಾಧಿಕಾರಿಗಳಿಗೆ ಎಲ್ಲಿ ನಾಲ್ಕಾಣೆಗಿಂತ ಕಡಿಮೆ ಬೆಳೆಯಾಗಿದೆಯೋ, ಅಂತಹ ಕಡೆಗಳಲ್ಲಿ 6 ಆಣೆ, 8 ಆಣೆ ಬೆಳೆಯಾಗಿದೆಯೆಂದು ಬರೆದು ಸರ್ಕಾರಕ್ಕೆ ಕಳಿಸಬೇಕೆಂದು ಹೇಳಿದರು. ಅದರಂತೆ ಜಿಲ್ಲಾಧಿಕಾರಿಗಳು ಶಾನುಭೋಗರಿಗೆ ನಾಲ್ಕಾಣೆಗಿಂತ ಹೆಚ್ಚು ಬೆಳೆಯಾಗಿದೆಯೆಂದು ಪಾಣಿಯಲ್ಲಿ ಬರೆಯಬೇಕೆಂದು ಹೇಳಿದರು. ಜನರ ಪ್ರತಿನಿಧಿಗಳಾಗಿ ನಾವುಗಳು ಇಲ್ಲಿಗೆ ಬಂದು, ಅವರ ಸೇವೆ ಮಾಡುವುದು ನಮ್ಮ ಕರ್ತವ್ಯ. ಸರ್ಕಾರದವರು ಈ ರೀತಿ ಮಾಡುತ್ತಿರುವುದು ಸರಿಯಲ್ಲ. ನನ್ನ ತಾಲ್ಲೂಕ್‌ನಲ್ಲಿ ಸರಿಯಾಗಿ ಮಳೆಯಾಗದೆ ಬೆಳೆಯಾಗಿಲ್ಲ. ಆದರೆ ಜಿಲ್ಲಾಧಿಕಾರಿಗಳು ನನಗೆ ಮಳೆಬೆಳೆ ಚೆನ್ನಾಗಿ ಆಗಿದೆಯೆಂದು ತಿಳಿಸಿದರು. ನಾನು ಪ್ರತಿಯೊಂದು ಹಳ್ಳಿಗೂ ಹೋಗಿ ನೋಡುತ್ತಿದ್ದೇನೆ. ಎಲ್ಲಿಯೂ ಸಹ ಸರಿಯಾಗಿ ಮಳೆಯಾಗಿಲ್ಲ. ಆದರೆ ಅಧಿಕಾರಿಗಳು ಸರ್ಕಾರಕ್ಕೆ ತಪ್ಪು ವರದಿಯನ್ನು ಕೊಡುತ್ತಿದ್ದಾರೆ. ಈ ಸಭೆಯ ಮೂಲಕ ಸರ್ಕಾರಕ್ಕೆ ತಿಳಿಸುತ್ತೇನೆ. ನಮ್ಮ ಕಡೆ ಶಾಶ್ವತವಾದ ಕಾಮಗಾರಿಗಳನ್ನು ಪ್ರಾರಂಭ ಮಾಡಿಸಬೇಕು. ರೈತರಿಗೆ ಬಹಳ ತೊಂದರೆ ಬಂದಿದೆ. ಚೆನ್ನಾಗಿ ಮಳೆಬೆಳೆಯಾದರೆ ರೈತರು ನಿಮ್ಮನ್ನು ರಾಗಿ, ಜೋಳ ಕೊಡಿ ಎಂದು ಕೇಳುವುದಿಲ್ಲ. ಅವರೇ ನಿಮಗೆ ಕೊಡುತ್ತಾರೆ. ಕೆಲವೊಂದು ಸಾರಿ ಚೆನ್ನಾಗಿ ಮಳೆಬೆಳೆಯಾದಾಗಲೂ ಸಹ ರೈತರಲ್ಲಿ ಸಾಕಷ್ಟು ಹಣವಿರುವುದಿಲ್ಲ. ಇನ್ನೂ ಮಳೆಬೆಳೆಯಾಗದಿದ್ದರೆ ಅವರು ಜೀವನ ಯಾವ ರೀತಿ ಮಾಡಬೇಕು. ಇವತ್ತಿನದಿವಸ ಪಂಜಾಬ್‌ನಲ್ಲಿ ರೈತರಿಗೆ ಸಾಕಷ್ಟು ಸಾಲವನ್ನು ಕೊಡುತ್ತಾರೆ, ಬಾವಿಗಳನ್ನು ತೋಡಿಸಿಕೊಡುತ್ತಾರೆ, ಒಳ್ಳೆಯ ಬೀಜಗಳನ್ನು ಕೊಡುತ್ತಾರೆ. ಆದ್ದರಿಂದ ಅಲ್ಲಿ ಹೆಚ್ಚು ಹೆಚ್ಚು ಆಹಾರಧಾನ್ಯಗಳನ್ನು ಬೆಳೆದು ಮಾದರಿ ಪಂಜಾಬ್ ಎಂದು ಹೆಸರುಗಳಿಸಿದ್ದಾರೆ. ಅದೇರೀತಿ ನಮ್ಮ ರಾಜ್ಯದಲ್ಲೂ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮೊನ್ನೆ ನಾನು ಮೈನ್ ಅಂಡ್ ಜಿಯಾಲಜಿ ಇಲಾಖೆಗೆ ಹೋಗಿದ್ದೆ, ಅಲ್ಲಿ ಕೇವಲ 10 ಬಾವಿ ತೋಡುವ ಉಪಕರಣಗಳಿದ್ದವು. ವ್ಯವಸಾಯ ಕಾಲೇಜಿನ ಇಂಜನಿಯರಿಂಗ್ ಸೆಕ್ಷನ್‌ಗೆ ಹೋಗಿ ನೋಡಿದಾಗ ಅಲ್ಲಿ 50-60 ಬಾವಿ ತೊಡುವ ಉಪಕರಣಗಳಿದ್ದವು. ಆದರೆ ಅವುಗಳನ್ನು ನಡೆಸಲು ತರಬೇತಿ ಪಡೆದಂಥ ಡ್ರೈವರಗಳು ಇಲ್ಲದೆ ಸುಮ್ಮನೆ ಇಟ್ಟುಕೊಂಡಿದ್ದಾರೆ. ನಮ್ಮ ಕಡೆಯಲ್ಲಿ ಕೊಳವೆ ಬಾವಿಗಳನ್ನು ತೋಡಿಸಿಕೊಡಬೇಕೆಂದು ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯವರನ್ನು ಕೇಳಿದರೆ ನಮ್ಮಲ್ಲಿ ಸಾಕಷ್ಟು ಉಪಕರಣಗಳಿಲ್ಲವೆಂದು ಹೇಳುತ್ತಾರೆ. ನಾನು ಈ ಸಭೆಯ ಮೂಲಕ ಸರ್ಕಾರದವರಲ್ಲಿ ಕೇಳಿಕೊಳ್ಳುವುದು ಇಷ್ಟೆ: ನನ್ನ ತಾಲ್ಲೂಕ್‌ನಲ್ಲಿ ಪ್ರತಿಯೊಂದು ಕಡೆಯೂ ಕೊಳವೆ ಬಾವಿಗಳನ್ನು ಹಾಕಿಸಿ ಕೊಡಬೇಕು, ಇದರಿಂದ ರೈತರು ಹೈಬ್ರಿಡ್ ಜೋಳ, ಹೈಬ್ರಿಡ್ ಜವಾರ್ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ತುಮಕೂರು ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆಗಳು ಬಯಲು ಸೀಮೆಯಲ್ಲಿರುವುದರಿಂದ ನಮ್ಮ ರೈತರು ರಾಗಿ ಒಂದನ್ನು ಬಿಟ್ಟು ಬೇರೆ ಬೆಳೆಗಳನ್ನು ಮಳೆಯ ಅಭಾವದ ಕಾರಣ ಬೆಳೆಯುವುದಕ್ಕಾಗುತ್ತಿಲ್ಲ. ಆದ್ದರಿಂದ ರೈತರಿಗೆ ಬಾವಿಗಳನ್ನು ತೋಡಿಸಲು ಸಾಕಷ್ಟು ಸಾಲವನ್ನು ಸರ್ಕಾರದವರು ಕೊಡಬೇಕು. ಇವತ್ತಿನ ದಿವಸ ಬಾವಿಗಳಿಗೆ ಪಂಪ್‌ಸೆಟ್ಟುಗಳನ್ನು ಹಾಕಿಸಿಕೊಳ್ಳಲು ರೈತರಿಗೆ ಸಾಲ ಕೊಡುವ ಅಧಿಕಾರವನ್ನು ರೆವಿನ್ಯೂ ಮತ್ತು ವ್ಯವಸಾಯ ಇಲಾಖೆಯಿಂದ ಭೂ ಅಭಿವೃದ್ಧಿ ಬ್ಯಾಂಕ್‌ಗೆ ವಹಿಸಿದ್ದೀರಿ. ರೈತರು ಅರ್ಜಿ ಹಾಕಿದ ಮೂರು ತಿಂಗಳಲ್ಲಿ ಸಾಲ ಕೊಡಬೇಕೆಂದು ನಿಯಮವಿದ್ದರೂ ಸಹ ಮೂರು ವರ್ಷಗಳಾದರೂ ಸಹ ಸಿಗುತ್ತಿಲ್ಲ. ಕಾಂಗ್ರೆಸ್ ಪಕ್ಷದ ಅನೇಕ ಸದಸ್ಯರು ಈ ವಿಚಾರವನ್ನು ಹೇಳಿದ್ದರೂ ಸಹ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇನ್ನುಮೇಲಾದರೂ ಸಹ ಜಾಗ್ರತೆ ಸಾಲ ಕೊಡುವಂತೆ ಏರ್ಪಾಡು ಮಾಡಬೇಕು.

6-00 P.M.

ಇನ್ನು ಲೆವಿ ಸಿಸ್ಟಂ ಬಗ್ಗೆ ಒಂದು ಮಾತು ಹೇಳುತ್ತೇನೆ. ಲೆಕ್ಕ ಬರೆಯುವ ಶ್ಯಾನುಭೋಗರಿಗೆ ಲೆವೀ ಕಮಿಷನ್ ಎಂದು ಕೊಡಬೇಕಾಗುತ್ತದೆ. ಲೆಕ್ಕ ಬರೆಯುತಕ್ಕಂಥ ಕಾಲದಲ್ಲಿ ಶ್ಯಾನುಭೋಗನು ಹೆಚ್ಚು ಲೆಕ್ಕ ಬರೆದು ಈ ಕಮಿಷನ್ ತೆಗೆದುಕೊಳ್ಳುವುದು ನಡೆದಿದೆ. ಇದರಿಂದ ರೈತರಿಗೆ ಕಿರುಕುಳ ಉಂಟಾಗಿ ಬಹಳ ತೊಂದರೆಯಾಗಿದೆ. ಈ ರೀತಿ ಕಿರುಕುಳವಾಗದಂತೆ ತಿಳಿಸಬೇಕು ಮತ್ತು ಇದನ್ನು ಒಂದು ಸಲ ಪರಿಶೀಲಿಸಿ ಆದಷ್ಟು ಜಾಗ್ರತೆ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡು ರೈತರಿಗೆ ಅನುಕೂಲಮಾಡಿ ಕೊಡಬೇಕು. ಇನ್ನು ಮುಂದೆಯಾದರೂ ರೈತರು ಅಭಾವ ಪರಿಸ್ಥಿತಿಯಿಂದ ಹಾನಿಗೆ ತುತ್ತಾಗದಂತೆ ಒಂದು ಖಾಯಂ ಪರಿಹಾರ ಕಂಡು ಹಿಡಿಯಬೇಕು ಎಂದು ತಿಳಿಸಿ ನನ್ನ ಮಾತು ಮುಗಿಸುತ್ತೇನೆ.

Mr. SPEAKER.—There is a long list; the matter is very important. It is not a question of general platitudes. There are pockets where it has failed and those that come from those pockets, those that have given notice of adjournment motion or call attention or short-notice, must have something more precise to say in this matter.

Sri H. M. CHANNABASAPPA (Periyapatna).—The question of levy is a thing which has affected millions of people in this country. Therefore, this matter will have to be dealt with well in this House, and if necessary more time shall have to be given. It shall not be restricted to persons coming from the affected pockets. Sufficient time must be made available for the subject.

Mr. SPEAKER.—I am prepared even to create time, if I have got the power. I think, Kolar District, Hassan and Shimoga districts are the affected pockets.........

Sri H. M. CHANNABASAPPA.—It is a question which has affected the entire State. Therefore, you cannot restrict it to any particular district.

Mr. SPEAKER.—I now follow ; I will follow the list.

†ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮೂರನೇ ಪಂಚವಾರ್ಷಿಕ ಯೋಜನೆ ಮುಗಿದು ಕೋಟಿ ಗಟ್ಟಲೆ ಹಣ ಖರ್ಚು ಮಾಡಿದರೂ ಕೂಡ ಬಡ ಒಕ್ಕಲಿಗನು ಆಕಾಶದ ಕಡೆ ನೋಡಬೇಕಾದ ಪರಿಸ್ಥಿತಿ ತಪ್ಪಿಲ್ಲ. ಆದುದರಿಂದ ಸರಕಾರದವರು ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿದು ಸರಿಯಾದ ರೀತಿಯಲ್ಲಿ ಯೋಜನೆ ಮಾಡಬೇಕು. ಅನೇಕ ಮಿತ್ರರು ಈಗಾಗಲೇ ಮಾತನಾಡಿದ್ದಾರೆ. ನಾನು ಒಂದು ಮಾತು ಮಾತ್ರ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಹೋದ ವರ್ಷ ಐದಾರು ತಾಲ್ಲೂಕುಗಳಲ್ಲಿ ಬರಗಾಲ ಇತ್ತು. ಕುಂದಗೋಳ ತಾಲ್ಲೂಕಿನಲ್ಲಿ ಬರಗಾಲ ಇತ್ತು ಎಂದು ತಹಶೀಲದಾರರು ಆಸಿಸ್ಟೆಂಟ್ ಕಮಿಷನರರು ಹೇಳಿದರು. ಆದರೆ ಇಡೀ ಜಿಲ್ಲೆಯಲ್ಲಿ ಬರಗಾಲ ಇದ್ದಿತು. ಆದರೂ ಕೂಡ ಎಲ್ಲ ತಾಲ್ಲೂಕಿನಲ್ಲಿ ಬರಗಾಲ ಪರಿಹಾರ ಕೆಲಸವಾಗದೆ ಮಂತ್ರಿಗಳ ಪ್ರಭಾವವಿರುವ ಒಂದೊಂದು ತಾಲ್ಲೂಕಿನಲ್ಲಿ ಮಾತ್ರ ಕೆಲಸ ನಡೆದಿದೆ ಎಂದು ಬಹಳ ವಿಷಾದದಿಂದ ಹೇಳುತ್ತೇನೆ. ಉಳಿದ ತಾಲ್ಲೂಕಿನಲ್ಲಿ ಬರಗಾಲ ಕೆಲಸ ನಡೆಸದೆ ಕೇವಲ ಮಂತ್ರಿಗಳ ತಾಲ್ಲೂಕಿನಲ್ಲಿ ಅಷ್ಟೇ ಪರಿಹಾರ ಕೆಲಸವನ್ನು ಡೆಪ್ಯುಟಿ ಕಮಿಷನರರು ಕೈಕೊಂಡರು. ಈ ರೀತಿ ಆಗಬಾರದು. ಎಲ್ಲೆಲ್ಲಿ ಬರಗಾಲ ಇದೆಯೋ ಅಲ್ಲಿ ಕೆಲಸವಾಗಬೇಕು.

(Mr. CHAIRMAN [Mr. S. D. Kothawale] in the Chair)

ಇನ್ನು ಲೆವಿ ವಿಷಯ. ಮಾನ್ಯ ಆಹಾರ ಮಂತ್ರಿಗಳು ಬಹಳ ಚತುರರು, ಯಾವುದೇ ವಾದಕ್ಕೆ ಸರಿಯಾದ ಉತ್ತರ ಕೊಡತಕ್ಕಂಥ ಸಾಮರ್ಥ್ಯವುಳ್ಳವರು ಆಗಿದ್ದಾರೆ. ಲೆವಿ ಆರ್ಡರ್‌ನಲ್ಲಿ ಕೆಲವೊಂದು ಅವ್ಯವಹಾರಿಕ ಕಲಮುಗಳು ಇವೆ. ಲೆವಿ ವಸೂಲ್ಮಾಡುವುದಕ್ಕೆ ಸರ್ವಾಧಿಕಾರಿಗಳು ಶಾನುಭೋಗ ಮತ್ತು ತಲಾಟಿಗಳು. ನಮ್ಮ ರಾಜ್ಯದಲ್ಲಿ ಒಂದು ಲೆವಿ ಪದ್ಧತಿ ತಂದಿದ್ದೇವೆ ಎಂದು ಮಂತ್ರಿಗಳು ಹೇಳುತ್ತಾರೆ. ಅದು ಒಪ್ಪತಕ್ಕಂಥ ಮಾತು. ರೈತ ಬೆಳೆದುದನ್ನು ಎಲ್ಲಾ ತೆಗೆದುಕೊಳ್ಳದೆ

(ಶ್ರೀ ಎಸ್. ಆರ್. ಬೊಮ್ಮಾಯಿ)

ಕೆಲವೊಂದು ಭಾಗ ತೆಗೆದುಕೊಂಡು ಉಳಿದದ್ದನ್ನು ಸ್ವತಂತ್ರ ರೀತಿಯಿಂದ ಸ್ವಂತಕ್ಕೆ ಉಪಯೋಗ ಮಾಡಿಕೊಳ್ಳಲು ಅವಕಾಶ ಕೊಟ್ಟಿದ್ದಾರೆ. ಆದರೆ ಇದರ ಅಮಲಬಜಾವಣೆಯಲ್ಲಿ ದೋಷವಿದೆ. ಮೊಟ್ಟ ಮೊದಲನೆಯದಾಗಿ ಡಿಮ್ಯಾಂಡ್ ನೋಟೀಸ್ ಯಾವ ಆಧಾರದ ಮೇಲೆ ಶಾನುಭೋಗ ಕೊಡುತ್ತಾನೆ ತಿಳಿಯುವುದಿಲ್ಲ. ಷೆಡ್ಯೂಲ್‌ನಲ್ಲಿ ಕೊಟ್ಟ ಪ್ರಕಾರ ಇರುವುದಿಲ್ಲ. ಕೆರೆಯಿಂದ ನೀರಾವರಿಗೆ ಬರತಕ್ಕಂಥ ಜಮೀನ ಬಗ್ಗೆ ಬೇರೆ ರೀತಿ ಷೆಡ್ಯೂಲ್ ಕೊಟ್ಟಿದ್ದೀರಿ. ಅನೇಕ ಕಡೆ ಷೆಡ್ಯೂಲಿನಲ್ಲಿ ನಮೂದಿಸಿದ ಪ್ರಕಾರ ಬೆಳೆ ಬರುವುದಿಲ್ಲ. ರೈತನು ನಿಜವಾಗಿ ಬೆಳೆಯತಕ್ಕಂಥ ಬೆಳೆಗಿಂತ ಐದಾರು ಪಟ್ಟು ಹೆಚ್ಚು ಷೆಡ್ಯೂಲಿನಲ್ಲಿದೆ. ಶಾನುಭೋಗ ನೋಟೀಸು ಕೊಡುತ್ತಾನೆ. ಕಾಯಿದೇ ಪ್ರಕಾರ ಅಪೀಲು ಮಾಡಲು ಅವಕಾಶ ಕೂಡ ಇದೆ. ಆದರೆ ನೋಟೀಸ್ ಕೊಡುವ ರೀತಿ ಬಹಳ ವಿಚಿತ್ರವಾಗಿದೆ. ಶಾನುಭೋಗನು ಹಳ್ಳಿಯಲ್ಲಿ ಇರದೆ ಹುಬ್ಬಳ್ಳಿ ಶಹರಿನಲ್ಲಿ ಇರುತ್ತಾನೆ. ಎಲ್ಲ ನೋಟೀಸುಗಳನ್ನು ಮೊದಲೇ ಬರೆದು ಇಟ್ಟುಕೊಂಡಿರುತ್ತಾನೆ. ಬೇಕಾದವರಿಗೆ ಒಂದು ರೀತಿ, ತನಗೆ ಬೇಡದವರಿಗೆ ಇನ್ನೊಂದು ರೀತಿ ನೋಟೀಸ್ ಜಾರಿ ಮಾಡುತ್ತಾನೆ. ಅವನು ನೋಟೀಸು ಜಾರಿ ಮಾಡುವ ಕಾಲಕ್ಕೆ ಏಳು ದಿವಸದ ಮುದತು ಮುಗಿದು ಹೋಗಿರುತ್ತದೆ. ಇದನ್ನು ತುಂಬಿ ಕೊಡತಕ್ಕಂಥ ಫಾರ್ಮು ನೋಡಿದರೆ ಅದು ಬಹಳ ಕ್ಲಿಷ್ಟವಾಗಿದೆ. ಒಳ್ಳೊಳ್ಳೇ ವಕೀಲರಿಗೂ ಕೂಡ ಅದು ತಿಳಿಯುವಂತೆ ಇಲ್ಲ. ಇಂಥ ಕಾಲಮ್ಮುಗಳನ್ನು ತುಂಬತಕ್ಕಂಥ ವಿಷಯ ಬಡ ಒಕ್ಕಲಿಗನಿಗೆ ಏನೂ ತಿಳಿಯುವುದಿಲ್ಲ. ಈ ಫಾರ್ಮ್ ತುಂಬಿಕೊಡುವುದು ರೈತನಿಗೆ ಸಾಧ್ಯವಾಗುವುದಿಲ್ಲ. ಇದಕ್ಕಾಗಿ ಪುನಃ ಅವನು ಶಾನುಭೋಗನ ಮೊರೆ ಹೋಗಬೇಕಾಗುತ್ತದೆ. ಶಾನುಭೋಗನು ತನಗೆ ಅನುಕೂಲವಾದ ರೀತಿಯಲ್ಲಿ ಫಾರ್ಮ್ ತುಂಬುತ್ತಾನೆ. ಇಂಥ ಪರಿಸ್ಥಿತಿಯಲ್ಲಿ ಅಪೀಲು ಮಾಡುವುದಕ್ಕೆ ಒಕ್ಕಲಿಗನಿಗೆ ಹಣವಿರುವುದಿಲ್ಲ ಅಂಥ ಶಕ್ತಿ ಇರುವುದಿಲ್ಲ. ಅಧಿಕಾರಿಗಳು ತಿಳಿಸಿದ ಪ್ರಕಾರ ಲೆವಿ ವಸೂಲಿ ಕೊಡಬೇಕಾಗುತ್ತದೆ. ಎಂಟನೇ ಒಂದು ಭಾಗ ಕೊಡಲು ರೈತ ತಯಾರಿದ್ದರೂ ಕೂಡ ಡಿಮ್ಯಾಂಡ್ ನೋಟೀಸಿನಲ್ಲಿ ಇರುವ ಪ್ರಕಾರ ಕೊಡಬೇಕಾಗುತ್ತದೆ. ಆದುದರಿಂದ ಶೇಕಡ 8ರಷ್ಟು ವಸೂಲ್ಮಾಡಲಾಗುತ್ತಿದೆ ಎಂದು ಹೇಳುವುದು ಸತ್ಯಕ್ಕೆ ದೂರವಾದುದು. ಡಿಮ್ಯಾಂಡ್ ನೋಟೀಸಿನಲ್ಲಿಯ ಅಂಕಿಗಳನ್ನು ನೋಡಿದರೆ ರೈತನು ಬೆಳೆದಿರುವುದರಲ್ಲಿ ಅರ್ಧ ಭಾಗ ಬೆಳೆಯನ್ನು ವಸೂಲ್ಮಾಡುವ ರೀತಿಯಲ್ಲಿ ಇದೆ. ಒಕ್ಕಲಿಗನು ತನ್ನ ಸ್ವಂತ ಹೊಟ್ಟೆಪಾಡಿಗಾಗಿ ಉತ್ಪತ್ತಿಯಲ್ಲಿ ಮೂರು ಕ್ವಿಂಟಾಲ್ ಎರಡು ಕ್ವಿಂಟಾಲ್ ಅಕ್ಕಿ ಪಡೆಯಬಹುದು ಎಂದು ಇದೆ. ಇದರಲ್ಲಿ ಮನೆಯ ಜನರ ಲೆಕ್ಕ ತೆಗೆದುಕೊಳ್ಳಬೇಕು. ಇದಲ್ಲದೆ ಒಕ್ಕಲತನದಲ್ಲಿ ಕೂಲಿಗಳಿಗೆ ಆಳುಗಳಿಗೆ ಕಾಳಿನ ರೂಪದಲ್ಲಿ ಕೂಲಿ ಕೊಡಬೇಕಾಗುತ್ತದೆ; ಇದನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಒಂದು ಎಕರೆಗೆ ಎರಡು ಚೀಲ ಭತ್ತ ವಸೂಲ್ಮಾಡಿದರೆ ತನ್ನ ಉಪಜೀವನಕ್ಕೆ ಏನು ಮಾಡಬೇಕು ? ಹಬ್ಬ ಹುಣ್ಣಿಮೆ, ಮದುವೆ ಮುಂಜಿ, ಇಂಥ ಪ್ರಸಂಗಕ್ಕೆ ಇದರಲ್ಲಿ ಏನೂ ಅವಕಾಶವಿಲ್ಲ. ಈ ರೀತಿ ಮಾಡುವುದರಿಂದ ವಸೂಲ್ಮಾಡುವುದು ಅರ್ಧ ಬೆಳೆ ತೆಗೆದುಕೊಂಡಹಾಗೆ ಆಗುತ್ತದೆ, ಇದಲ್ಲದೆ ನೀವು ಕೊಡುವ ಬೆಲೆ ಏನು ? ಕೇಂದ್ರ ಸರಕಾರ ನಿರ್ಣಯ ಮಾಡುವಂತೆ ಬೆಲೆ ಗೊತ್ತುಮಾಡುತ್ತೇವೆಂದು ಹೇಳುತ್ತೀರಿ. ಇದಕ್ಕೆ ಕೇಂದ್ರ ಸರಕಾರದ ಕಾಯಿದೆ ಇದ್ದರೆ ಅದನ್ನು ಸರಿಯಾದ ರೀತಿಯಲ್ಲಿ ಬದಲಾವಣೆ ಮಾಡಲು ಒತ್ತಾಯ ತರಬೇಕು. ಒಕ್ಕಲಿಗನು ಕೊಂಡುಕೊಳ್ಳಬೇಕಾದ ಗೊಬ್ಬರದ ಧಾರಣೆ 1964—65ರಲ್ಲಿ 585 ಇದ್ದುದು 792 ರೂಪಾಯಿ ಆಗಿದೆ. ಅಮೋನಿಯಂ ಸಲ್ಫೇಟ್ 240 ರೂಪಾಯಿ ಇದ್ದುದು 370 ರೂಪಾಯಿ ದರ ಆಗಿದೆ. ನೈಟ್ರೇಟು 424 ರೂಪಾಯಿ ಇದ್ದುದು 536 ರೂಪಾಯಿ ಆಗಿದೆ. ಅಮೋನಿಯಂ ಫಾಸ್ಫೇಟ್ 439 ರೂಪಾಯಿ ಇದ್ದುದು 770 ರೂಪಾಯಿ ಆಗಿದೆ, ಅಮೋನಿಯಂ ನೈಟ್ರೇಟ್ 280 ರೂಪಾಯಿ ಇದ್ದುದು 380 ರೂಪಾಯಿ ಆಗಿದೆ. ಅಲ್ಲದೆ ಅವನು ಕೊಳ್ಳತಕ್ಕ ಕಬ್ಬಿಣ, ಉಕ್ಕು ಮತ್ತು ಇತರ ಅನೇಕ ಸಾಮಾನುಗಳ ಧಾರಣೆ ಒಂದಕ್ಕೆ ಒಂದೂವರೆ ಪಟ್ಟು ಹೆಚ್ಚಾಗಿದೆ. ನೀವು ಕೊಡತಕ್ಕ ಕಾಳಿನ ಧಾರಣೆ ಒಂದೇ ಆಗಿದೆ. ಈ ರೀತಿ ಮಾಡುವುದರಿಂದ ರೈತರಿಗೆ ತುಂಬ ಅನ್ಯಾಯವಾಗುತ್ತಿದೆ. ಲೆವಿ ಪದ್ಧತಿಯಲ್ಲಿ ತುಂಬ ದೋಷವಿದೆ. ಚಿಕ್ಕಪುಟ್ಟ ಒಕ್ಕಲಿಗರು ಅವರು ಬೆಳೆದ ಬೆಳೆಯನ್ನು ಕೂಡಲೇ ಮಾರಾಟ ಮಾಡಬೇಕಾದ ಪ್ರಸಂಗ ಬರುತ್ತದೆ. ಅಂಥ ಸಂದರ್ಭದಲ್ಲಿ ಲೆವಿ ಮಾಡತಕ್ಕ ಅಧಿಕಾರಿಗಳು, ಹಣ ಕೊಡತಕ್ಕ ಅಧಿಕಾರಿಗಳು ಇರುವುದಿಲ್ಲ. ಅವನು ಮಾರುಕಟ್ಟೆಗೆ ತೆಗೆದುಕೊಂಡು ಬಂದರೆ ಪೋಲೀಸಿನವರು ಹಿಡಿದು ಖಟ್ಲೆ ಹಾಕುತ್ತಾರೆ. ಈ ರೀತಿಯಿಂದ ಒಕ್ಕಲಿಗರಿಗೆ ತುಂಬ ಅನ್ಯಾಯವಾಗುತ್ತಿದೆ. ಪ್ರತಿಯೊಬ್ಬ ಒಕ್ಕಲಿಗನೂ ಏನು ಕೊಡಬೇಕು ಎನ್ನುವುದನ್ನು ಸ್ಪಷ್ಟವಾಗಿ ಹೇಳಿವರೆ, ನಮ್ಮ ಕಣಕ್ಕೆ ಬಂದರೆ ಕೊಡುತ್ತೇವೆಂದು ಹೇಳುತ್ತಾರೆ. ನಾವು ಎಷ್ಟೋ ಸಲ ಮಂತ್ರಿಗಳಿಗೆ ಹೇಳಿದ್ದರೂ ಸಹ ಅಧಿಕಾರಿಗಳು ರೈತರಿಗೆ ತೊಂದರೆಯನ್ನು ಕೊಡುತ್ತಿದ್ದಾರೆ. ಲೆವಿ ವಸೂಲಿಯಿಂದ ರೈತರಿಗೆ ತೊಂದರೆಯಾಗುತ್ತಿದೆ, ಇದನ್ನು ಸರಿಪಡಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಂ. ಕೊಟ್ರ ಬಸಯ್ಯ ಸೋಗಿ (ಹಡಗಲಿ).—ಮಾನ್ಯ ಸಭಾಧಿಪತಿಗಳೇ, ಈ ಬರಗಾಲದ ಪರಿಸ್ಥಿತಿ ಮತ್ತು ಧಾನ್ಯ ವಸೂಲಿಯ ಬಗ್ಗೆ ಇದುವರೆಗೆ ಮಾತನಾಡಿದ ಅನೇಕ ಸನ್ಮಾನ್ಯ ಮಿತ್ರರು ವ್ಯಕ್ತಪಡಿಸಿದ ಅಭಿಪ್ರಾಯ ಬಹುಮಟ್ಟಿಗೆ ನಿಜವಾದುದು. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವುಕಡೆ ಬಹಳ ಕಠಿಣ ಪರಿಸ್ಥಿತಿ ಇದೆ. ಅನೇಕ ವಿರೋಧಿ ಪಕ್ಷದ ಮಿತ್ರರು ವ್ಯಕ್ತಪಡಿಸಿದ ಅಭಿಪ್ರಾಯ ಕೆಲಮಟ್ಟಿಗೆ ಉತ್ಪ್ರೇಕ್ಷೆಯಿಂದ ಕೂಡಿದ್ದರೂ ಅದರಲ್ಲಿ ಸ್ವಲ್ಪಮಟ್ಟಿಗೆ ಸತ್ಯಾಂಶವಿದೆ ಎಂದರೆ ತಪ್ಪಾಗಲಾರದು. ಬರಗಾಲ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಯಲ್ಲಿ, ಯಾವ ಯಾವ ಭಾಗದಲ್ಲಿ ಇದೆ ಎಂದು ಅಂದಾಜು ಮಾಡುವಾಗ ಸರ್ಕಾರ ಯಾವ ಮಾಪಕವನ್ನು ಇಟ್ಟುಕೊಂಡಿದ್ದಾರೆಯೋ ಏನೋ ? ಬರಗಾಲದ ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆಯ ಹೆಸರಿಲ್ಲ. ಇದನ್ನು ನೋಡಿದರೆ ನನಗೆ ಬಹಳ ವಿಷಾದವೆನಿಸುತ್ತದೆ. ಅನೇಕ ಜಿಲ್ಲೆಗಳಲ್ಲಿ ಬಳ್ಳಾರಿ ಜಿಲ್ಲೆಯೂ ಬರಗಾಲಕ್ಕೆ ಹೆಸರಾದ ಪ್ರದೇಶ. ಪ್ರತಿ ವರ್ಷ ಅಲ್ಲಿ ಅಭಾವ ಪರಿಸ್ಥಿತಿ ಇರುತ್ತದೆ. ಅಲ್ಲಿ ತುಂಗಭದ್ರ ಪ್ರಾಜೆಕ್ಟ್ ಇದೆ ಎಂದು ಅಲ್ಲಿ ಬರಗಾಲ ಪರಸ್ಥಿತಿ ಹೋಯಿತು ಎಂದು ಯಾರೂ ತಿಳಿಯಬಾರದು. ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರ ಪ್ರಾಜೆಕ್ಟ್ ಆಗಬೇಕಾದರೆ ತ್ಯಾಗ ಮಾಡಿ, ಬಲಿದಾನ ಮಾಡಿದಂಥ ನೂರಾರು ಹಳ್ಳಿಗಳ ಜನರು ಅಲ್ಲಿದ್ದಾರೆ. ಮಲ್ಲಾಪುರ ಮತ್ತು ಹಡಗಲಿ ತಾಲ್ಲೂಕಿನ ಕೆಲವು ಭಾಗ ಅಲ್ಲಿ ಹೋಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಈ ವರ್ಷ 19 ಕೋಟಿ ರೂಪಾಯಿ ಬೆಲೆಯ ಶೇಂಗಾ ಬೆಳೆ ಪೂರಾ ಹೋಯಿತು. ಇದರ ಜೊತೆಗೆ ಜೋಳದ ಬೆಳೆ ಕೂಡ ಕೆಲವು ಕಡೆ ತಕ್ಕಮಟ್ಟಿಗೆ ಚೆನ್ನಾಗಿ ಆಗಿದೆ, ಮಲ್ಲಾಪುರ, ಹಡಗಲಿ, ಹಗರಿ ಬೊಮ್ಮನಹಳ್ಳಿ ಮೊದಲಾದ ಪ್ರದೇಶಗಳಲ್ಲಿ ಬಹಳ ದುಸ್ಥಿತಿ ಇದೆ. ಇಲ್ಲಿ ಹೊಟ್ಟೆ ಪಾಡಿಗೆ, ಅವರ ಜೀವನಕ್ಕೆ ಸಾಕಾಗುವಷ್ಟು ಕಾಳೂ ಆಗಿಲ್ಲ. ಆದಕಾರಣ ಸರ್ಕಾರದವರು ಬರಗಾಲ ಪರಿಸ್ಥಿತಿಯನ್ನು ಅಂದಾಜು ಮಾಡುವಾಗ ಸರಿಯಾದ ಪದ್ಧತಿಯನ್ನು ಅನುಸರಿಸಬೇಕು. ಕೇವಲ ಒಬ್ಬ ಶ್ಯಾನುಭೋಗರು ಕೊಟ್ಟ ಅಂಕಿ ಅಂಶಗಳ ಆಧಾರದಮೇಲೆ ಸರ್ಕಾರ ಬರಗಾಲ ಪ್ರದೇಶಗಳನ್ನು ಅಂದಾಜು ಮಾಡಬೇಕು ಎಂದರೆ ಇದು ಅಷ್ಟು ಸರಿಯಾದ ವ್ಯವಸ್ಥೆಯಲ್ಲ. ಅನೇಕ ಮಂದಿ ಶ್ಯಾನುಭೋಗರು, ನಾನು ನೋಡಿದಂತೆ, ಮನೆಯಲ್ಲಿ ಕುಳಿತುಕೊಂಡು ಆಣೆವಾರಿ ಬರೆಯುತ್ತಾರೆ, ಹೊಲಕ್ಕೆ ಹೋಗಿ ಪರಿಸ್ಥಿತಿಯನ್ನು ನೋಡುವುದಿಲ್ಲ. ಕೆಲವು ಮಂದಿ ಶ್ಯಾನುಭೋಗರು ಮತ್ತು ಅಧಿಕಾರಿಗಳು ಸರ್ಕಾರದ ಮರ್ಜಿಗೆ ಒಳಪಟ್ಟು ತಪ್ಪು ಲೆಕ್ಕ ಕೊಡತಕ್ಕ ಸಂದರ್ಭ ಸಹ ಇದೆ. ಸರಿಯಾಗಿ ಅಂದಾಜು ಮಾಡಬೇಕಾದರೆ ಜನತಾ ಪ್ರತಿನಿಧಿಗಳು ಮತ್ತು ತಾಲ್ಲೂಕು ಬೋರ್ಡು, ಮತ್ತು ಗ್ರಾಮ ಪಂಚಾಯಿತಿಯಲ್ಲಿರುವ ಜನರ ಪ್ರತಿನಿಧಿಗಳ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು ಎಂದು ಸೂಚನೆ ಮಾಡಬಯಸುತ್ತೇನೆ.

ಬರಗಾಲ ಪರಿಸ್ಥಿತಿಯ ಬಗ್ಗೆ ಹೇಳುವುದಾದರೆ ಮುಖ್ಯವಾಗಿ ಮಲ್ಲಾಪುರ ಮತ್ತು ಹಡಗಲಿ ತಾಲ್ಲೂಕಿನಲ್ಲಿರುವ ಅಧಿಕಾರಿಗಳು ಮತ್ತು ತಹಸೀಲ್ದಾರರು ಜನಗಳಿಗೆ ಆಹಾರ ಸರಬರಾಜು ಬಗ್ಗೆ ಆಗಲೀ, ಇತರ ವಿಷಯಗಳ ಬಗ್ಗೆ ಆಗಲೀ ಸೌಜನ್ಯದಿಂದ ವರ್ತಿಸುವುದಿಲ್ಲ ಅಲ್ಲಿ ನವಾಬ್ ಕಾಲದ ಒಬ್ಬ ಅಧಿಕಾರಿ ಬಂದಿದ್ದಾರೆ. ನಿಮ್ಮನ್ನು ಬಿಸಿಲಿನಲ್ಲಿ ನಿಲ್ಲಿಸುತ್ತೇನೆ, ಕಲ್ಲು ಹೋರಿಸುತ್ತೇನೆ ಎಂದು ಕಂದಾಯ ವಸೂಲ್ಮಾಡುವುದರಲ್ಲಿ, ಸಾಲದ ವಸೂಲಿಯಲ್ಲಿ, ಲೆವಿ ವಸೂಲಿಯಲ್ಲಿ ಬಹಳ ದರ್ಪ ಮತ್ತು ದೌರ್ಜನ್ಯದಿಂದ ವರ್ತಿಸುವ ಪರಿಸ್ಥಿತಿ ಬಂದಿದೆ. ಇದು ಬಹಳ ಶೋಚನೀಯವಾದ ವಿಚಾರ. ಇದನ್ನು ಸರ್ಕಾರ ತೀವ್ರ ಗಮನಕ್ಕೆ ತೆಗೆದುಕೊಳ್ಳಬೇಕು ಇವತ್ತಿನ ದಿವಸ ಹಡಗಲಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಅಧ್ಯಕ್ಷರು ನನಗೆ ಒಂದು ಪತ್ರವನ್ನು ಬರೆದಿರುತ್ತಾರೆ. ಅದನ್ನು ಓದಿದರೆ ಅಲ್ಲಿ ಬಹಳ ಶೋಚನೀಯ ಪರಿಸ್ಥಿತಿ ಇರುವುದೆಂದು ತಿಳಿದುಬರುತ್ತದೆ. ಅವರು ಈ ರೀತಿ ಬರೆದಿರುತ್ತಾರೆ :

> "ಲೆವಿ ವಸೂಲಿಯು ತಾಲ್ಲೂಕಿನಲ್ಲಿ ಬಹಳ ಜೋರಿನಿಂದ ಜರುಗುತ್ತಿದೆ. ಬೆಳೆದ ರೈತರು ಕೊಡಬೇಕಾದುದು ಯೋಗ್ಯ. ಆದರೆ ಸಾಮಾನ್ಯ ರೈತರು ತಮ್ಮ ಕುಟುಂಬಕ್ಕೆ ಸಾಕಾಗುವಷ್ಟು ಕೆಲವರು ತಮಗೇ ಸಾಲದಷ್ಟು ಬೆಳೆ ಬೆಳೆದವರಿಂದ, ದೌರ್ಜನ್ಯದಿಂದ ಕಡ್ಡಾಯವಾಗಿ ವಸೂಲ್ಮಾಡುತ್ತಿರುವುದು ಸರಕಾರದ ನಾಚಿಕೆಗೇಡು ತನ. ಇದನ್ನು ನೀವು ಸರಿಪಡಿಸದಿದ್ದಲ್ಲಿ ಜನಸಾಮಾನ್ಯರನ್ನು ಬಲಿಕೊಟ್ಟಂತಾಗುವು ದಲ್ಲದೆ, ನಿಮ್ಮಲ್ಲಿಟ್ಟಿರುವ ವಿಶ್ವಾಸ ಪ್ರೀತಿಗಳಿಗೆ ಪೂರ್ತಿ ಎರವಾಗುವಿರೆಂಬುದರಲ್ಲಿ ಸಂಶಯವೇ ಇಲ್ಲ. ಈ ಬಗ್ಗೆ ನೀವು ಸಹ ಸದಸ್ಯರೊಡನೆ ಸಮಾಲೋಚಿಸಿ, ಮಾನ್ಯ ಮಂತ್ರಿಗಳನ್ನು ಕಂಡು ಪರಿಹಾರವನ್ನು ಕಂಡುಹಿಡಿಯಲೇಬೇಕು. ಆಗುತ್ತಿರುವ ಮಹಾ ಅನ್ಯಾಯವನ್ನು ಸರಿಪಡಿಸಲೇ ಬೇಕು. ಅಧಿಕಾರಿಗಳಿಗೆ ಸರಿಯಾದ ತಿಳುವಳಿಕೆ ಯನ್ನು ಮೇಲಿನಿಂದ ಕೊಡಿಸಬೇಕು..........."

ಆದಕಾರಣ ಇಂಥ ಒಂದು ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳಬೇಕು. ಬೆಳದ ಪ್ರದೇಶದಲ್ಲಿ, ಎಲ್ಲಿ ಚೆನ್ನಾಗಿ ಬೆಳೆ ಆಗಿದೆ ಆ ಪ್ರದೇಶದಲ್ಲಿ ಧಾನ್ಯ ವಸೂಲಿ, ಕಂದಾಯ

(ಶ್ರೀ ಎನ್. ಎಂ. ಕೊಟ್ರ ಬಸಯ್ಯ ಸೋಗಿ)

ವಸೂಲಿ ಮಾಡುವುದಾದರೆ ಕೊಡುವುದಕ್ಕೆ ಜನ ಸಿದ್ಧರಾಗಿರುತ್ತಾರೆ ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಆದರೆ ಎಲ್ಲಿ ಆಹಾರಧಾನ್ಯ ಬೆಳೆದಿಲ್ಲವೋ, ಎಲ್ಲಿ ತನಗೇ ಇಲ್ಲದೆ ರೈತ ತೊಂದರೆ ಪಡುತ್ತಿದ್ದಾನೆಯೋ ಅಂಥ ಕಡೆ ರೈತರಿಗೆ ಸರಿಯಾದ ಪರಿಹಾರ ಕೊಡಬೇಕು ಮತ್ತು ಸಾಮೂಹಿಕವಾಗಿ ಇಂಥ ಪ್ರದೇಶಗಳಲ್ಲಿ ಪರಿಹಾರ ಕ್ರಮಗಳನ್ನು ಕೈಕೊಳ್ಳಬೇಕು. ಇಡೀ ನಮ್ಮ ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಪ್ರದೇಶವೆಂದರೆ ಗುಲ್ಬರ್ಗ ಡಿವಿಜನ್. ಅಂಥ ಡಿವಿಜನ್ನಿಗೆ ರೆವೆನ್ಯೂ ಸಚಿವರು ಕೇವಲ ಅರೇಳು ಲಕ್ಷ ರೂಪಾಯಿಗಳನ್ನು ಬರಗಾಲ ಪರಿಹಾರಕ್ಕಾಗಿ ಮಂಜೂರು ಮಾಡಿದ್ದು ಬಹಳ ವಿಷಾದವೆನಿಸುತ್ತದೆ. ಬಹಳ ಹಿಂದುಳಿವ ಪ್ರದೇಶ ಅತ್ಯಂತ ಬೆಂಗಾಡಾಗಿರತಕ್ಕ ಸೀಮೆಗೆ 20 ಲಕ್ಷ ರೂಪಾಯಿಗಳವರೆಗೂ ಗುಲ್ಬರ್ಗ ಡಿವಿಜನ್ನಿಗೆ ಮಂಜೂರು ಮಾಡಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಕೆರೆ ಕಾಲುವೆ ದುರಸ್ತಿ, ಹೊಸಕೆರೆಗಳನ್ನು ಕಟ್ಟಿಸುವುದು ಮತ್ತು ಗ್ರಾಮಾಂತರ ರಸ್ತೆಗಳನ್ನು ಮಾಡಿಸುವುದು ಇಂಥ ಮುಖ್ಯವಾದ ಬರಗಾಲ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕು. ಜನತೆಗೆ ಮೊದಲೇ ದುಡ್ಡಿಲ್ಲ, ದುಡ್ಡಿಲ್ಲದೆ ಆಹಾರಧಾನ್ಯಗಳನ್ನು ಕೊಳ್ಳುವ ಶಕ್ತಿ ಇಲ್ಲ. ಇಂಥ ಕಡೆ ಕೂಡಲೇ ಬರಗಾಲ ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕು ಮತ್ತು ಇದರ ಜೊತೆಗೆ ದರ್ಪ ದೌರ್ಜನ್ಯದಿಂದ ಧಾನ್ಯ ವಸೂಲಿ ಮಾಡುವುದನ್ನು ತಪ್ಪಿಸಬೇಕು. ಯಾವ ರೈತ ಬೆಳೆದಿರುತ್ತಾನೆಯೋ ಅಂಥವನಿಂದ ತೆಗೆದುಕೊಳ್ಳಿ. ಬೆಳೆಯದೆ ಇರುವ ರೈತನಿಂದ ಮಾತ್ರ ವಸೂಲ್ಮಾಡಬಾರದು. ತಹಸೀಲ್ದಾರರು, ರೆವೆನ್ಯೂ ಇನ್ಸ್‌ಪೆಕ್ಟರು, ಶ್ಯಾನುಭೋಗರು, ಇವರೆಲ್ಲ ಬಡ ಜನರಮೇಲೆ, ಅಸಹಾಯಕರಾಗಿರುವ ಜನರ ಮೇಲೆ ಹೆಚ್ಚು ದೌರ್ಜನ್ಯ ಮಾಡುವ ಪರಿಸ್ಥಿತಿ ಇದೆ. ನಮ್ಮಂಥ ಜನರನ್ನು ಅವರು ಹೆಚ್ಚು ಬಲಾತ್ಕಾರ ಮಾಡುವುದಿಲ್ಲ. ಆದರೆ ಅಸಹಾಯಕ ರಾಗಿರುವ ಜನರಮೇಲೆ ಹೆಚ್ಚು ದೌರ್ಜನ್ಯ ಮಾಡಿ ಒತ್ತಾಯದಿಂದ ಧಾನ್ಯವನ್ನು ವಸೂಲ್ಮಾಡು ತ್ತಿದ್ದಾರೆ. ಇಂಥ ಪ್ರಸಂಗಗಳು ನಡೆಯುವುದು ಯಾವುದೇ ಸರ್ಕಾರಕ್ಕೆ ಭೂಷಣವಲ್ಲ. ಜನತಾ ಸರ್ಕಾರ ಎಂದಮೇಲೆ ಜನತೆಯ ಹಿತಕ್ಕಾಗಿ, ಜನತೆಗೆ ಅನುಕೂಲವಾಗುವಂತೆ ನೋಡಿಕೊಳ್ಳ ಬೇಕಾದ್ದು ಸರ್ಕಾರದ ಕರ್ತವ್ಯ. ಮಾನ್ಯ ಆಹಾರ ಮಂತ್ರಿಗಳೂ ಅಧಿಕಾರಿಗಳಿಗೆ ಸರಿಯಾದ ನಿರ್ದೇಶನವನ್ನು ಕೊಡಬೇಕು. ಬಡ ಜನರಿಗೆ ಹಿಂಸೆ ಕೊಡದಂತೆ ಎಲ್ಲ ಜನರ ಪ್ರೀತಿ ಸಂಪಾದಿಸಿ ಧಾನ್ಯವನ್ನು ವಸೂಲ್ಮಾಡಬೇಕೆಂದು ನಿರ್ದೇಶನ ಕೊಡಬೇಕೆಂದು ಮಾನ್ಯ ಆಹಾರ ಮಂತ್ರಿಗಳಲ್ಲೂ ಮತ್ತು ರೆವೆನ್ಯೂ ಮಂತ್ರಿಗಳಲ್ಲೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಮುಂಚೆ ನಾನೂ ಮತ್ತು ವಿಧಾನ ಪರಿಷತ್ತಿನ ಸದಸ್ಯರಾದ ಚನ್ನಬಸವನ ಗೌಡರೂ ರೆವೆನ್ಯೂ ಮಂತ್ರಿಗಳಲ್ಲಿ ವಿಜ್ಞಾಪನೆ ಮಾಡಿಕೊಂಡಿರುವ ಪ್ರಕಾರ ಬರಗಾಲ ಪ್ರದೇಶದಲ್ಲಿ ಕೂಡಲೇ ಪರಿಹಾರ ಕ್ರಮಗಳನ್ನು ಕೈಕೊಂಡು ಎಲ್ಲ ಜನರ ಕಷ್ಟವನ್ನೂ ಪರಿಹರಿಸಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ವೆಂಕಟಗಿರಿಯಪ್ಪ.—ಸನ್ಮಾನ್ಯ ಸಭಾಪತಿಗಳೇ, ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಮತ್ತು ಆಹಾರ ಪರಿಸ್ಥಿತಿ ಉತ್ಕಟವಾಗಿರುವಾಗ ಸರಕಾರ ಬೇಜವಾಬ್ದಾರಿಯಿಂದ, ಅಶಕ್ತತೆಯಿಂದ ವರ್ತಿಸಿದೆ ಎಂಬುದಕ್ಕೆ ಸಂಬಂಧಪಟ್ಟ ರಾಜಸ್ವಮಂತ್ರಿಗಳು ಮತ್ತು ಆಹಾರಮಂತ್ರಿಗಳು ಈ ಸಭೆಯ ಮುಂದೆ ಕೊಟ್ಟಿರುವ ಹೇಳಿಕೆಗಳೇ ಅದಕ್ಕೆ ಸಾಕ್ಷಿಯಾಗಿವೆ. ಮಾನ್ಯ ಕಂದಾಯ ಮಂತ್ರಿಗಳು ಸಮಾಜದಲ್ಲಿ ಅತ್ಯಂತ ಕಷ್ಟ ದೆಶೆಯುಲ್ಲಿರುವ ಹರಿಜನ ವರ್ಗದಿಂದ ಬಂದವರಾಗಿದ್ದಾರೆ. ಅರಣ್ಯ ಖಾತೆ ಮಾತ್ರ ಅವರಿಗೆ ಸೇರಿದ್ದಾಗ ಅವರ ಮನೋಭಾವ ಚೆನ್ನಾಗಿತ್ತು. ಆದರೆ ರಾಜಸ್ವ ಮಂತ್ರಿಗಳಾದ ಮೇಲೆ ದೇಶದಲ್ಲಿರುವ ಅಭಾವ ಪರಿಸ್ಥಿತಿ ಅವರಿಗೆ ಕಾಣುತ್ತಿಲ್ಲ. ಈ ದಿನ ದೇಶದಲ್ಲಿ 5-6 ಜಿಲ್ಲೆಗಳಲ್ಲಿ ತೀವ್ರ ಅಭಾವ ಪರಿಸ್ಥಿತಿ ಇದೆ. ಅಲ್ಲಿ ಜನರಿಗೆ ಉದ್ಯೋಗ, ಆಹಾರ ಇಲ್ಲದೆ ಮೊರೆಯಿಡುತ್ತಿದ್ದಾರೆ. ಹಾಗಿರುವಾಗ ಮಂತ್ರಿಗಳ ಹೇಳಿಕೆ ಬಹಳ ವಿಚಿತ್ರವಾಗಿದೆ. ಚಾಮರಾಜನಗರದ ಸಂತೆಯಲ್ಲಿ ಚುನಾವಣೆ ಭಾಷಣ ಮಾಡಿದ ಹಾಗೆ ಇಲ್ಲೂ ಮಾಡಿರುವುದು ಸರಿಯಲ್ಲ. ರಾಜ್ಯದಲ್ಲಿ ಬಹುತೇಕ ಪ್ರದೇಶಗಳಲ್ಲಿ ಪರಿಸ್ಥಿತಿ ಚೆನ್ನಾಗಿಲ್ಲ. ಹಾಗಿರುವಾಗ ಮಂತ್ರಿಗಳ ಹೇಳಿಕೆ ಈ ರೀತಿ ಇದೆ :

"The seasonal conditions in several districts are not satisfactory. The standing crops in several places are reported to be withering, the tanks have not received sufficient water and the prospect of a good harvest in several areas is not bright."

ಎಲ್ಲಿ ಎಷ್ಟು ಜಿಲ್ಲೆಗಳಲ್ಲಿ ಅಭಾವವಿದೆ, ಎಷ್ಟು ಚದರಮೈಲಿಗಳಲ್ಲಿದೆ, ಎಷ್ಟು ಜನರಿಗೆ ಬೆಳೆಯಿಲ್ಲ, ಎಷ್ಟು ಜನರಿಗೆ ಉದ್ಯೋಗಬೇಕು ಎಂಬುದನ್ನು ಲೆಕ್ಕ ಹಾಕಬೇಡವೇ? ವೈರ್‌ಲೆಸ್ ಸ್ಟೇಷನ್ ಕೂಡ ಇದೆ, ಅದಕ್ಕೆ ಇಲಾಖೆಯಿದೆ, ಇಬ್ಬರು ಸೆಕ್ರಟರಿಗಳಿದ್ದು ಸಿಬ್ಬಂದಿಯಿದ್ದರೂ ಕೂಡ ಕೆಲವು ಜಿಲ್ಲೆಗಳಲ್ಲಿ ಸೀಜನಲ್ ಕಂಡೀಷನ್ ತೃಪ್ತಿಕರವಾಗಿಲ್ಲ ಎಂದು ಮಾತ್ರ ಹೇಳಿದರೆ ಇದೇನು ಚುನಾವಣಾ ಭಾಷಣವೇ, ಈ ಸಭೆಗೆ ಅದು ಸಂಬಂಧಪಟ್ಟಿದೆಯೇ ಎಂದು ಕೇಳುತ್ತೇನೆ. ಇನ್ನೊಂದು ಮುಖ್ಯವಾದ ವಿಷಯವೆಂದರೆ, ಅವರು ಕೊಟ್ಟಿರುವ ಹೇಳಿಕೆಯಲ್ಲಿ ಒಂದು ಪಟ್ಟಿಯಿದೆ. ನಾವು ಎಳೆಯ ಮಕ್ಕಳೇ? ನಮಗೆ ಗೊತ್ತಾಗುವುದಿಲ್ಲವೇ? ಬಜೆಟ್ಟಿನಲ್ಲಿ ನೀರಾವರಿ, ಸಾಯಿಲ್ ಕನ್‌ಸರ್ವೇಷನ್ ಮುಂತಾದುವುಗಳಿಗೆ ಕೊಟ್ಟಿರುವ ಹಣದ ಪಟ್ಟಿ ಕೊಟ್ಟಿದ್ದಾರೆ.

Mr. CHAIRMAN.—It would serve better purpose if you could make some suggestions.

Sri P. VENKATAGIRIYAPPA.—The Government has not seriously felt the situation and the very statement shows how callous they are.

ಇಂಜನಿಯರಿಂಗ್ ಇಲಾಖೆಗೆ ಇಷ್ಟು ಹಣ, ಬಾವಿಗಳಿಗಿಷ್ಟು ಹಣ, ಎಂದು ಬಜೆಟ್ಟಿನಲ್ಲಿ ನಮೂದಾಗಿರುವುದನ್ನು ಅವರು ಪಟ್ಟಿಯಲ್ಲಿ ಕೊಟ್ಟಿದ್ದಾರೆ. ಅದು ನಮಗೆ ಗೊತ್ತಾಗುತ್ತದೆ. ನಾವು ಕೇಳುವುದು ಅದಲ್ಲ. ಈಗ ಈ ರಾಜ್ಯದಲ್ಲಿ ಎಷ್ಟು ಪ್ರದೇಶದಲ್ಲಿ ಅಭಾವವುಂಟಾಗಿದೆ, ಎಷ್ಟು ಜನರಿಗೆ ಸುಮಾರು 3–4 ಜಿಲ್ಲೆಗಳಲ್ಲಿ ಉದ್ಯೋಗ ಒದಗಿಸಬೇಕು, ಅದಕ್ಕೆ ಹಣವೆಷ್ಟು ಬೇಕು. ಯಾವ ರೀತಿ ಕೊಡುತ್ತೀರಿ ಎಂಬುದನ್ನು ತಿಳಿಸಬೇಕು ಎಂದು ತಮ್ಮ ಮೂಲಕ ಕೇಳುತ್ತೇನೆ.

ಅಹಾರದ ಮಂತ್ರಿಗಳ ಬಗ್ಗೆ ನನಗಾದರೂ ಹಿಂದೆ ಗೌರವವಿತ್ತು. ಆದರೆ ಅವರು ಜಾಣ್ಮೆಯಿಂದ ಹೇಳಿಕೆ ಕೊಡುತ್ತಿದ್ದಾರೆ. ಅದನ್ನು ಬಿಟ್ಟು ಸೀರಿಯಸ್‌ನೆಸ್‌ನಿಂದ ಕೊಡುತ್ತಿಲ್ಲ. ಎಷ್ಟೋ ಸಾರಿ ಅವರು ಹೇಳುವುದನ್ನು ನೋಡಿದರೆ ಹೆಚ್ಚಾಗಿ ಕೊಡುವುದಕ್ಕೆ ಪ್ರಯತ್ನಮಾಡುತ್ತೇನೆ ಎಂಬ ಉತ್ತರ ದೊರೆಯುವುದು ಕಂಡುಬರುತ್ತದೆ. ಕೋಲಾರ ಜಿಲ್ಲೆಯಲ್ಲಿ ಬಹಳ ಕಷ್ಟ ಪರಿಸ್ಥಿತಿಯಿದೆ ನಾನು ಹೇಳಿದರೆ ಉತ್ಪ್ರೇಕ್ಷೆಯಾಗಬಹುದು. ಕನ್ನಡ ಪ್ರಭ ಪತ್ರಿಕೆಯಲ್ಲಿ ಈ ದಿವಸ ಬಾಗೇಪಲ್ಲಿ ಬಾತ್ಮಿದಾರರು ಈ ರೀತಿ ಬರೆದಿದ್ದಾರೆ :

> "ಬಾಗೇಪಲ್ಲಿ ತಾಲ್ಲೂಕು ತೀವ್ರವಾಗಿ ಅನಾವೃಷ್ಟಿಗೆ ಸಿಕ್ಕಿ 4ನೇ ಸಲ ಅಭಾವವನ್ನು ಎದುರಿಸುತ್ತಿದೆ. ಕಳೆದ ನಾಲ್ಕು ವರ್ಷಗಳಿಂದ ಈ ತಾಲ್ಲೂಕಿನಲ್ಲಿ ಸರಿಯಾಗಿ ಮಳೆ ಅಗಲಿಲ್ಲ. ವ್ಯವಸಾಯವನ್ನೇ ನಂಬಿ ಕುಳಿತಿರುವ ಜನ ತೀರಾ ಕಂಗಾಲಾಗಿದ್ದಾರೆ.
>
> ಆಹಾರ ಪದಾರ್ಥಗಳು ಸರಿಯಾಗಿ ಸಿಕ್ಕುತ್ತಿಲ್ಲ. ಹಳ್ಳಿಗಾಡುಗಳಲ್ಲಿ ಜನರ ಗೋಳು ಹೇಳತೀರದು. ಆಹಾರ ಹಂಚಿಕೆ ಕ್ರಮ ಸಮರ್ಪಕವಾಗಿಲ್ಲ. ಜನ ಗಡ್ಡೆ ಗೆಣಸುಗಳನ್ನು ತಿನ್ನುವ ಪರಿಸ್ಥಿತಿ ತಲೆದೋರುತ್ತಿದೆ. ಒಂದು ಸಹಕಾರ ಸಂಘಕ್ಕೆ ಸುಮಾರು 300 ರಿಂದ 600 ಕಾರ್ಡುಗಳಿರುತ್ತವೆ. ಕೋಟಾ ಕೊಡುವುದು ವಾರಕ್ಕೆ ಒಂದು ಮೂಟೆ ಜೋಳ, ಹಿಟ್ಟು, ಗೋಧಿ. ಅಂದರೆ ಅದನ್ನು ತೆಗೆದುಕೊಂಡು ಹೋಗಿ ನ್ಯಾಯಬೆಲೆ ಅಂಗಡಿಗಳಲ್ಲಿ ಸಹಕಾರ ಸಂಘಗಳಲ್ಲಿ ಯಾವ ರೀತಿ ಹಂಚಬೇಕು?"

ಅಲ್ಪಸ್ವಲ್ಪವಾಗಿ ಅಕಾಲದಲ್ಲಿ ಮಳೆ ಬಿದ್ದಿದ್ದು ರೈತರು ಉತ್ತು ಹೆಚ್ಚಿನ ಹಣವನ್ನು ತೆತ್ತು ಬಿತ್ತನೆ ಬೀಜಗಳನ್ನು ಕೊಂಡುಹಾಕಿದ್ದಾರೆ. ಪೈರು ಮೊಳಕೆಗಳಲ್ಲೇ ಮುದುರಿಕೊಂಡು ಹೋಗಿರುತ್ತೆ. ಬಾವಿ ನೀರಿನ ಆಸರೆ ಇರುವ ಕೆಲವರಿಗೆ ಇಟ್ಟಿದ್ದರಲ್ಲಿ ಕಾಲು ಭಾಗಕ್ಕಿಂತ ಕಡಮೆ ಬೆಳೆ ಬಂದಿರುತ್ತೆ.... ಇದನ್ನಾದರೂ ಸರಕಾರದವರು ನೋಡಬೇಕು, ಜವಾಬ್ದಾರಿಯುತರಾದ ಬಾತ್ಮೀದಾರರು ಹೇಳಿರುವುದನ್ನು ಒಪ್ಪಬಹುದು. ಕೋಲಾರ ಜಿಲ್ಲೆ ಬಾಗೇಪಲ್ಲಿ ಪರಿಸ್ಥಿತಿಯು ಬಗ್ಗೆ ವರದಿಗಾರರು ತಿಳಿಸಿರುವುದು ಇಡೀ ಕೋಲಾರಜಿಲ್ಲೆಗೆ ಅನ್ವಯಿಸುವಂತಿದೆ. ಅದೇ ಪರಿಸ್ಥಿತಿ ಕೋಲಾರ ಜಿಲ್ಲೆಯಲ್ಲೆಲ್ಲಾ ಇದೆ. ಆಹಾರ ಮಂತ್ರಿಗಳ ಹೇಳಿಕೆಯಲ್ಲಿ ಹೀಗಿದೆ :

> The Government of India allotment of foodgrains during the last few months have been very low and as far as rice is concerned, there have been no allotment at all during September, October and November.

ತಾಲ್ಲೂಕಿಗೆ ರೇಷನ್ ಕೊಟ್ಟಿಲ್ಲವೆಂದು ತಾಸಿಲ್ದಾರರಿಗೆ ಹೇಳಿದರೆ ಡೆಪ್ಯುಟಿ ಕಮೀಷನರು ಒದಗಿಸಿರುವುದನ್ನು ಸೊಸೈಟಿಗಳಿಗೆ ಈರೀತಿ ಹಂಚಲಾಗಿದೆ ಎಂದು ಒಂದು ಪಟ್ಟಿ ಕೊಡುತ್ತಾರೆ.

(ಶ್ರೀ ಪಿ. ವೆಂಕಟಗಿರಿಯಪ್ಪ)

ಡೈರೆಕ್ಟರ್ ಆಫ್ ಫುಡ್ ಬೇರೆ ಇದ್ದಾರೆ. ಮಂತ್ರಿಗಳು ಡೈರೆಕ್ಟರ್ ಜನರಲ್ ಆಫ್ ಫುಡ್ ಮಾತನಾಡುವಹಾಗೆ ಮಾತನಾಡುತ್ತಾರೆ. ಕೇರಳಾದಲ್ಲಾದರೆ ಚಳವಳಿ ಮಾಡುತ್ತಾರೆ. ನಮ್ಮ ಅಹಾರ ಮಂತ್ರಿಗಳಾದರೋ ಅಹಾರದ ಪರಿಸ್ಥಿತಿ ಇಷ್ಟು ಕಠಿಣವಾಗಿದ್ದರೂ ಕೂಡ ರಾಜಿನಾಮೆ ಕೊಡುವುದಾಗಿ ಏನಾದರೂ ಹೇಳಿದ್ದಾರೆಯೇ ಎಂದರೆ ಖಂಡಿತ ಇಲ್ಲ. ಅವರನ್ನು ನಿಜವಾಗಿಯೂ ಮಂತ್ರಿಗಳೆಂದು ಹೇಳುವುದಕ್ಕಿಂತ ಡೈರೆಕ್ಟರ್ ಜನರಲ್ ಆಫ್ ಫುಡ್ ಸಪ್ಲೈಸ್ ಎಂದು ಕರೆದರೆ ಒಪ್ಪಿಗೆಯಾಗುವುದು. ಅವರು ಹೇಗಾದರೂ ಮಾಡಿ ಮಂತ್ರಿ ಪದವಿ ಉಳಿದರೆ ಸಾಕು ಎಂದು ಉಪಾಯದಿಂದ ಸಿವಿಲ್ ಸರ್ವೆಂಟ್ಸ್‌ನಂತೆ ಕಾಲಹಾಕಬೇಕೆಂದಿರುವರು. ಅಷ್ಟು ಹೊರತು ಕೇಂದ್ರ ಸರಕಾರದೊಡನೆ ಹೊಡೆದಾಡಿ ಹೆಚ್ಚು ಅಹಾರ ತಂದುಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂಬ ಮನೋಭಾವ ಅವರಿಗಿಲ್ಲ. ಈ ರೀತಿ ಭೇದಭಾವನೆಯಿಂದ ಕೂಡಿ ಜವಾಬ್ದಾರಿಯುತವಾದ ಹೇಳಿಕೆ ನೀಡುತ್ತಿಲ್ಲ. ಇನ್ನೊಂದು ಕಡೆ ಜನತಾ ಬಜಾರು ಮುಂತಾದುವುಗಳನ್ನು ತೆರೆದು ಅನುಕೂಲ ಕಲ್ಪಿಸಿರುವುದಾಗಿ ಹೇಳಿದ್ದಾರೆ. ಅಹಾರಮಂತ್ರಿಗಳು ಬಂಗಾರಪೇಟೆ, ಕೋಲಾರ ಜಿಲ್ಲೆ ಮುಂತಾದ ಕಡೆ ಪ್ರವಾಸ ಮಾಡಿದರು. ಆಗ ಅವರಿಗೆ ಪಾರ್ಟಿಕೊಟ್ಟಿದೆ. ಬಂಗಾರಪೇಟೆಯಲ್ಲಿ ಅರ್ಜಿಕೊಟ್ಟರೆ 4 ರಿಂದ 10 ಚೀಲದವರೆಗೆ ಜೋಳವನ್ನು 8 ದಿವಸಗಳಲ್ಲಿ ಕೊಡುವುದಾಗಿ ಹೇಳಿದರು. ತಕ್ಷಣ ಸೊಸೈಟಿಯ ಮೂಲಕ ಬರೆಸಿದೆವು. ಆದರೆ ಎರಡೂವರೆ ತಿಂಗಳನಂತರ ಬಂತು. ಆಗ ದರ ಜಾಸ್ತಿಯಾಗಿತ್ತು. ಇದನ್ನು ನೋಡಿದರೆ ಆಡುವ ಮಾತುಗಳಿಗೂ ಮತ್ತು ಕೃತಿಗೂ ಸಂಬಂಧವಿಲ್ಲವೆಂಬುದು ವ್ಯಕ್ತವಾಗುತ್ತದೆ. ನಮ್ಮ ದುರದೃಷ್ಟದಿಂದ ನಮ್ಮ ಜಿಲ್ಲೆಯ ಪರಿಸ್ಥಿತಿ ಹದಗೆಟ್ಟಿದೆ. ಕೋಲಾರ ಜಿಲ್ಲೆಯ ಮಂತ್ರಿಗಳು ಸಹ ಇದ್ದಾರೆ, ಮೊದಲು ಆಹಾರ ಖಾತೆಯೋ ಏನೋ ಅವರಿಗಿತ್ತು, ಈಗ ಸಮಾಜಕಲ್ಯಾಣದ ಖಾತೆ ಇದೆ, ಅವರಿಗೆ ಎಲ್ಲಾ ಸೌಕರ್ಯವಿದೆ. ಆದರೆ ತಮ್ಮ ಜಿಲ್ಲೆಯಲ್ಲಿ ಇಂಥ ಪರಿಸ್ಥಿತಿಯಿದೆ, ಸಂಚಾರ ಮಾಡಿ ನೋಡೋಣ, ಸಂಬಂಧಪಟ್ಟ ಮಂತ್ರಿಗಳಿಗೆ ಹೇಳೋಣ ಎಂಬ ಮನಸ್ಸು ಕೂಡ ಅವರಿಗಿಲ್ಲ, ಇಷ್ಟು ಜವಾಬ್ದಾರಿ ಕೂಡ ಇಲ್ಲ, ಯಾವಾಗಲೋ ಅವರು ಬಂದು ದೊಡ್ಡ ಜಮೀನುದಾರರ ಮನೆಯಲ್ಲಿ ಊಟಮಾಡಿಕೊಂಡು ಹೋಗುತ್ತಾರೆ. ಹೀಗೆ ಕಾಲ ತಳ್ಳುತ್ತಿದ್ದಾರೆ. ಇದು ನಮ್ಮ ದುರಾದೃಷ್ಟ. ಮಂತ್ರಿಪದವಿ ಎರಡು ದಿವಸದ ಮಾತು. ಇಷ್ಟು ಹೇಳಿ ನಮ್ಮ ಜಿಲ್ಲೆಯ ವಿಷಯದಲ್ಲಿ ಇಂದು ನಾನು ಸರಕಾರದಲ್ಲಿ ಒತ್ತಾಯಮಾಡುವುದು ಬಜೆಟ್ಟಿನಲ್ಲಿ ಅಲಾಟ್ ಮಾಡಿರುವುದನ್ನು ಹೇಳುವುದು ಹಾಸ್ಯಾಸ್ಪದ. ನಮ್ಮ ಜಿಲ್ಲೆಯಲ್ಲಿ ಎಷ್ಟೋ ತಾಲ್ಲೂಕುಗಳಲ್ಲಿ ಮತ್ತು ಹೋಬಳಿಗಳಲ್ಲಿ ಪರಿಸ್ಥಿತಿ ಬಹಳ ಕಠಿಣವಾಗಿದೆ, ಇದನ್ನು ಸರಕಾರ ತಿಳಿಯಬೇಕು. ಪರಿಹಾರ ಕಾರ್ಯಗಳಿಗಾಗಿ ಎಷ್ಟು ಹಣ ಕೊಡುವರು ಎಂಬುದು ತಿಳಿಯಬೇಕು. ಇಬ್ಬರು ಎಗ್ಸಿಕ್ಯುಟಿವ್ ಎಂಜಿನಿಯರುಗಳನ್ನು ಕೇಳಿದಾಗ 6 ಕೋಟಿ ಕೊಡಲಾಗಿದೆ ಎಂದು ಹೇಳಿದ್ದರು, ಕೊಟ್ಟಿರುವ ಹಣ ಖರ್ಚಾಗಿದೆ. ಮುಂದೆ ಮಾಡುವುದೇನು ? ಆದುದರಿಂದ ಸಣ್ಣ ನೀರಾವರಿ ಕಾಂಗಾರಿಗಳಿಗೆ ಮತ್ತು ಬೇರೆ ಕೆಲಸಗಳಿಗೆ ಹೆಚ್ಚು ಹಣ ಕೊಡಬೇಕು. ಮತ್ತು ಅಹಾರಮಂತ್ರಿಗಳು ಜಾಣ್ಮೆಯಿಂದ ಮಾತನಾಡುವುದನ್ನು ಬಿಟ್ಟು ಜನರಿಗೆ ಹೆಚ್ಚು ಆಹಾರ ಒದಗಿಸಬೇಕು, ವಾರಕ್ಕೆ 2-3 ಕೆ.ಜಿ. ಯಾದರೂ ಕೊಡಬೇಕು. ಇಲ್ಲದಿದ್ದರೆ ಹೇಗೆ ? ಒಂದೆರಡು ತಿಂಗಳಲ್ಲಿ ಸರಿಯಾದ ವ್ಯವಸ್ಥೆ ಮಾಡದಿದ್ದರೆ ಜನರು ಜನರನ್ನೇ ತಿನ್ನುವ ಪರಿಸ್ಥಿತಿ ಬರುತ್ತದೆ, ಕೋಲಾರ ಜಿಲ್ಲೆಯಲ್ಲಿ ಹೀಗಾಗುವುದಕ್ಕೆ ಅವಕಾಶ ಕೊಡಬಾರದು ಎಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

6-30 P.M.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಬಹಳ ಜನ ಈ ವಿಷಯದಲ್ಲಿ ಚರ್ಚೆ ಮಾಡಬೇಕೆಂದು, ಭಾಗವಹಿಸಬೇಕೆಂದು ಹೆಸರು ಕೊಟ್ಟಿದ್ದಾರೆ, ಇಷ್ಟು ಸಂಖ್ಯೆಯಲ್ಲಿ ಮಾತನಾಡುವವರು ಇರುವುದರಿಂದ ಈ ದಿವಸ ಒಂಭತ್ತು ಗಂಟೆಯವರೆಗಾದರೂ ಕುಳಿತುಕೊಂಡು ಎಲ್ಲರೂ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—I am agreeable. I am quite agreeable to sit even beyond Nine.

When the House is trying to discuss an important matter, and act according to an agreed solution, let us not complicate matters by cutting across.

Normally the interval between two times of food is four hours. I would suggest that at 7-30 P.M. I will see that a cup of ceffee is provided so that Members may also feel refreshed and we will sit till Nine. But my difficulty is, even if we sit till 9 P.M. I will not be able to give chance to everybody. There are still 19 names here.

Sri N. HUTCHAMASTHI GOWDA.—Speeches may be limited strictly to ten minutes.

Mr. SPEAKER.—I request that everybody must kindly co-operate without insisting on his right alone.

Sri B. P. GANGADHAR.—May I suggest one thing Sir? This is a subject on which some Hon'ble Members have sent notices of call attention motions, adjournment motions, half-an-hour discussion motions. I am also one of those who have sent in a motion. I would suggest to the Chair that such of the Members who have sent in motions may be given a little more time. But I leave it to your fair judgement Sir.

Mr. SPEAKER.—My idea of fairness goes beyond that. I consider that it is a matter of such vital importance that everybody should be given an opportunity to speak.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಸನ್ಮಾನ್ಯ ಸಭಾಪತಿಗಳೇ, ದೇಶದ ಅಭಾವಪರಿಸ್ಥಿತಿ ವಿಚಾರದಲ್ಲಿ ಹಾಗೂ ಲೆವಿ ವಿಚಾರದಲ್ಲಿ ಮಾತನಾಡಲಿಕ್ಕೆ ಈಗ ನಮ್ಮ ಮುಂದೆ ಇಟ್ಟಿರತಕ್ಕ ವಿಷಯ, ಈಗಾಗಲೇ ನಮ್ಮ ಲೀಡರ್‌ರವರು ಅಭಾವ ಪರಿಸ್ಥಿತಿ ದೇಶದಲ್ಲಿ ಏನಿದೆ ಎಂಬ ವಿಚಾರದಲ್ಲಿ ಮಾತನಾಡಿದ್ದಾರೆ. ನಮ್ಮ ದೇಶದಲ್ಲಿ ಎರಡು ವರ್ಷಗಳಿಂದ ಮಳೆ ಇಲ್ಲದ ಬಡ ರೈತರು ಪರಿತಪಿಸಿದ್ದಾರೆ. ಅದೇ ರೀತಿಯಲ್ಲಿ ಈ ವರ್ಷವೂ ಕೂಡ ಮಳೆ ಬೆಳೆ ಇಲ್ಲದೆ ಅವರು ಆಹಾರವನ್ನು ಕೊಳ್ಳುತ್ತಾ ಇದ್ದಾರೆ ಎಂದರೆ ತಪ್ಪಾಗಲಿಕ್ಕಿಲ್ಲ ಎಂದು ಕಾಣುತ್ತದೆ ಆದರೂ ಕೂಡ ಸರ್ಕಾರದವರು ಯಾವ ಭಾಗದಲ್ಲಿ ಅಭಾವ ಪರಿಸ್ಥಿತಿ ಇದೆ ಎಂಬುದನ್ನು ಇಲ್ಲಿಯವರೆಗೂ ಕೂಡ ಹೋಗಿ ಕಣ್ಣುಬಿಟ್ಟು ನೋಡಿಲ್ಲ ಎಂದು ಅವರಿಗೆ ಈ ಸಂದರ್ಭದಲ್ಲಿ ಎಚ್ಚರಿಸುತ್ತಾ ಇದ್ದೇನೆ. ಏಕೆಂದರೆ ಮಂತ್ರಿಗಳು ಅಧಿಕಾರಿಗಳು ಕೊಡತಕ್ಕ ರಿಪೋರ್ಟಿನ ಮೇಲೆ ಕೆಲವು ಕಡೆ ಮಾತ್ರ ಅಭಾವ ಇದೆ ಎಂದು ಹೇಳಿ ನಮ್ಮ ಮುಂದೆ ತಿಳಿಸಿದ್ದಾರೆ. ಇದು ನಿಜವಾಗಿಯೂ ಕೂಡ ಶೋಚನೀಯವಾದ ವಿಚಾರ. ನಮ್ಮ ಚಿಕ್ಕಮಗಳೂರು ಜಿಲ್ಲೆಯನ್ನು ತೆಗೆದುಕೊಳ್ಳುವುದಾದರೆ 6 ವರ್ಷಗಳಿಂದ ಕೆಲವು ತಾಲ್ಲೂಕುಗಳು ಅಭಾವಕ್ಕೆ ಸಿಕ್ಕಿ ಪರಿತಪಿಸುತ್ತಾ ಇವೆ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳ ಹಾಗೂ ಮಂತ್ರಿ ವರ್ಯರ ಗಮನಕ್ಕೆ ತರುತ್ತಾ ಇದ್ದೇನೆ. 1961ರಲ್ಲಿ ಮೂಡಿಗೆರೆ ತಾಲ್ಲೂಕು ಹಾಗೂ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಸುಮಾರು 200—300 ಇಂಚು ಮಳೆ ಬಿದ್ದು ಆ ಪ್ರದೇಶವೆಲ್ಲಾ ಮಳೆಯಿಂದ ಕೊಚ್ಚಿ ಹೋಯಿತು, ಬೆಟ್ಟಗಳೆಲ್ಲಾ ಒಡೆದು, ರೈತರಿಗೆ ತುಂಬಾ ತೊಂದರೆಯಾಗಿ ಅನಾಹುತವಾಯಿತು. ಅದನ್ನು ಚೇತರಿಸಿಕೊಳ್ಳುವುದಕ್ಕೆ ಈಗ ಮೂರು ವರ್ಷಗಳಾದರೂ ಕೂಡ ಇನ್ನೂ ಸಾಧ್ಯವಾಗಿಲ್ಲ. 6 ವರ್ಷದಿಂದ ಅಲ್ಲಿ ಆಗಿರತಕ್ಕ ಪರಿಸ್ಥಿತಿಯನ್ನು ಸಭೆಯ ಗಮನಕ್ಕೆ ತರುತ್ತಾ ಇದ್ದೇನೆ. ಈಗಿನ ಎರಡು ವರ್ಷಗಳಲ್ಲಿ ಹಿಂಗಾರು ಮಳೆ ಬರದೇ ತರೀ ಫಸಲು ಸಂಪೂರ್ಣವಾಗಿ ಒಣಗಿಹೋಗಿದೆ, ಅದರಿಂದಾಗಿ ಅವರ ಮುಂದಿನ ಜೀವನವನ್ನು ಮಾಡುವುದೇ ಬಹಳ ಕಷ್ಟವಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಅಷ್ಟು ಮಾತ್ರವಲ್ಲದೇ ಚಿಕ್ಕಮಗಳೂರು ತಾಲ್ಲೂಕು, ಮೂಡಿಗೆರೆ ತಾಲ್ಲೂಕು ಹಾಗು ಇನ್ನೂ ಇತರ ಅನೇಕ ತಾಲ್ಲೂಕುಗಳಲ್ಲಿ ಸೊಸೈಟಿ ಮುಖಾಂತರ ರೈತರು ಸಾಲವನ್ನು ಏನು ಪಡೆದಿದ್ದಾರೆ ಅದರ ಒಂದು ಭಾಗವನ್ನು ಕೊಡತಕ್ಕ ಶಕ್ತಿಯೂ ಕೂಡ ಅವರು ಪಡೆದಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಆದ್ದರಿಂದ ಸರ್ಕಾರದವರು ಮೊದಲು ಅಭಾವಪೀಡಿತ ಪ್ರದೇಶಗಳಿಗೆ ಹೋಗಿ ಯಾವ ಯಾವ ಭಾಗದಲ್ಲಿ ರೈತರಿಗೆ ತೊಂದರೆ ಯಾಗಿದೆ ಯಾವ ಭಾಗದಲ್ಲಿ ಮಳೆ ಬೆಳೆಯಾಗಿಲ್ಲ ಎಂಬುದನ್ನು ಪರಿಶೀಲನೆ ಮಾಡಿ ಸಾಧ್ಯವಾದಷ್ಟು ಜಾಗ್ರತೆ ಅವರಿಗೆ ನೆರವನ್ನು ಕೊಡಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ.

ಲೆವಿ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಮಾನ್ಯ ಆಹಾರ ಮಂತ್ರಿಗಳ ಗಮನಕ್ಕೆ ತರಬೇಕೆಂದು ಇದ್ದೇನೆ. ಮಲೆನಾಡು ಪ್ರದೇಶವನ್ನು ಕೇಳುವವರೇ ಇಲ್ಲದಹಾಗಾಗಿದೆ, ಮಲೆನಾಡಿನಲ್ಲಿರ

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ತಕ್ಕವರ ವಿಷಯದಲ್ಲಿ ಒಂದು ತಪ್ಪು ಭಾವನೆ ಬಂದಿದೆ, ಚಿಕ್ಕಮಗಳೂರು ಜಿಲ್ಲೆ ಕಾಫಿ ಪ್ಲಾಂಟೇಷನ್ ಏರಿಯಾ ಅಲ್ಲಿರತಕ್ಕವರೆಲ್ಲರೂ ಧನಿಕರು ಬಂಡವಾಳಗಾರರು ಎಂಬ ತಪ್ಪು ಭಾವನೆ ಸರ್ಕಾರದವರಲ್ಲಿ ಮೂಡಿದೆ. ಅದು ಖಂಡಿತವಾಗಿಯೂ ನಿಜವಾದ ಪರಿಸ್ಥಿತಿಯಲ್ಲ. ನಮ್ಮ ಜಿಲ್ಲೆಯಲ್ಲಿರತಕ್ಕವರು ಹೆಚ್ಚಾಗಿ ರೈತವರ್ಗಕ್ಕೆ ಸೇರಿದವರು, ಅವರಿಗೆ ಅಧಿಕಾರಿಗಳು ಲೆವಿ ವಿಚಾರದಲ್ಲಿ ಏನು ತೊಂದರೆ ಕೊಡುತ್ತಾ ಇದ್ದಾರೆ ಎಂದರೆ ಹೋದ ವರ್ಷ ಲೆವಿ ಹಾಕಿದ್ದನ್ನು ಇನ್ನೂ ಕೂಡ ಕೊಟ್ಟಿಲ್ಲ ಎಂದು ಹೇಳಿ ಅವರ ಮೇಲೆ ಜರುಗಿಸಿದಂತಹ ಕ್ರಮವನ್ನು ಇನ್ನೂ ಕೂಡ ವಾಪಸು ತೆಗೆದುಕೊಂಡಿಲ್ಲ. ಹೊಟ್ಟೆಗಿಲ್ಲದ ಪರಿಸ್ಥಿತಿಯಲ್ಲಿ ಪರಿತಪಿಸುತ್ತಾ ಇರುವಾಗಲೂ ಕೂಡ ಅವರಮೇಲೆ ಕ್ರಮ ಜರುಗಿಸಿದ್ದಾರೆ ಎಂಬ ವಿಚಾರವನ್ನು ಆಹಾರ ಮಂತ್ರಿಗಳ ಗಮನಕ್ಕೆ ತರುತ್ತಾ ಇದ್ದೇನೆ. ಬಡವರ ಮೇಲೆ ಅಂತ ಕೇಸುಗಳನ್ನು ಹಾಕಿದ್ದಾರೆ. ಅವನ್ನು ವಾಪಸು ತೆಗೆದುಕೊಳ್ಳಬೇಕೆಂದು ಈ ಸಮಯದಲ್ಲಿ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅದೇ ರೀತಿ ಅನೇಕ ಜನ ದೊಡ್ಡ ದೊಡ್ಡ ವ್ಯವಸಾಯಗಾರರ ಮೇಲೆ ಕೇಸು ಹಾಕಿದ್ದರು. ಅಂತಹ ಕೇಸುಗಳನ್ನು ಪ್ರಭಾವಶಾಲಿಗಳಿಂದ ಬಂದಂಥ ಶಿಫಾರಸಿನ ಮೇಲೆ ವಾಪಸು ತೆಗೆದುಕೊಂಡಿರತಕ್ಕ ನಿದರ್ಶನಗಳು ಇವೆ, ಅವು ಯಾವುವು ಎಂದು ಹೇಳಿ ಆಹಾರ ಸಚಿವರು ಕೇಳುವುದಾದರೆ ಆ ವಿವರವನ್ನು ಒದಗಿಸಿ ಕೊಡುವುದಕ್ಕೆ ತಯಾರಾಗಿದ್ದೇನೆ ಎಂದು ಈ ಮನೆಯ ಗಮನಕ್ಕೆ ತರುತ್ತಾ ಇದ್ದೇನೆ. ಹಾಗೆ ಬಡವರಮೇಲೆ ಹಾಕಿರತಕ್ಕ ಕೇಸುಗಳನ್ನು ಆದಷ್ಟು ಜಾಗ್ರತೆ ವಾಪಸ್ಸು ತೆಗೆದುಕೊಂಡು ಅವರಿಗೆ ಈ ಕಷ್ಟ ಕಾಲದಲ್ಲಿ ಇನ್ನಷ್ಟು ಹೆಚ್ಚಿನ ಸಹಾಯಗಳನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಆ ಬಡ ರೈತನಿಗೆ ಸರ್ಕಾರದವರು ಆ ಲೆವಿ ಬಗ್ಗೆ ಕೊಡತಕ್ಕ ಬೆಲೆ ಏನಿದೆ ಅದನ್ನೂ ಮತ್ತು ಮಾರುಕಟ್ಟೆಯಲ್ಲಿರತಕ್ಕ ಬೆಲೆಯನ್ನು ಈ ಎರಡನ್ನೂ ಹೋಲಿಸಿದರೆ ಏನು ಅದರಲ್ಲಿ ವ್ಯತ್ಯಾಸವಿದೆ ಎಂಬುದು ಗೊತ್ತಾಗುತ್ತದೆ. ರೈತರಿಗೆ ಲೆವಿ ಕೊಟ್ಟಾಗ ಅವರಿಗೆ ಒಂದು ಕ್ವಿಂಟಾಲಿಗೆ ದೊರೆಯತಕ್ಕದ್ದು ಕೇವಲ 50 ರೂಪಾಯಿಗಳು ಮಾತ್ರ. ಅದೇ ಬತ್ತವನ್ನು ರೈತ ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಅದಕ್ಕೆ ಅಲ್ಲಿ 80 ರೂಪಾಯಿ ಸಿಕ್ಕುತ್ತೆ. ಇಷ್ಟು ವ್ಯತ್ಯಾಸವಿದೆ ಈ ಮಾರಾಟದಲ್ಲಿ. ಹೀಗೆ ಇಲ್ಲಿ ಕಾಣತಕ್ಕ 30 ರೂಪಾಯಿಗಳ ವ್ಯತ್ಯಾಸ ಬೆಳೆಯತಕ್ಕವನಿಗೆ ಹೋಗುತ್ತದೆಯೋ ಅಥವಾ ಅದನ್ನು ಬಳಸತಕ್ಕ ವ್ಯಕ್ತಿಗೆ ಹೋಗುತ್ತದೆಯೋ ಎಂಬುದನ್ನು ನಾವೀಗ ವಿಚಾರ ಮಾಡಬೇಕಾಗಿದೆ. ಸರ್ಕಾರದವರು ಈ ರೀತಿ ಮಾಡುತ್ತಿರುವುದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ. ಇತ್ತ ಕೊಂಡು ತಿನ್ನತಕ್ಕವರಿಗೂ ತೊಂದರೆಯೇ. ಈ ಮಧ್ಯವರ್ತಿ ಜನರು ಯಾರಿದ್ದಾರೆ ಅವರಿಗೆ ಸರ್ಕಾರ ಈಗಿನ ಪರಿಸ್ಥಿತಿಯಲ್ಲಿ 20-30 ರೂಪಾಯಿಗಳ ಆದಾಯವನ್ನು ದೊರೆಯಲು ಅವಕಾಶವನ್ನುಂಟು ಮಾಡಿದೆ. ಇಂಥ ಕಷ್ಟಕಾಲದಲ್ಲಿ ಈ ಮಧ್ಯವರ್ತಿ ದಳ್ಳಾಳಿಗಳಾದರೂ ಏತಕ್ಕಿರಬೇಕು ? ಈ ಪರಿಸ್ಥಿತಿಯಲ್ಲಿ ವಿನಾ ಕಾರಣ ಮಧ್ಯವರ್ತಿ ಜನರಿಗೆ ಸಿಕ್ಕತಕ್ಕ 20-30 ರೂಪಾಯಿಗಳೇನಿವೆ ಈ ಪ್ರಯೋಜನವನ್ನು ರೈತನಿಗೆ ಕೊಡಿ ಇಲ್ಲವೆ ಬಳಕೆಗಾರನಿಗೆ ಸಿಕ್ಕುವಂತೆ ಮಾಡಬೇಕೆಂದು ಸರ್ಕಾರದವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಒಂದು ಟನ್ ಗೋಧಿಯನ್ನು ಮಿಲ್ ಮಾಡುವುದಕ್ಕೆ ಅಂದರೆ ರವೆ ಮಾಡುವುದಕ್ಕೆ ಕೊಟ್ಟರೆ ಅದಕ್ಕೆ 80 ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಆ ಮಿಲ್ ಮಾಲೀಕನಿಗೆ ಒಂದು ಟನ್ ಗೋಧಿಯನ್ನು ರವೆ ಮಾಡಿದರೆ ಆತನಿಗೆ ಉಳಿಯತಕ್ಕ ಬೂಸಾದಲ್ಲಿ ಅವನಿಗೆ 40 ರೂಪಾಯಿಗಳು ಸಿಕ್ಕುತ್ತದೆ. ಅಲ್ಲಿಗೆ ಒಂದು ಟನ್ ಗೋಧಿಯನ್ನು ಮಿಲ್ ಮಾಡಿದರೆ ಮಾಲೀಕನಿಗೆ 120 ರೂಪಾಯಿ ಲಾಭ ಬರುತ್ತದೆ. ಇಷ್ಟೊಂದು ಲಾಭವನ್ನು ಸರ್ಕಾರದವರು ಆ ಮಿಲ್ ಮಾಲೀಕರಿಗೆ ಉಂಟುಮಾಡಿಕೊಡಬೇಕಾಗಿದ್ದರೆ ಮಧ್ಯೆ ಸರ್ಕಾರಕ್ಕೂ ಅವರಿಗೂ ಏನೋ ಒಪ್ಪಂದವಿದ್ದಹಾಗೆ ಕಂಡುಬರುತ್ತಿದೆ. ಇಂಥ ಲಾಭ ಇನ್ನಾವ ಉದ್ಯಮದಲ್ಲಿ ಇಷ್ಟು ಲಾಭ ಬರುತ್ತದೆ ಎಂಬುದನ್ನು ಸರ್ಕಾರದವರು ತಿಳಿಸಬೇಕೆಂದು ಕೇಳುತ್ತೇನೆ. ಅಮೇರಿಕಾದಲ್ಲಿ ಇದೇ ರೀತಿ ಒಂದು ಟನ್ ಗೋಧಿಯನ್ನು ಮಿಲ್ ಮಾಡಿದರೆ ಅಂದರೆ ಆಟಾ, ರವೆ ಇತ್ಯಾದಿಗಳನ್ನು ಮಾಡಿದರೆ ಮಿಲ್ ಮಾಲೀಕನಿಗೆ 20 ರೂಪಾಯಿ ಸಿಕ್ಕುತ್ತದೆ, ಆಸ್ಟ್ರೇಲಿಯಾದಲ್ಲಿ ಒಂದು ಟನ್‌ಗೆ ಮಾಲೀಕನಿಗೆ 30 ರೂಪಾಯಿ ಸಿಕ್ಕುತ್ತದೆ. ಆದರೆ ಇಲ್ಲಿ ಮಾಲೀಕನಿಗೆ 120 ರೂಪಾಯಿಗಳು ಸಿಕ್ಕುತ್ತಿರುವುದರಿಂದ ಮಿಲ್ ಮಾಲೀಕನಿಗೂ ಮತ್ತು ಸರ್ಕಾರಕ್ಕೂ ಏನೋ ಒಂದು ಸಂಬಂಧ ಇದ್ದಹಾಗೆ ಕಂಡುಬರುತ್ತದೆ.

ಇನ್ನು ರೈತನು ಬೆಳೆಯತಕ್ಕ ಕಬ್ಬನ್ನು ಸಂಪೂರ್ಣವಾಗಿ ಕಾರ್ಖಾನೆಯ ಮಾಲೀಕನಿಗೆ ಸರ್ಕಾರ ನಿಗದಿ ಮಾಡತಕ್ಕ ಬೆಲೆಗೆ ಮಾರಾಟ ಮಾಡಬೇಕಾಗಿದೆ. ಹಾಗೆ ಮಾರಾಟ ಮಾಡಿದ ಕಬ್ಬಿನಿಂದ ಶೇ: 60ರಷ್ಟು ತಯಾರಾದ ಸಕ್ಕರೆಯನ್ನು ಸಾರ್ವಜನಿಕರಿಗೆ ಒಂದು ನಿಗದಿಯಾದ ದರದಲ್ಲಿ ಕೊಟ್ಟು ಇನ್ನುಳಿಯತಕ್ಕ ಶೇ. 40 ಭಾಗದ ಸಕ್ಕರೆಯನ್ನು ಮಿಲ್ ಮಾಲೀಕನು ತನಗೆ ಇಷ್ಟಬಂದ

ದರದಲ್ಲಿ ಯಾರಿಗಾದರೂ ಮಾರಿಕೊಳ್ಳಬಹುದೆಂದಿದೆ. ಹೀಗಾಗಿ ಈ ದಿವಸ ಒಂದು ಕ್ವಿಂಟಾಲ್ ಸಕ್ಕರೆ ಬೆಲೆ 450-500 ರೂಪಾಯಿಗಳಿವೆ. ನಮ್ಮ ದೇಶದಲ್ಲಿ ಒಂದು ಕೆಲ ಸಕ್ಕರೆಗೆ ಅಂದರೆ ಒಂದು ಕ್ವಿಂಟಾಲ್ ಸಕ್ಕರೆಗೆ 450 ರೂಪಾಯಿಗಳ ಬೆಲೆ ಒಂದು ಕಡೆ ಇದ್ದರೆ ಇನ್ನೊಂದು ಅದೇ ಸಕ್ಕರೆಯನ್ನು 150 ರೂಪಾಯಿಗೆ ಮಾರಾಟ ಮಾಡಲಾಗುತ್ತಿದೆ. ಹೀಗೆ ಒಂದೇ ಕಡೆ ಎರಡು ದರದಲ್ಲಿ ಮಾರಾಟವಾಗುತ್ತಿದೆ. ಇದನ್ನು ಸರ್ಕಾರದವರು ಕೂಡಲೆ ಗಮನಕ್ಕೆ ತೆಗೆದುಕೊಂಡು ಗ್ರಾಹಕರಿಗೆ ಸರಿಯಾದ ರೀತಿಯಲ್ಲಿ ಬೆಲೆ ದೊರೆಯುವಂತೆ ಮಾಡಬೇಕೆಂದು ಹೇಳುತ್ತೇನೆ. ನಾನು ಕೇವಲ ಉದಾಹರಣೆಗಾಗಿ ಹೇಗೆ ಸಾಮಾನು ಸರಂಜಾಮುಗಳಲ್ಲಿ ವ್ಯತ್ಯಾಸವಾಗುತ್ತಿದೆ ಎಂಬುದಕ್ಕೆ ಸಕ್ಕರೆ ಮತ್ತು ಗೋಧಿ ವಿಚಾರ ತಿಳಿಸಿದೆ. ಇದೇ ರೀತಿ ಪ್ರತಿಯೊಂದು ವಸ್ತುಗಳ ಮಾರಾಟದಲ್ಲಿಯೂ ವ್ಯತ್ಯಾಸಗಳು ಇರುತ್ತವೆ. ಈ ವ್ಯತ್ಯಾಸಕ್ಕೆಲ್ಲಾ ಸರ್ಕಾರದವರ ಕೈವಾಡವೇ ಮೂಲ ಎಂಬುದಾಗಿ ಕಂಡುಬರುತ್ತಿದೆ. ತಂಬಾಕದ ರೈತರ ವಿಚಾರವೂ ಇಷ್ಟೆ. ಸರ್ಕಾರದವರು ಬಡ ರೈತನನ್ನು ಉದ್ಧಾರ ಮಾಡುತ್ತೇವೆಂದು ಹೇಳಿ ಅವನು ದೇಶದ ಬೆನ್ನುಮೂಳೆ ಎಂದು ಹೇಳುತ್ತಿರುವುದರಲ್ಲಿ ಅರ್ಥವಿಲ್ಲ—ಅವನ ಬೆನ್ನುಮೂಳೆ ಕರಭಾರದಿಂದ ಮುರಿದಿಲ್ಲ ಅವನೇ ಸಮಾಧಿಯಾಗಿ ಹೋಗಿದ್ದಾನೆ ಎಂಬುದಾಗಿ ಮಾನ್ಯ ಶಿವಪ್ಪನವರೇನು ಹೇಳಿದರು ಅದು ಅಕ್ಷರಶಃ ಸತ್ಯವಾದ ಮಾತು. ರೈತನ ಮೇಲೆ ಸರ್ಕಾರದವರು ದಿನದಿನಕ್ಕೂ ಕಂದಾಯಗಳನ್ನು ಹೇರುತ್ತಿದ್ದಾರೆ. ಹಿಂದೆ ಅವನು ಕೊಡುತ್ತಿದ್ದ ಕಂದಾಯದ ಮೂರು ಪಟ್ಟು—ನಾಲ್ಕು ಪಟ್ಟು ಕಂದಾಯವನ್ನು ಹೆಚ್ಚು ಮಾಡಿದ್ದಾರೆ. ಸರ್ಕಾರದವರು ಇದನ್ನು ಜಾಗ್ರತೆಯಾಗಿ ಪರಿಶೀಲನೆ ಮಾಡಿ ಈ ಹೊರೆಯನ್ನು ತಗ್ಗಿಸಬೇಕೆಂದು ಹೇಳುತ್ತೇನೆ.

ಇನ್ನು ಪ್ರೊಹಿಬಿಷನ್ ವಿಚಾರಕ್ಕೆ ಬಂದರೆ ಇದರಲ್ಲಿ ಯಾವ ತತ್ವವೂ ಅಡಕವಾಗಿಲ್ಲ. ಒಂದು ಕಡೆ ಇದನ್ನು ಪೂರಾ ಸಡಿಲಿಸಿದ್ದರೂ ಇನ್ನೊಂದು ಕಡೆ ಇದರಿಂದ ಜನರ ಶೋಷಣೆ ನಡೆಯುತ್ತಿದೆ.

ಇನ್ನು ಕಡೆಯದಾಗಿ ದೇಶದಲ್ಲಿ ಎಲ್ಲೆಲ್ಲಿ ಅಭಾವಪೀಡಿತ ಪ್ರದೇಶಗಳಿರುತ್ತವೆಯೋ ಅಲ್ಲಿರತಕ್ಕ ಬಡ ಜನರಿಗೆ ಸರ್ಕಾರದವರು ಹೆಚ್ಚಿನ ನೆರವನ್ನು ನೀಡಿ ಅವರನ್ನು ಕೊಂದರೆಯಿಂದ ಪಾರುಮಾಡಬೇಕೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ವಿ. ಕೌಜಲ್ಗಿ (ಪರಸಗಡ).—ಮಾನ್ಯ ಸಭಾಪತಿಗಳೇ, ನಾನೂ ಕೂಡ ಅಭಾವ ಪೀಡಿತ ಪ್ರದೇಶಗಳಿಂದ ಬಂದಿರತಕ್ಕವರಲ್ಲಿ ಒಬ್ಬನಾಗಿರುವುದರಿಂದ ನಾನು ನನ್ನ ಕ್ಷೇತ್ರವಾದ ಬೆಳಗಿ ಬಗ್ಗೆ ನಾಲ್ಕು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ. ನಮ್ಮ ಬೆಳಗಾಂ ಜಿಲ್ಲೆಯ ಬೆಳಗಾಂ, ಪರ್ಸಗಡ್, ರಾಮದುರ್ಗ, ಅಥಣಿ ಮತ್ತು ಗೋಕಾಕ ಈ ಪ್ರದೇಶಗಳಲ್ಲಿ ತಪ್ಪದಂತೆ ಪ್ರತಿ ಮೂರು ವರ್ಷಕ್ಕೆ ಒಮ್ಮೆ, ಅಂದರೆ, ಈ ನಾಲ್ಕು ತಾಲ್ಲೂಕುಗಳಲ್ಲಿ ಅಭಾವ ಪರಿಸ್ಥಿತಿ ಅಥವಾ ದುರ್ಭಿಕ್ಷ ಉಂಟಾಗುತ್ತಲೆ ಇರುತ್ತದೆ. ಆದರೆ ಹಾಗೆ ದುಷ್ಕಾಲ ಬಿದ್ದಾಗ ಅಲ್ಲಿ ಜನರಿಗೆ ಜೀವನೋಪಾಯವನ್ನು ಕಲ್ಪಿಸಲು ಕಾಂಗಾರಿಗಳನ್ನು ಕೈಗೊಳ್ಳುತ್ತಿದ್ದಾರೆ. ಆದರೆ ನನ್ನ ಪರ್ಸಗಡ್ ಮತ್ತು ಸೌಂದತ್ತಿ ತಾಲ್ಲೂಕುಗಳಿಗೆ ಬಂದರೆ ಅಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಸುಮಾರು 10-20 ಹಳ್ಳಿಗಳಲ್ಲಿ ಜನರ ಪರಿಸ್ಥಿತಿ ಬಹಳ ಕಷ್ಟವಾಗಿದೆ. ಅಲ್ಲಿ ರಾಬಿ ಮತ್ತು ಖಾರೀಫ್ ಬೆಳೆಗಳೊಂದೂ ಆಗಿಲ್ಲ. ಕುಡಿಯಲಿಕ್ಕೆ ಅನೇಕ ಗ್ರಾಮಗಳಲ್ಲಿ ನೀರು ಸಹಿತ ಸಿಕ್ಕುವುದಿಲ್ಲ. ಹೀಗಾಗಿ ಅಲ್ಲಿಯ ಜನರು ತಮ್ಮ ಒಂದು ಜೀವನೋಪಾಯಕ್ಕಾಗಿ ಉದ್ಯೋಗವನ್ನು ದೊರಕಿಸಿಕೊಳ್ಳಲು ಬೇರೆ ಬೇರೆ ಸ್ಥಳಕ್ಕೆ ದಾಂಡೇಲಿ ಇತ್ಯಾದಿ ಸ್ಥಳಗಳಿಗೆ ಹೋಗುತ್ತಿದ್ದಾರೆ. ನಾನು ಮೊನ್ನೆ ಈ ಅಧಿವೇಶನಕ್ಕೆ ಬರುವ ಮುನ್ನ ಅಲ್ಲಿಯ ಜನರ ಪರಿಸ್ಥಿತಿ ಬಹಳ ಕನಿಕರವಾದುದಾಗಿತ್ತು. ಇದರ ದೆಸೆಯಿಂದ ಈ ಭಾಗದಲ್ಲಿ ಸರಕಾರದವರು ಹೆಚ್ಚಿನ ಗಮನ ಕೊಡುವುದು ಅವಶ್ಯ ಎಂದು ನಾನು ಇಲ್ಲಿ ಹೇಳುತ್ತೇನೆ. ನಿಜವಾಗಿಯೂ ನೋಡಿದರೆ ಸ್ಕೇರ್ಸಿಟಿ ಎನ್ನುವುದಕ್ಕೆ ಬದಲಾಗಿ ಫ್ಯಾಮಿನ್ ಏರಿಯ ಎಂದು ಹೇಳಲಿಕ್ಕೆ ಆಗುವುದಿಲ್ಲವೆ? ಇಲ್ಲಿರುವ ಅಧಿಕಾರಿಗಳು ಈ ರೀತಿ ಮಾಡುವುದು ಸರಿಯಲ್ಲ. ಕೆಳಗಿನ ಅಧಿಕಾರಿಗಳು ಎಂದರೆ ಅಮಲ್ದಾರರು ಆಣೆವಾರಿ ಹಾಕುವಾಗ ಒಮ್ಮೊಮ್ಮೆ ನಾಲ್ಕಾಣೆಗಿಂತ ಕಡಿಮೆ ಇದ್ದರೆ ಅಥವಾ ಮೂರು ಆಣೆಗಿಂತ ಕಮ್ಮಿ ಇದ್ದರೆ ಇದನ್ನು ಫ್ಯಾಮಿನ್ ಏರಿಯಾ ಎಂದು ಹೇಳಲಿಕ್ಕೆ ಬರುತ್ತದೆ ಎಂದು ಹೇಳುತ್ತಾರೆ. ಇಲ್ಲ ನಿಜವಾದ ಪರಿಸ್ಥಿತಿಯನ್ನು ನೋಡಿದರೆ ಅರ್ಧಕ್ಕಿಂತ ಹಳ್ಳಿಗಳಲ್ಲಿ ಬೆಳೆಗಳೇ ಇಲ್ಲದೇ ಇರುವುದರಿಂದ ಇದನ್ನು ಫ್ಯಾಮಿನ್ ಏರಿಯಾ ಎಂದು ಸರಕಾರದವರು ಕೂಡಲೇ ಡಿಕ್ಲೇರ್ ಮಾಡಬೇಕು ಎಂದು ಇಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆದರೆ ಸರಕಾರದ ಧೋರಣೆ ನೋಡುವಾಗ ಇದನ್ನು ತಮ್ಮ ಕಡೆಗಳಲ್ಲಿ ರಸ್ತೆ ಅಭಾವಗಳ ಕೆಲಸಗಳು ಇವೆ ಆದುದರಿಂದ ಇವನ್ನು ಸ್ಕೇರ್ಸಿಟಿ ಏರಿಯಾ ಎಂದು ಮಾಡಿ ಇದಕ್ಕೆ ಸರಕಾರ ಸ್ವಲ್ಪ ನೆರವು ಕೊಡಬಹುದು ಎಂದು ಮಾಡಬಹುದು. ಫ್ಯಾಮಿನ್ ಏರಿಯಾ ಎಂದು ಮಾಡಿದರೆ ಸರಕಾರದವರೇ ಎಲ್ಲ ಜವಾಬುದಾರಿಗಳನ್ನೂ ವಹಿಸಿಕೊಳ್ಳಬೇಕಾಗುತ್ತದೆ ಎಂದು

(ಶ್ರೀ ಎಚ್. ವಿ. ಕೌಜಲ್ಗಿ)

ಸರಕಾರ ಇದನ್ನು ಸ್ಕೇರ್ಸಿಟಿ ಏರಿಯಾ ಎಂದು ಡಿಕ್ಲೇರ್ ಮಾಡಲು ಕಾತರವಾಗಿರುವುದು ಕಂಡು ಬರುತ್ತಿದೆ. ಸರಕಾರ ಆ ರೀತಿ ಮಾಡಬಾರದು ಎಂದು ಸಲಹೆ ಮಾಡುತ್ತೇನೆ. ಸರಕಾರ ಈಗ ರ್‍ಯಾರೂ ಇಲ್ಲಿನ ಪರಿಸ್ಥಿತಿಯನ್ನು ನೋಡಿ ಇದನ್ನು ಫ್ಯಾಮಿನ್ ಏರಿಯಾ ಎಂದು ಡಿಕ್ಲೇರು ಮಾಡಬೇಕೆಂದು ಸರಕಾರಕ್ಕೆ ಇಲ್ಲಿ ವಿನಂತಿ ಮಾಡುತ್ತೇನೆ.

ದುಷ್ಕಾಲದ ಭಾಗದಲ್ಲಿ ಆಗಲಿ, ಫ್ಯಾಮಿನ್ ಕಾಲದಲ್ಲಾಗಲಿ ಏನೇನೋ ಯೋಜನೆಗಳನ್ನು ಕೈಗೊಳ್ಳಬೇಕು ಎಂದು ವಾಪೂಲು ಪ್ರಕಾರ ಮಾಡುತ್ತ ಬರುತ್ತಿದ್ದಾರೆ. ಇದರ ಬಗ್ಗೆ ನಾನು ಕೇವಲ ನಾಲ್ಕು ಸಲಹೆಗಳನ್ನು ಮಾತ್ರ ಸರಕಾರದ ಮುಂದೆ ಇಡುತ್ತೇನೆ ಮತ್ತು ಸರಕಾರದವರು ಇದರ ಬಗ್ಗೆ ಲಕ್ಷ್ಯಕೊಡಬೇಕೆಂದು ಹೇಳುತ್ತೇನೆ.

ಪ್ರಥಮವಾಗಿ ನಾನು ಹೇಳುವುದು, ನಾನು ಮೊದಲು ಹೇಳಿದ ನಾಲ್ಕು ತಾಲ್ಲೂಕುಗಳಲ್ಲಿ ಯಾವುದೇ ನೀರಾವರಿ ಯೋಜನೆ ಮಾಡಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ಇಲ್ಲಿ ಬೆಳೆಯಾಗಲು ಮಳೆಯ ಪರ್ಸಂಟೇಜೂ ಕೂಡ ಕಡಿಮೆ. ಇದರಿಂದ ಇಲ್ಲಿ ಯಾವ ನೀರಾವರಿಯನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ಅಲ್ಲಲ್ಲಿ ರಸ್ತೆಗಳ ಕೆಲಸ ಹಾಗೂ ಬಂಡಿಂಗು ಕೆಲಸಗಳನ್ನು ಅಲ್ಲಲ್ಲಿ ಮಾಡಬೇಕಾದ ಪರಿಸ್ಥಿತಿ ಇದೆ. ಯಾವುದೇ ಕೆಲಸವನ್ನು ಶುರು ಮಾಡಬೇಕಾಗಿದ್ದರೆ ಸರಕಾರದವರು ಇಲ್ಲಿರುವ ಡಿವಿಜನಲ್ ಆಫೀಸರು ಅಥವಾ ಡಿಸ್ಟ್ರಿಕ್ಟ್ ಆಫೀಸರು ಇಂತಿಂತಹ ಕೆಲಸಗಳನ್ನು ಮಾಡಬೇಕೆಂದು ಸರಕಾರಕ್ಕೆ ಒಂದು ಶಿಫಾರಸನ್ನು ಕಳುಹಿಸಿದಾಗ ಅದರ ಫೈಲು ಅಲ್ಲಿ ಇಲ್ಲಿ ಓಡಾಡಿ ಬರಲು ಸುಮಾರು ಹತ್ತು, ಹದಿನೈದು ದಿವಸಗಳ ಕಾಲ ತಡವಾಗಿ ಬರುತ್ತವೆ ಮತ್ತು ಇದಕ್ಕೆ ಮುಖ್ಯವಾಗಿ ಬೇಕಾದ ರೊಕ್ಕ ಬರುವುದೂ ನಿದಾನವಾಗುತ್ತದೆ. ಇದರಿಂದಾಗಿ ಯಾವ ಕಾಲಕ್ಕೆ ಉದ್ಯೋಗವಿಲ್ಲದವರಿಗೆ ಉದ್ಯೋಗಗಳನ್ನು ಕೊಡಬೇಕೆಂದು ಇರುತ್ತೇವೋ ಆಗ ಅವರಿಗೆ ಯಾವ ಉದ್ಯೋಗವನ್ನೂ ಕೊಡುವುದಕ್ಕೆ ಆಗುತ್ತಿಲ್ಲ. ಆದುದರಿಂದ ಸರಕಾರದವರು ಆಯಾ ಡಿಸ್ಟ್ರಿಕ್ಟಿನಲ್ಲಿರತಕ್ಕ ಆಫೀಸರುಗಳಿಗೇ ಫುಲ್ ಅಥಾರಿಟಿಯನ್ನು ಕೊಡತಕ್ಕದ್ದು ಅಗತ್ಯ. ಈಗ ಆಯಾ ಜಿಲ್ಲೆಯಲ್ಲಿ ಡೆಪ್ಯೂಟಿ ಕಮಿಷನರು ಎನ್ನುವ ಅಧಿಕಾರಿಗಳಿದ್ದಾರೆ. ಈ ಅಧಿಕಾರಿಗಳಿಗೇ ಸರಕಾರ ಎಲ್ಲ ಅಧಿಕಾರಗಳನ್ನೂ ಕೊಡಬೇಕು ಮತ್ತು ಸ್ಕೇರ್ಸಿಟಿ ಏರಿಯಾದಲ್ಲಿರುವ ಯಾರಾದರೂ ಒಬ್ಬರು ಮೆಂಬರು ಇದ್ದರೆ ಅವರನ್ನೂ ಕೂಡಿಕೊಂಡು ಯಾವ ಕೆಲಸಗಳನ್ನು ಮಾಡಬೇಕು ಎನ್ನುವುದನ್ನು ನಿರ್ಣಯ ಮಾಡಿ ಅವನ್ನು ಕೂಡಲೇ ತೆಗೆದುಕೊಳ್ಳುವಂತೆ ತಕ್ಕ ಏರ್ಪಾಡುಗಳನ್ನು ಮಾಡಬೇಕು. ಈಗ ಇದರ ಪ್ಲಾನು ಎಸ್ಟಿಮೇಟುಗಳು ಇತ್ಯಾದಿಗಳು ಪೂರ್ಣವಾಗಿ ಆಗಬೇಕಾದರೆ ಇದರಲ್ಲಿರುವ ರೆಡ್‌ಟೇಪಿಸಂ ಎನ್ನುವುದು ಹೋಗಬೇಕು. ಕೆಳಗಿನ ಆಫೀಸರುಗಳ ಬಗ್ಗೆ ವಿಶ್ವಾಸವಿಟ್ಟು ಅವರಿಂದಲೇ ಎಲ್ಲ ಕೆಲಸಗಳನ್ನೂ ತೆಗೆದುಕೊಳ್ಳುವಂತೆ ಮಾಡಬೇಕು. ಇಲ್ಲದಿದ್ದರೆ ಕೆಲಸಗಳಾಗುವುದು ತಡವಾಗುತ್ತವೆ.

ಎರಡನೇದು ಬಂಡಿಂಗ್ ವರ್ಕ್‌ಗಳನ್ನು ಮಾಡುವಾಗ ಕೂಲಿ ಮಾಡುವವರಿಗೆ ಸರಿಯಾದ ಪಗಾರ ಕೊಡುವುದಿಲ್ಲ. ಇವರಿಗೆ ಕೂಲಿ ಕೊಡಬೇಕಾದರೆ 15—20 ದಿವಸಗಳಾಗುತ್ತವೆ. ಇದನ್ನು ತಪ್ಪಿಸಬೇಕು. ಈಗಿರುವ ರೂಲ್ಸುಗಳಲ್ಲಿ ಇದು ಸರಿಯಾಗಿಲ್ಲ. ಮೂರನೇದು ಸ್ಕೇರ್ಸಿಟಿ ವರ್ಕ್ ಎಂದೇನು ಹೇಳುತ್ತಾರೆ ಇದರಲ್ಲಿ ಸರಕಾರದವರು ರೇಟು ಕೊಡುವಾಗ ಇದರಲ್ಲಿ ಮೂರನೇ ಒಂದಂಶದಷ್ಟು ಹಿಡಿದುಕೊಂಡು ಕೊಡಬೇಕೆಂದು ಮಾಡುವುದರಿಂದ ಕೂಲಿ ಮಾಡುವವರಿಗೆ ಸಾಕಷ್ಟು ಕೂಲಿ ಸಿಗುವುದಿಲ್ಲ. ಕನಿಷ್ಠ ಪಕ್ಷ ಕೂಲಿ ಮಾಡುವವರಿಗೆ ಇಂದಿನ ತುಟ್ಟಿ ಕಾಲದಲ್ಲಿ ಒಂದೂವರೆ ರೂಪಾಯಿಗಳಿಗಿಂತ ಕಡಿಮೆ ಇರಕೂಡದು. ಇದಕ್ಕೆ ಕಡಿಮೆ ಮಾಡಬಾರದು. ಇದನ್ನು ಸರಕಾರ ಸರಿಪಡಿಸಿ ಸರಿಯಾದ ಕೂಲಿ ಕೊಡುವ ವ್ಯವಸ್ಥೆ ಮಾಡಬೇಕು.

ಮೂರನೇದು ನಮ್ಮ ಕಡೆಗಳಲ್ಲಿ ಕೆಲವು ಭಾಗಗಳಲ್ಲಿ ಬಾವಿಗಳನ್ನು ತೆಗೆಸಲು ಕೆಲ ಕೆಲವು ಹಳ್ಳಿಗಳಲ್ಲಿ ಅನುಕೂಲಗಳಿವೆ. ಆದರೆ ಇದಕ್ಕೆ ಸರಕಾರದಿಂದ ಬೋರಿಂಗ್ ಮಿಷನ್‌ಗಳು ಸಕಾಲದಲ್ಲಿ ಸಿಗುವುದಿಲ್ಲ. ಬೋರಿಂಗು ಮಿಷನ್‌ಗಳು ಪಿ.ಡಬ್ಲ್ಯು.ಡಿ.ಯವರ ಕಡೆ ಇರುತ್ತದೆ. ಇದನ್ನು ಕೆಲವು ಕಡೆ ಟಿ.ಡಿ. ಬೋರ್ಡಿನವರು ಇಲ್ಲವೇ ಡಿವಿಜನಲ್ ಅಧಿಕಾರಿಗಳಿಂದ ಪಡೆಯಬೇಕು ಎಂದು ಹೇಳುತ್ತಾರೆ. ಹೀಗೆ ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಯಲ್ಲಿ ಸರಿಯಾದ ಕೋ-ಆರ್ಡಿನೇಷನ್ ಇಲ್ಲದೇ ಇರುವುದರಿಂದ ಬೋರಿಂಗು ಮಿಷನ್‌ಗಳು ಸಿಗುತ್ತಿಲ್ಲ. ಆದುದರಿಂದ ಸರಕಾರದವರು ಎಲ್ಲ ರೈತರಿಗೂ ಬೋರಿಂಗ್ ಮೆಷಿನ್ ಸಿಗುವ ಸೌಕರ್ಯ ಒದಗಿಸಿಕೊಡಬೇಕು. ಮೂರನೇವಾಗಿ ಕೂಲಿ ಆಳುಗಳಿಗೆ ಕೆಲಸವನ್ನು ಮಾಡಿಸಿ ಅವರಿಗೆ ಕೂಲಿಗಳನ್ನೇನೋ ಕೊಡುತ್ತಿದ್ದಾರೆ. ಆ ಕೂಲಿ ಕೊಡುವ ವೇಳೆಯಲ್ಲೇ ಅದೇ ಜಾಗದಲ್ಲಿ ಕೂಲಿಯ ದುಡ್ಡಿಗೆ ಬದಲಾಗಿ ನ್ಯಾಯವಾದ ದರದಲ್ಲಿ ಕಾಳುಗಳು ಅವರಿಗೆ ಸಿಗುವಂತೆ ತಕ್ಕ ವ್ಯವಸ್ಥೆ ಮಾಡಬೇಕು. ಹಾಗೆ ಮಾಡಿದರೆ ಕೂಲಿಯ ದುಡ್ಡು ತೆಗೆದುಕೊಂಡು ಹೋಗುವುದಕ್ಕೆ ಬದಲಾಗಿ ಅವರಿಗೆ ಕಾಳು ಸಿಕ್ಕಿ ಅನುಕೂಲವಾಗುತ್ತದೆ.

ಮತ್ತು ಫ್ಯಾಮಿನ್ ಏರಿಯಾ ಎಂದು ಯಾವ ಭಾಗವನ್ನು ನಿರ್ದಿಷ್ಟ ಮಾಡಿ ಡಿಕ್ಲೇರ್ ಮಾಡಿರುತ್ತಾರೋ ಅಂತಹ ಯಾವ ಹಳ್ಳಿಗಳಲ್ಲೇ ಆಗಲೀ ಅಲ್ಲಿ ಲೆವಿಯನ್ನು ಖಂಡಿತವಾಗಿ ವಸೂಲು ಮಾಡಬಾರದು ಎಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ) — ಸ್ವಾಮಿ, ಮಾನ್ಯ ಆಹಾರ ಸಚಿವರು ಹಾಗೂ ಕಂದಾಯ ಸಚಿವರು ಆಹಾರದ ಅಭಾವದ ಬಗ್ಗೆ ಒಂದು ಪತ್ರವನ್ನು ಈ ಸಭೆಯ ಮುಂದೆ ಸರಿಯಾಗಿ ಇಡಲಿಲ್ಲ. ಆಹಾರ ಧಾನ್ಯದ ನೀತಿ ಹೇಗಿದೆ ಎನ್ನುವುದನ್ನು ಇಲ್ಲಿ ತಿಳಿಸಿದ್ದಾರೆ. ಸಚಿವರು ಕೊಂಡು ಉಣ್ಣುವವನಿಗೆ ಮತ್ತು ಬೆಳೆಗಾರರಿಗೆ ಅಥವಾ ಕೂಲಿ ಮಾಡಿ ಉಣ್ಣುವವನಿಗೆ ಯಾವ ರೀತಿಯಾಗಿ ಆಹಾರ ಧಾನ್ಯವನ್ನು ಒದಗಿಸುತ್ತೇವೆ ಎನ್ನುವುದರ ಬಗ್ಗೆ ಅವರು ಇಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಸರಕಾರ ಅನುಸರಿಸುತ್ತಿರುವ ನೀತಿಯಲ್ಲಿ ಬೆಳೆಗಾರನ ಹಿತವಾಗಲೀ ಕೊಂಡು ಉಣ್ಣುವವನ ಹಿತವಾಗಲೀ ರಕ್ಷಣೆಯಾಗಲ್ಲವೆಂದು ನಾನು ಇಲ್ಲಿ ಹೇಳುತ್ತೇನೆ. ಸ್ವಾಮಿ, ರೈತನಿಗೆ ಕೊಡುವ ದರ ಎಂದರೆ, support price ಎಂದೇನು ಮಾಡಿದಾರೆ ಅದಕ್ಕಿಂತ ಎರಡು ರೂಪಾಯಿಗಳಷ್ಟನ್ನು ಒಂದು ಕ್ವಿಂಟಾಲ್‌ಗೆ ಜಾಸ್ತಿ ಕೊಡುತ್ತಾರೆ. ನ್ಯಾಯವಾಗಿ ರೈತರಿಗೆ ಸಹಾಯ ಮಾಡುವ ನೀತಿ ಎಂದರೆ ಸರಕಾರ ಗೊತ್ತುಮಾಡಿದ ತಕ್ಕ ಸಪೋರ್ಟ್ ಪ್ರೈಸ್ ಸಮೇತ ಆಹಾರಧಾನ್ಯವನ್ನು ಸುಗ್ಗಿಯ ಕಾಲದಲ್ಲಿ ಎಲ್ಲ ಧಾನ್ಯವನ್ನೂ ಸರಕಾರ ಕೊಳ್ಳುತ್ತದೆ. ಇನ್ನು ಮಾರುವರ ದರ ಇದೆ. ಇದರಲ್ಲಿ ಸೇಲ್ಸ್ ಟ್ಯಾಕ್ಸನ್ನು ಕೂಡ ರಾಜ್ಯ ಸರಕಾರದವರು ಹಾಕಿದ್ದಾರೆ. ಆಹಾರಧಾನ್ಯಗಳ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕುವುದು ಖಂಡನೀಯ, ಮಾರುವವರ ದರ ಸೇಲ್ಸ್ ಟ್ಯಾಕ್ಸ್ ಸೇರಿ ಏನಿದೆ ಎಂದರೆ, ಮೊದಲನೆ ದರ್ಜೆಯದು ಅಕ್ಕಿಗೆ 99 ರೂಪಾಯಿ, ಎರಡನೆ ದರ್ಜೆ ಅಕ್ಕಿಗೆ 94 ರೂಪಾಯಿ, ಮೂರನೇ ದರ್ಜೆ ಅಕ್ಕಿಗೆ 90 ರೂಪಾಯಿ ಹಾಗೂ ಇನ್ನೊಂದು ದರ್ಜೆಗೆ 83 ಎಂದು ಇದರಲ್ಲಿ ನಿಗದಿ ಮಾಡಿದೆ ಎಂದು ಹೇಳಿದ್ದಾರೆ. ಇದರಲ್ಲಿ ಅನೇಕ ಮಧ್ಯವರ್ತಿಗಳೂ ಇರುತ್ತಾರೆ. ಅವರಿಗೆಲ್ಲಾ ಹಣ ಕೊಡಬೇಕು. ಸ್ವಾಮೀ, ವ್ಯಾಪಾರ ಮಾಡುವ [illegible] ಜನತೆಗಾಗಲೀ ಒಪ್ಪುವಂತೆ ಮಾಡುವ ವ್ಯಾಪಾರ ಇದಲ್ಲ. ಏಕೆಂದರೆ, ಈ ದರಗಳನ್ನು ಅಗ್ರಿಕಲ್ಚರಲ್ ಕಮಿಷನ್ನಿನವರು ಗೊತ್ತುಮಾಡುತ್ತಾರೆ ಮತ್ತು ಅವರು ಅನೇಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಿಗದಿ ಮಾಡಿದ್ದಾರೆ ಎಂದು ಮಂತ್ರಿಗಳು ಇಲ್ಲಿ ಕೊಟ್ಟಿರುವ ಹೇಳಿಕೆಯಲ್ಲಿ ಹೇಳಿದ್ದಾರೆ. ಅವರು ಗಣನೆಗೆ ತೆಗೆದುಕೊಂಡಿರುವ ಅಂಶಗಳು ಏನೇನು ಎನ್ನುವುದು ನಮಗೂ ಗೊತ್ತಿದೆ. ಅವರೆ ರಾಷ್ಟ್ರದ ಆದಾಯದಲ್ಲಿ ಎಂಭತ್ತಕ್ಕಿಂತ ಹೆಚ್ಚು ಭಾಗ ರೈತರಿಂದಲೇ ಬರುತ್ತಿದೆ.

7-00 P.M.

ಸರಕಾರಕ್ಕೆ ಇಪ್ಪತ್ತು ಕೋಟಿ ರೂಪಾಯಿ ಸೇಲ್ಸ್‌ಟ್ಯಾಕ್ಸ್ ಮೂಲಕ ಆದಾಯ ಬರುತ್ತಾ ಇದ್ದರೂ ಇದರಲ್ಲಿ ಹದಿನಾರು ಕೋಟಿ ರೂಪಾಯಿ ಗ್ರಾಮೀಣ ಜನರಿಂದ ಆಕಾರವಾಗುತ್ತಿದೆ ಎಂದು ಧೈರ್ಯದಿಂದ ಹೇಳಬಹುದು. ನಮ್ಮ ರಾಜ್ಯದಲ್ಲಿ 50 ಲಕ್ಷ ಜನ ನಗರವಾಸಿಗಳು ಇದ್ದಾರೆ. ಲೆಕ್ಕಹಾಕಿ ನೋಡಿದರೆ ಒಟ್ಟು 25 ಕೋಟಿ ರೂಪಾಯಿ ರೈತರಿಗಾಗಿ ಖರ್ಚು ಮಾಡಬಹುದು, ಆದರೆ ನಗರವಾಸಿಗಳಾದ 50 ಲಕ್ಷ ಜನರ ಸಲುವಾಗಿ ಖರ್ಚು ಆಗುತ್ತಿದೆ. ಕಳೆದ 20 ವರ್ಷಗಳಿಂದ ಖರ್ಚು ಮಾಡಿರತಕ್ಕಂಥ ಹಣದಿಂದ ರೈತ ಮತ್ತು ಗ್ರಾಮ ಹೆಚ್ಚು ಅನುಕೂಲ ಪಡೆದಿದ್ದಾರೆ ಅದುದರಿಂದ ಹೆಚ್ಚು ಕಂದಾಯ ಹೆಚ್ಚು ಲೆವಿ ಕೊಡುವುದಕ್ಕೆ ಹೆಚ್ಚು ತೆರಿಗೆ ಕೊಡುವುದಕ್ಕೆ ಸಮರ್ಥರಾಗಿದ್ದಾರೆ ಎಂದು ವಾದ ಮಾಡುವುದಾದರೆ ಅದು ವಿಷಯಕ್ಕೆ ದೂರವಾದುದು. ಈ ಅಂಶವನ್ನು ಸಮರ್ಥನೆ ಮಾಡುವುದಕ್ಕಾಗುವುದಿಲ್ಲ. ಹೀಗಿರುವಾಗ ಕಾಂಗ್ರೆಸ್ ಸಂಸ್ಥೆಯು ಭೂಕಂದಾಯ ರದ್ದು ಮಾಡುವುದಕ್ಕೆ ತತ್ವಶಃ ಒಪ್ಪಿಕೊಂಡಿದೆ. ಉತ್ತರ ಪ್ರದೇಶದಲ್ಲಿ ಇದಕ್ಕೆ ಪ್ರೋತ್ಸಾಹ ಕೊಟ್ಟು ಭೂಕಂದಾಯ ರದ್ದು ಮಾಡಿದೆ. ಕೇರಳದಲ್ಲಿ ಮಾಡಿದೆ, ಬಿಹಾರಿನಲ್ಲಿ ರದ್ದು ಮಾಡಿದ್ದಾರೆ. ನಮ್ಮ ಹಣಕಾಸಿನ ಮಂತ್ರಿಗಳು ಆಯವ್ಯಯಪಟ್ಟಿಯ ಮೇಲೆ ಭಾಷಣ ಮಾಡುವಾಗ ನಮ್ಮ ರಾಜ್ಯದಲ್ಲಿ ಈಗ ಕಂದಾಯ ಇರುವ ರೀತಿಯಲ್ಲಿ ಕಂದಾಯ ರದ್ದುಮಾಡುತ್ತೇವೆ ಎಂದು ಹೇಳಿದ್ದಾರೆ. ಇದಕ್ಕಾಗಿ ಒಂದು ಸಬ್ ಕಮಿಟಿ ಮಾಡಿದರು. ಅದು ಇನ್ನೂ ರಿಪೋರ್ಟ್ ಕೊಟ್ಟಿಲ್ಲ. 1965-66 ಮತ್ತು 1966-67ರಲ್ಲಿ ಮಳೆಬಾರದೆ ಅಭಾವ ಪರಿಸ್ಥಿತಿ ಉಂಟಾದ ಪ್ರದೇಶದಲ್ಲಿ ವಸೂಲ್ಮಾಡದೇ ಇರತಕ್ಕಂಥ ಕಂದಾಯವನ್ನು ಒಂದೂವರೆ ಪಟ್ಟು ಸರ್‌ಚಾರ್ಜ್ ಹಾಕಿ ವಸೂಲ್ಮಾಡಲಾಗಿದೆ. ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ಶಿವಪ್ಪನವರು ಹೇಳಿದರು ಅಭಾವ ಪರಿಸ್ಥಿತಿ ಉಂಟಾಗಿರುವ ಕಡೆ ಕಂದಾಯ ಮಾಫಿ ಮಾಡಿ ಎಂದು. ಸರಕಾರದ ಯೋಜನೆಗಳಿಗೆ ಕೋಟ್ಯಾನುಕೋಟಿ ರೂಪಾಯಿ ಖರ್ಚುಮಾಡಿ ನೀರಾವರಿ ಯೋಜನೆಗಳನ್ನು ಮಾಡಿದ್ದೀರಿ. ಆದರೆ ಸಮಯಕ್ಕೆ ಸರಿಯಾಗಿ ಸಾಕಷ್ಟು ನೀರು ರೈತರು ಪಡೆದಿದ್ದಾರೆಯೇ? ಎಲ್ಲಿ ನೀರು ಒದಗಿಸಿರುವುದರಿಂದ ಹೆಚ್ಚು ಬೆಳೆ ತೆಗೆಯುತ್ತಾರೋ

(ಶ್ರೀ ಎಸ್. ಗೋಪಾಲಗೌಡ)

ಅಂಥಲ್ಲಿ ಮಾತ್ರ ನೀರಾವರಿ ಸೌಲಭ್ಯಗಳಿಗೆ ಕಂದಾಯ ಹಾಕಬಹುದು. ಅಲ್ಲಿಯ ರೈತರ ಒಪ್ಪಿಗೆ ಪಡೆದು ಕಂದಾಯ ಹಾಕಬೇಕು. ಎಲ್ಲಿ ಮಳೆ ನೀರಿನಿಂದ ಸ್ವಂತ ಲಾಗೋಡಿನಿಂದ ಬೆಳೆ ಮಾಡುತ್ತಾರೋ ಅಂಥಲ್ಲಿ ಕಂದಾಯ ಇರತಕ್ಕದಲ್ಲ, ಲೆವಿ ಹಾಕತಕ್ಕದಲ್ಲ, ಯಾವ ತೆರಿಗೆಯೂ ರೈತನ ಮೇಲೆ ಇರತಕ್ಕದ್ದಲ್ಲ. ಈ ರೀತಿ ಮಾಡುವುದು ಇದು ನ್ಯಾಯವಾದುದು ಎಂದು ಒತ್ತಾಯ ಪೂರ್ವಕ ಹೇಳುತ್ತೇನೆ. ಆದುದರಿಂದ ಕಂದಾಯ ರದ್ದು ಆಗಬೇಕು.

ಇನ್ನು ಲೆವಿ ವಿಷಯ. ನಮ್ಮ ಜಿಲ್ಲೆಯಲ್ಲಿ ನಾಲ್ಕು ಸಾವಿರ ಕ್ವಿಂಟಾಲ್ ವಸೂಲ್ಮಾಡುತ್ತೇವೆಂದು ಹೇಳಿದರು. ಮಳೆ ಬಂದ ಕಾಲದಲ್ಲಿ ಲೆವಿ ವಸೂಲಿಯು ಚೆನ್ನಾಗಿತ್ತು. ಅದಾದ ಮೇಲೆ ಎರಡು ಮಳೆ ಬಂದಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಭದ್ರಾ ತುಂಗಾ ನೀರಾವರಿ ಯೋಜನೆಯ ಮೂಲಕ ಸಾಗು ಆಗತಕ್ಕಂದ ನೀರಾವರಿ ಪ್ರದೇಶ ಬಿಟ್ಟರೆ ನೂರಕ್ಕೆ ಎಂಭತ್ತರಷ್ಟು ಭಾಗ ಮಳೆಯ ನೀರಿನಿಂದ ಸಾಗುವಳಿ ಆಗತಕ್ಕಂಥ ಪ್ರದೇಶವಾಗಿದೆ. ಶಿವಪ್ಪನ ಕಾಲದಲ್ಲಿ ಕಟ್ಟಿಸಿದ ಕೆರೆಗಳ ಹೂಳು ತೆಗೆಸಿಲ್ಲ, ದುರಸ್ತಿ ಮಾಡಿಲ್ಲ, ಸರಕಾರ ಹಣ ಖರ್ಚು ಮಾಡಿಲ್ಲ. ಅಚ್ಚುಕಟ್ಟಿಗೆ ನೀರು ಬರುತ್ತಾ ಇಲ್ಲ. ಎಲ್ಲಿ ನೀರಾವರಿ ಸೌಕರ್ಯ ಒದಗಿಸಲಾಗಿದೆಯೋ ಅಲ್ಲಿಯ ಅಚ್ಚುಕಟ್ಟಿನಲ್ಲಿ ಬೆಳೆದ ಬೆಳೆಯನ್ನು ನೋಡಿಕೊಂಡು ಅಷ್ಟು ಜಮೀನು ಮೇಲೆ ಲೆವೀ ವಸೂಲ್ಮಾಡಬೇಕು. ಮಳೆಯಿಂದ ಬೆಳೆಯತಕ್ಕಂಥ ಪ್ರದೇಶದಲ್ಲಿ ಲೆವಿ ವಸೂಲ್ಮಾಡಬಾರದು. ಒಂದು ವೇಳೆ ಸರಕಾರ ಇಂಥ ಪ್ರದೇಶದಲ್ಲಿ ಲೆವಿ ವಸೂಲ್ಮಾಡುವುದಾದರೆ ಅದನ್ನು ನಾವು ಪ್ರತಿಘಟಿಸಬೇಕು ಎಂದು ಮಾಡಿದ್ದೇವೆ. ಇಂಥ ಪ್ರದೇಶದಲ್ಲಿ ಲೆವಿ ವಸೂಲ್ಮಾಡುವುದಕ್ಕೆ ಸರಕಾರಕ್ಕೆ ಸಾಮಾನ್ಯವಾಗಿ ಹಕ್ಕು ಇಲ್ಲ. ಹತ್ತು ಎಕರೆ ಜಮೀನಿನಲ್ಲಿ ಕೇವಲ ಭತ್ತ ಬೆಳೆದವನು ಏತಕ್ಕೆ ಲೆವಿ ಕೊಡಬೇಕು ? ತೋಟ ಮಾಡಿದವರು ಎಷ್ಟು ಲೆವಿ ಕೊಡುತ್ತಾರೆ ? 30 ಎಕರೆ ಪ್ಲಾಂಟೇಷ್ ಮಾಡಿದವರು ಎಷ್ಟು ಕೊಡುತ್ತಾರೆ ? ಬೇರೆ ಬೆಳೆಗಳಿಗೆ ಎಷ್ಟು ಲೆವಿ ಇದೆ. ಕೇವಲ ಭತ್ತ ರಾಗಿ ಜೋಳ ಬೆಳೆದವನು ಮಾತ್ರ ಏತಕ್ಕೆ ಲೆವಿ ಕೊಡಬೇಕು ? ಎಡಗೈಯಿಂದ ಮಾರಿದರೆ 70 ರೂಪಾಯಿ ದರ ಸಿಕ್ಕುತ್ತದೆ, ನೀವು ಗೊತ್ತು ಮಾಡಿದ 40 ರೂಪಾಯಿ ದರಕ್ಕೆ ಏತಕ್ಕೆ ಕೊಡಬೇಕು ? ಗ್ರಾಮಾಂತರ ಪ್ರದೇಶದಲ್ಲಿ ಧಾನ್ಯ ಕೊಂಡುಕೊಳ್ಳುವ ಜನರಿಗೆ ಕಾಳು ಒದಗಿಸಿದ್ದೀರಾ ? ಶಾನುಭೋಗರು ಲೆಕ್ಕ ಬರೆದ ಪ್ರಕಾರ ನೀವು ಗೊತ್ತು ಮಾಡಿದ ಜಿಲ್ಲೆಗೆ ಏತಕ್ಕೆ ಧಾನ್ಯ ಕೊಡಬೇಕು ? ಶಾನುಭೋಗರು, ಮನೆಯಲ್ಲಿ ಇರತಕ್ಕಂಥ ಜನ ಎಷ್ಟು, ಎಷ್ಟು ಬೆಳೆ ಬಂದಿದೆ ಇದರ ಲೆಕ್ಕ ಸರಿಯಾಗಿ ತೆಗೆದುಕೊಂಡಿಲ್ಲ. ಈ ಲೆಕ್ಕ ಹಸೀ ಸುಳ್ಳು ಇದೆ. ತಮಗೆ ಕಮಿಷನ್ ಕೊಡುತ್ತಾರೆ ಎಂಬ ಆಶೆಯಿಂದ ಚೆನ್ನಾಗಿ ಬೆಳೆ ಬಂದಿದೆ, ಹತ್ತು ಕ್ವಿಂಟಾಲ್ ಇಪ್ಪತ್ತು ಕ್ವಿಂಟಾಲ್ ಲೆವಿ ಹಾಕಿ ಎಂದು ಶಾನುಭೋಗರು ಸುಳ್ಳು ಲೆಕ್ಕ ಬರೆದಿದ್ದಾರೆ. ಅದರ ಮೇಲೆ ನೀವು ಲೆವಿ ಹಾಕಿದ್ದೀರಿ. ಇದು ನ್ಯಾಯವಲ್ಲ. ಆದುದರಿಂದ ಈ ಲೆವಿ ಆಜ್ಞೆಯನ್ನು ನಾವು ಪ್ರತಿಭಟಿಸುತ್ತೇವೆ. ಯಾರು ತಮ್ಮ ಸ್ವಂತ ಮನೆಗೆ ಊಟಕ್ಕೆ ಬೇಕಾಗುವುದಕ್ಕಿಂತ ಹೆಚ್ಚಾಗಿ ಬೆಳೆದು ಕಟ್ಟಿಸಿದನ್ನು ಮಾರಾಟ ಮಾಡಿ ಲಾಭ ಮಾಡಿಕೊಳ್ಳುತ್ತಾರೋ ಅಂಥವರ ಉಗ್ರಾಣವನ್ನು ಸೀಲ್ ಮಾಡಿ ಅವು ಸರಕಾರದ ಉಗ್ರಾಣ ಎಂದು ಮಾಡಿ. ಉಳಿದದ್ದನ್ನು ಮಾರಾಟ ಮಾಡಿ ಲಾಭ ಮಾಡಿಕೊಳ್ಳುತ್ತಾರೆ. ಒಬ್ಬ ಸಂನ್ಯಾಸಿ ಇರುವ ಮಠಗಳಿವೆ. ಒಬ್ಬ ಸಂನ್ಯಾಸಿ ಮತ್ತು ಪರಿವಾರಕ್ಕೆ ಬೇಕಾಗುವಷ್ಟು ಊಟಕ್ಕೆ ಬಿಟ್ಟು ಬಾಕಿ ಎಲ್ಲಾ ಭತ್ತವನ್ನೂ ತೆಗೆದುಕೊಂಡು ಇದು ಸರಕಾರದ ಉಗ್ರಾಣ ಎಂದು ಬೋರ್ಡು ಹಾಕಿಸುವಷ್ಟು ಧಾತಿ ಇದ್ದರೆ. ಅವರ ಊಟಕ್ಕೆ ಎಷ್ಟು ಬೇಕೋ ಅಷ್ಟು ಬಿಟ್ಟು ಬಾಕಿ ಧಾನ್ಯವನ್ನು ಸರಕಾರ ವಶ ಪಡಿಸಿಕೊಳ್ಳಲಿ. ಅದನ್ನು ಮಾಡದೇ 6, 8, 10 ಕ್ವಿಂಟಾಲ್ ಲೆವಿ ಕೊಡಬೇಕೆಂದು ರೈತನ ಶಿಕಾರಿ ಮಾಡುವುದಕ್ಕೆ ನಿಮಗೆ ಯಾರು ಅಧಿಕಾರ ಕೊಟ್ಟರು ? ರೈತ ತಾನು ಬೆಳೆದ ಭತ್ತ ತನಗೋಸ್ಕರ ಇಟ್ಟುಕೊಂಡ ಭತ್ತ ಮಿಲ್ ಮಾಡಿಸುವುದಕ್ಕೆ ಬಂದರೆ ಅದನ್ನು ಮಿಲ್ಲಿನವರು ಮಿಲ್ ಮಾಡಬಾರದು ಎಂದು ಹೇಳುವುದಕ್ಕೆ ನಿಮಗೆ ಅಧಿಕಾರ ಯಾರು ಕೊಟ್ಟರು ? ನಿಮಗೆ ಹೀಗೆ ಹೇಳಲು ಏನು ಅಧಿಕಾರ ? ಈ ರೀತಿ ಜನರ ಶಿಕಾರಿ ಮಾಡಿದರೆ ಹುಷಾರ್ ಎಂದು ಹೇಳಬೇಕಾಗುತ್ತದೆ. ನಿಮಗೆ ಅಧಿಕಾರ ಬರುವದಿಲ್ಲ. ಯಾಕೆಂದರೆ ಬೆಳೆಯುವುದಕ್ಕೆ ರೈತನಿಗೆ ನೀರು ಕೊಡುವುದಿಲ್ಲ, ಭತ್ತ ಬೀಜ ಗೊಬ್ಬರ ಸಾಲ ಯಾವುದೂ ಕೊಟ್ಟಿಲ್ಲ. ಸ್ವಂತ ಶ್ರಮದಿಂದ ರೈತ ಬೆಳೆದಂಥ ಭತ್ತ ಕೇಳುವುದಕ್ಕೆ ನಿಮಗೆ ಅಧಿಕಾರ ಕೊಟ್ಟಿಲ್ಲ. ಒಂದು ವೇಳೆ ಲೆವಿ ವಸೂಲ್ಮಾಡಿದರೆ ಅಧಿಕಾರ ದುರುಪಯೋಗಪಡಿಸಿಕೊಂಡ ಹಾಗೆ ಆಗುತ್ತದೆ ಎಂದು ಹೇಳುತ್ತೇನೆ. ಲೆವಿ ಆಜ್ಞೆಯನ್ನು ಪೂರ್ಣವಾಗಿ ನಾವು ವಿರೋಧಿಸುತ್ತೇವೆ. ಆದುದರಿಂದ ಕಂದಾಯ ರದ್ದುಮಾಡುವುದಕ್ಕೆ ಪರಿಶೀಲನೆ ಮಾಡಬೇಕು, ಕಮಿಷನ್ ಕೊಡುವುದರಿಂದ ಪ್ರಯೋಜನವಿಲ್ಲ, ರಿಲೀಫ್ ಕಾಮಗಾರಿಯಿಂದ ಪ್ರಯೋಜನವಿಲ್ಲ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಸಿ. ಎಂ. ಚುರ್ಚಿಹಳ್ಳಿಮಠ್ (ಮುಂದರ್ಗಿ).—ಸನ್ಮಾನ್ಯ ಸಭಾಪತಿಗಳೇ, ಇಂದು ಅಭಾವ ಪರಿಸ್ಥಿತಿ ಬಗ್ಗೆ ಅನೇಕ ಸದಸ್ಯರು ತಂತಮ್ಮ ಕ್ಷೇತ್ರದಲ್ಲಿರತಕ್ಕ ಲೋಪದೋಷಗಳನ್ನು ಹೇಳಿದ್ದಾರೆ. ಕೆಲವು ದಿನಗಳಿಂದ ಮಳೆಯೇ ಆಗಿಲ್ಲ, ಪರಿಸ್ಥಿತಿ ಬಹಳ ಕೆಟ್ಟಿದೆ ಎಂಬುದಾಗಿ ಹೇಳಿದ್ದಾರೆ. ನಮ್ಮ ಮಾನ್ಯ ಸದಸ್ಯರಾದ ಶ್ರೀ ಶಿವಪ್ಪನವರು ಅವರ ಕ್ಷೇತ್ರದಲ್ಲಿ 2-3 ವರ್ಷಗಳಿಂದ ಮಳೆಯ ಅಭಾವವಿದೆಯೆಂದು ಹೇಳಿದರು. ನಮ್ಮ ಶಾಸ್ತ್ರಿಗಳು ಮೂರು ವರ್ಷಗಳಿಂದಲೂ ಎಂತಲೂ, ನಮ್ಮ ಶ್ರೀ ವೆಂಕಟಗಿರಿಯಪ್ಪನವರು ನಾಲ್ಕು ವರ್ಷಗಳಿಂದಲೂ ಎಂದು ಹೇಳಿದರು. ಇದನ್ನೆಲ್ಲಾ ನೋಡಿದರೆ ನಮ್ಮ ಕ್ಷೇತ್ರದ ಸ್ಥಿತಿ 11 ವರ್ಷಗಳಿಂದಲೂ ಒಂದೇ ಸಮನೆ ಇದೆ, ಅಂದರೆ ಬರ ಇದ್ದೇ ಇದೆ. ನಮ್ಮ ಕ್ಷೇತ್ರದ ಜನರಿಗೆ ನಿಜವಾಗಿ ಪ್ರಾಣ ಇದೆಯೋ ಇಲ್ಲವೇ ಎಂಬ ಸಂಶಯ ನನಗೆ ಬಂದಿದೆ. ಆದರೂ ಸಹ ಅನೇಕರು ಜೀವಂತರಾಗಿದ್ದಾರೆ ಎಂಬುದಾಗಿ ಹೇಳುತ್ತೇನೆ. ಆದರೆ ನಮ್ಮಲ್ಲಿ ಹೆಚ್ಚಿನ ಅಭಾವವೆಂದರೆ, ಮಳೆ ಸಾಕಷ್ಟಿಲ್ಲ, ಕುಡಿಯಲಿಕ್ಕೆ ನೀರು ಇಲ್ಲ, ಜನಗಳಿಗೆ ಉದ್ಯೋಗವಿಲ್ಲ, ಆಹಾರವಿಲ್ಲ, ದನಗಳಿಗೆ ಮೇವು ಇಲ್ಲ. ಹೀಗಾಗಿ ಅನೇಕ ವರ್ಷಗಳಿಂದಲೂ ನಾವು ಆಹಾರ ಅಭಾವವನ್ನು ಅನುಭವಿಸುತ್ತಿದ್ದೇವೆ. ಮುಂದರ್ಗಿ ತಾಲ್ಲೂಕಿನಲ್ಲಿ ಸುಮಾರು 11 ವರ್ಷಗಳಿಂದಲೂ ಬರಗಾಲವಿದೆಯೆಂದು ಸರ್ಕಾರದ ರಿಕಾರ್ಡ್ಸ್‌ನಲ್ಲಿಯೇ ಸ್ಪಷ್ಟವಾಗಿ ತೋರುತ್ತಿದೆ. ಹಳ್ಳಿಗೊಂಡಿ, ತಿಮ್ಮಾಪುರ, ವೆಂಕಟಪುರ ಮತ್ತು ಹಳ್ಳಿಕೆರೆ—ಮುಂತಾದ ಪ್ರದೇಶಗಳಲ್ಲಿ ಕುಡಿಯಲಿಕ್ಕೆ ನೀರೇ ಇಲ್ಲ. ಸರ್ಕಾರದವರು ಅಲ್ಲಿಗೆ ತವಕದಿಂದ ನೀರು ಒದಗಿಸುವ ಯೋಚನೆ ಮಾಡಬೇಕೆಂದು ನಾನು ಒತ್ತಾಯಮಾಡುತ್ತಿದ್ದೇನೆ. ಆ ಕಾರ್ಯ ಕೂಡಲೇ ಪ್ರಾರಂಭವಾಗುತ್ತದೆಂದು ನಾನು ನಂಬಿದ್ದೇನೆ. ಅನೇಕರು ಆಹಾರ ಅಭಾವಕ್ಕೆ ತುತ್ತಾಗಿದ್ದಾರೆ. ಅದಕ್ಕಾಗಿ ಸರ್ಕಾರದವರು ನಮ್ಮಲ್ಲಿ ಮಾಡಬೇಕಾದ ಯೋಜನೆಗಳು ಏನೆಂದರೆ, ಅಭಾವ ಕೆಲಸಗಳು ಎಲ್ಲೆಲ್ಲಿ ಈಗ ನಡೆಯುತ್ತಿವೆಯೋ ಅವನ್ನು ಬಂದ್ ಆಗದಂತೆ ನೋಡಿಕೊಳ್ಳಬೇಕು. ಈ ಅಭಾವ ಕಾಲದಲ್ಲಿ ಅನೇಕ ಜನಗಳು ಕೆಲಸಕ್ಕೆ ಬರುತ್ತಾ ಇದ್ದಾರೆ, ಆದರೆ ಅವರಿಗೆ ಸಾಕಷ್ಟು ಕೂಲಿ ಒದಗುತ್ತಾ ಇಲ್ಲವೆಂಬ ಕೂಗು ಕೇಳುತ್ತಾ ಇದೆ. ಆದಕ್ಕೆ ಸರಿಯಾದ ಕೂಲಿ ಕೊಡುವ ಪ್ರಯತ್ನ ಜಾಗ್ರತೆಯಾಗಿ ಆಗಬೇಕು. ಕೂಲಿ ಮಾಡುವ ಜನರಿಗೆ ಆಹಾರ ಯೋಗ್ಯ ರೀತಿಯಲ್ಲಿ ಒದಗಬೇಕು. ಏಕೆಂದರೆ ಆಹಾರ ವಿತರಣೆ ಕೆಲಸದಲ್ಲಿ ಯಾರಿಗೆ ಹೊಲಗಳು ಇಲ್ಲವೋ ಅವರಿಗೆ ಆಹಾರ ಧಾನ್ಯಗಳನ್ನು ಮೊದಲು ಕೊಡಬೇಕು. ನಮ್ಮಲ್ಲಿ 11 ವರ್ಷಗಳಿಂದ ಬರಗಾಲವಿರುವುದರಿಂದ ಅನೇಕರು ಅಲ್ಲಿ ಕೂಲಿ ಕೆಲಸಕ್ಕೇ ಬರುತ್ತಾ ಇದ್ದಾರೆ. ಅದ್ದರಿಂದ ಕೂಲಿ ಕೆಲಸ ಮಾಡುವವರಿಗೆ ಕಾಳುಗಳನ್ನು ಕೊಡಬೇಕೆಂದು ಸೂಚನೆ ಮಾಡುತ್ತೇನೆ. ಇನ್ನು ನಮ್ಮ ತಾಲ್ಲೂಕಿನ ಮಧ್ಯೆ ತುಂಗಭದ್ರಾ ನದಿ ಧಾರಾಳವಾಗಿ ಹರಿಯುತ್ತಿದೆ. ಅದಕ್ಕೆ ಸರ್ಕಾರದವರು ಲಿಫ್ಟ್ ಇರ್ರಿಗೇಷನ್ ಯೋಜನೆ ಮಾಡಿದರೆ ಇರತಕ್ಕ ಬರಗಾಲವು ಕಡಿಮೆಯಾಗುತ್ತದೆ. ಆ ಕೆಲಸ ತೀವ್ರ ರೀತಿಯಲ್ಲಿ ಆಗಬೇಕು. ನಮ್ಮ ತಾಲ್ಲೂಕಿನಲ್ಲಿ ಕೆರೆಗಳೂ ಸಹ ಇವೆ. ಮಳೆಯಾಗದಿದ್ದರೆ ಆ ಕೆರೆಗಳಲ್ಲಿ ನೀರೇ ಇರುವುದಿಲ್ಲ. ಕೆರೆಗಳಲ್ಲಿ ಹೂಳು ತೆಗೆಯುವ ಕೆಲಸವಾಗಲೀ ಜೊಂಡು ತೆಗೆಯುವ ಕೆಲಸವಾಗಲೀ ಮಾಡಿಸಿದರೆ ಎಷ್ಟೋ ಜನರಿಗೆ ಕೂಲಿಯಾದರೂ ಸಿಗುತ್ತದೆ. ಆ ರೀತಿ ಕೆಲಸವಾದರೆ ಮುಂದೆ ನೀರು ಅಲ್ಲಿ ನಿಲ್ಲುತ್ತದೆಂಬ ಆಶಯಾದರೂ ಬರುತ್ತದೆ. ಅಂತಹ ಪ್ರಸಂಗಗಳು ಅಲ್ಲಿ ಬಹಳ ಇವೆ. ಆಲೂರು, ಮತ್ತು ಗಾಂಬಾಳ ಪ್ರದೇಶಗಳಲ್ಲಿ ಫೀಡರ್ ಚಾನಲ್ ಕೆಲಸಗಳು ಕೂಡಲೇ ಆಗಬೇಕು. ಈ ಕೆಲಸವನ್ನು ರೆವಿನ್ಯೂ ಖಾತೆಯವರು ತೀವ್ರ ರೀತಿ ಮಾಡಬೇಕು. ಇನ್ನು ಪಿ. ಡಬ್ಲ್ಯೂ. ಡಿ. ಯವರು ಅನೇಕ ಯೋಜನೆಗಳಿಗೆ ಪ್ಲಾನು, ಎಸ್ಟಿಮೇಟುಗಳನ್ನು ತೀವ್ರಗತಿಯಿಂದ ಮಾಡಬೇಕು. ಏಕೆಂದರೆ ಇನ್ನು ಕೆಲವು ದಿನಗಳು ಕಳೆದರೆ ಮುಂದಿನ ಮಳೆಯಾದರೆ ಆಗ ಯಾವ ಕೆಲಸವೂ ಆಗುವುದಿಲ್ಲ. ಮತ್ತೆ ಬರಗಾಲ ನಮಗೇ ಉಳಿಯುತ್ತದೆ. ದೋಣಿ ಮತ್ತು ಮುಂಡುವಾಡಿಕೆ ಕೆರೆಗಳು ಈಗಾಗಲೇ ಮಂಜೂರಾಗಿದೆ. ಅವನ್ನೂ ಕೂಡ ಜಾಗ್ರತೆ ಕಟ್ಟತಕ್ಕ ಪ್ರಯತ್ನ ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ನಮ್ಮಲ್ಲಿ ಬಡಜನರು ಎರಡು ರೀತಿಯಲ್ಲಿ ಜೀವನ ಮಾಡುತ್ತಿದ್ದಾರೆ. ಅಭಾವ ಪ್ರದೇಶಗಳಲ್ಲಿ ಕಲ್ಲು ಸಹ ಅಭಾವವಾಗಿದೆ. ಕಲ್ಲು ಒಡೆಯಬೇಕಾದರೆ ಒಡ್ಡರು, ಕಲ್ಲುಕುಟಿಗರು, ಹರಿಜನರು ಕೆಲಸಮಾಡುತ್ತಿದ್ದಾರೆ. ಅವರು ಕಲ್ಲು ಒಡೆಯಬೇಕಾದರೆ 500 ರೂಪಾಯಿಗಳ ಡಿಪಾಜಿಟ್ ಇಡಬೇಕೆಂದರೆ ಹೇಗೆ? ಅದರಿಂದ ಅವರು ಹೊರಗೆ ಹೋಗಿ ಬಿಡುತ್ತಾರೆ. ಅವರು 100 ರೂಪಾಯಿಗಳಾದರೂ ಕೊಡಬೇಕು ಎಂದು ಹೇಳುತ್ತಾರೆ. ಕಲ್ಲು ಒಡೆಯುವುದನ್ನು ಬಿಟ್ಟು ಅವರಿಗೆ ಕೆಲಸದ ಅಭಾವ, ನಮಗೆ ಕಲ್ಲಿನ ಅಭಾವ—ಹೀಗಾಗಿ ನಮ್ಮ ತಾಲ್ಲೂಕು ಅನೇಕ ರೀತಿಯಲ್ಲಿ ಅಭಾವಕ್ಕೊಳಪಟ್ಟಿದೆ. ಇನ್ನು ವಿದ್ಯುಚ್ಛಕ್ತಿ ಅಭಾವ. ತೀವ್ರ ರೀತಿಯಲ್ಲಿ ನಮಗೆ ವಿದ್ಯುಚ್ಛಕ್ತಿ ಸರಬರಾಜು ಆದರೆ ಆಹಾರ ಧಾನ್ಯಗಳು ಹೆಚ್ಚಿಗೆ ನಮಗೆ ಒದಗುತ್ತವೆಂಬ ಆಶೆಯನ್ನು ನಾವು ಇಟ್ಟುಕೊಂಡಿದ್ದೇವೆ. ಕೆಲವರು ಮಾತನಾಡುವಾಗ ಸರ್ಕಾರದವರು ಬೇರೆಯವರನ್ನು ಭಿಕ್ಷೆ ಬೇಡಕೂಡದು, ಸಾಲ ತೆಗೆಯಬಾರದು ಎಂಬುದಾಗಿ

(ಶ್ರೀ ಸಿ. ಎಂ. ಚುರ್ಚಿಹಾಳಮಠ)

ಹೇಳಿದರು. ಅದೂ ಅಲ್ಲದೆ ಲೆವಿ ಕೇಳಬೇಡಿ, ಕಂದಾಯ ವಸೂಲು ಮಾಡಬೇಡಿ, ಪಗಾರ ಹೆಚ್ಚು ಕೊಡಿ, ನಮಗೆ ಆಹಾರ ಧಾನ್ಯಗಳನ್ನು ಒದಗಿಸಿ ಎಂದು ಹೇಳುತ್ತಾರೆ. ಯಾವ ರೀತಿ ಯಾವ ಸರ್ಕಾರ ಬಂದರೆ ಇವೆಲ್ಲವನ್ನೂ ಸಮಂಜಸವಾಗಿ ಮಾಡಿಬಿಟ್ಟೀತು ? ಮಾತನಾಡುವವರು ಸ್ವಲ್ಪ ಇವೆಲ್ಲವನ್ನೂ ವಿಚಾರಮಾಡಬೇಕಾಗಿತ್ತು. ಕೆಲವರು ಕಂದಾಯ ಮಂತ್ರಿಗಳವರಿಗೆ ಈಗ ಏನೂ ತಿಳಿಯುತ್ತಾ ಇಲ್ಲ, ಅವರಿಗೇನೂ ಕಾಣಿಸುತ್ತಾ ಇಲ್ಲ, ಅವರಿಗೆ ಈಗಿನ ಪರಿಸ್ಥಿತಿಯೇ ಗೊತ್ತಿಲ್ಲ ಎಂಬುದಾಗಿ ಅರ್ಥಬರುವಂತೆ ಮಾತನಾಡಿದ್ದಾರೆ. ಮಂತ್ರಿಗಳ ವಿಶದವಾದ ಹೇಳಿಕೆಯನ್ನು ನೋಡಿದರೆ ಬರಗಾಲ ಪರಿಸ್ಥಿತಿ ಅವರಿಗೆ ಸ್ಪಷ್ಟವಾಗಿ ಅರ್ಥವಾಗಿದೆಯೆಂದು ಹೇಳಬಹುದು. ಇದನ್ನು ನೋಡಿದರೆ ನಮ್ಮ ಜನಗಳಲ್ಲಿ ವಿಚಾರ ಅಭಾವ ಕಡಮೆಯಾಗಿದೆಯೆಂದು ನಾನು ಹೇಳಬಹುದು. ಅವರಿಗೆ ಆ ರೀತಿಯಾಗಿ ಹೇಳಲು ಅಭಾವ ಮೂಡಿ ಬೆಳೆದಿದೆ. ಆದ್ದರಿಂದ ಸರ್ಕಾರದವರು ಕೂಡಲೇ ಯೋಗ್ಯ ಪರಿಹಾರವನ್ನು ಕಂಡುಹಿಡಿದು ದೇಶವಲ್ಲ ಈಗ ಇರತಕ್ಕ ಬರಗಾಲವನ್ನು ಬೇಗನೆ ಬಗೆಹರಿಸಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri B. P. GANGADHAR.**—Mr. Speaker, Sir, I tried to call the attention of the Hon'ble Minister on this matter. In fact, I submitted one calling attention notice which you were kind enough to send back saying that this matter may be discussed when the particular matter comes up for discussion. If that was brought to light, the Minister would have bestowed attention on the matter so that he would have known the gravity of the situation prevailing in the particular locality. I may submit that the entire district of Tumkur, in general, is in severe famine and more so. Bellavi Kasaba and Kora hoblies in Tumkur Taluk, Hagalwadi and Chelur hoblies of Gubbi Taluk and most villages of Mudhugiri and Pavagada taluks, which the Hon'ble Minister know. These places are in severe famine. I have been submitting this matter, time and again, I have been corresponding with the Hon'ble Minister and I have been writing letters to the Food Minister and also the Public Works Minister stating that if life and property of the men and the life of the cattle has to be saved something immediate must be done. But, I regret to say that so far nothing concrete has been done in these areas. Rains have failed successively for the third year. It is needless for me to submit that people in these areas have lost what little they had and now they have been left bare-handed. This year also there has been severe famine. There was very little rain. We can say there was no rain at all in this area. The relief works under the name of relief measures have been started here and here. I cannot deny it. I will give a broader picture about what these relief works are. I have brought this to the notice of the Ministers concerned. About 60 to 70 persons from Kora Hobli have gone to various places like Bhadravathi and Coorg. A few persons living there do not get adequate work. The Government say you desilt a particular tank. They allot Rs. 500 for that particular tank in Channenahalli, Bellavi Taluk. There are about 15 to 20 villages affected by famine round about that village. If you ask for desilting that particular tank, about 200 to 250 persons will come to this particulur wotk. If all of them attend to that work, the fund allotted will be over within a day. Do you consider it as a relief work ? If you want to save the life of the people who are really hard hit, you must give something substantial, otherwise it is not a relief at all. It has been observed there will be no

further allotment of funds. These people will finish this whole amount within a day. Therefore, it cannot be considered as a relief. The Ministers concerned must take it very seriously and do something to these unfortunate people. It is unfortunate that every Minister has to pass through only Tumkur. They see some patches here and there with paddy plants. By seeing this, they say that Tumkur is not so affected. I tell them these patches are entirely irrigated by drain water. About 10 to 20 people are irrigating their plots through this drain water. This is the real position. By looking at few lands one cannot arrive at the conclusion that entire Tumkur is not so affected by famine. Of course scarcity conditions should not be magnified. You can come with me to places which have been severely affected by this famine. The Deputy Commissioner will get the report from his subordinates who do not actually go to the villages concerned. The Deputy Commissioner depends upon the report of the subordinates. If they go to the spot they can see that large tracts of lands are lying fallow. With great difficulty some lands have been brought under cultivation. Something urgently should be done for these people who have cultivated these lands. The Food Minister promises us to supply adequate quantity of food grains. But so far no substantial help has been done. There has been a sorrowful situation in these villages. I have brought to the notice of the Revenue Minister that land revenue need not be collected. For the last three years they could not give land revenue. The Government want to see that all the land revenue including the arrears for these three years is collected this year. The stomaches of the ryots are empty. When this is the situation, they cannot pay the land revenue. The Government will have to suck their blood if at all they want to collect the land revenue. In the circumstance Government must direct the Deputy Commissioner not to collect and to waive the land revenue because of the hopeless famine situation prevailing in these areas.

The Madhugiri Taluk is severely affected by the famine. Some tracts of land have been irrigated and they have grown sugarcane. They have restricted the ryots not to reap the sugarcane. The Gowribidanur Sugar Factory has not been started. The standing sugarcane is already 14 to 15 months old. If the sugarcane is not immediately cut, the gluecose content will vanish and this will be rendered useless and will be fit for fuel purposes. Therefore some arrangements must be made as the crushing has not been started in Gowribidanur Sugar Factory. These villagers may be allowed to reap their sugarcane immediately, so that these poor people, who have nothing in their possession to eat, may purchase ragi and rice. I hope the Food Minister will make necessary arrangements in this regard and see that food supplies are immediately rushed to these places. So far as relief works are concerned, the Government will kindly see that adequate funds are allotted to these works. If adequate funds are not allotted, it will not be a relief work at all. If a person gets eight annas or one rupee, what can he do with this amount? Therefore adequate funds may be provided, so that these unfortunate people may be benefited. I request the Hon'ble Revenue Minister to do something with regard to land revenue. With these hopes I conclude.

† ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಈ ಅಭಾವ ಪರಿಸ್ಥಿತಿ ಹಾಗೂ ಧಾನ್ಯಗಳ ಎತ್ತುವಳಿಗಳ ಬಗ್ಗೆ ಇರತಕ್ಕ ವಿಷಯ ಏನಿದೆ ಇದು ಬಹಳ ಗಹನವಾದದ್ದು. ಇದನ್ನು ಕೇವಲ ಕೆಲವು ನಿಮಿಷಗಳಲ್ಲಿ ನಾವು ಪರಿಶೀಲನೆ ಮಾಡತಕ್ಕಂಥಾದ್ದು ಅಸಾಧ್ಯ. ಅಭಾವ ಪೀಡಿತ ಪ್ರದೇಶಗಳ ಜನಗಳಿಗೆ ಪರಿಹಾರ ಕೊಡುವುದಕ್ಕೆ ಒಂದು ಶಾಶ್ವತವಾದ ವ್ಯವಸ್ಥೆಯನ್ನು ಮಾಡ ಬೇಕಾದ್ದು ಬಹಳ ಅವಶ್ಯ ಇದೆ. ಅಭಾವ ಪರಿಸ್ಥಿತಿ ಬಂದಾಗ ಪರಿಹಾರಕಾರ್ಯಗಳನ್ನು ಮಾಡು ವುದಕ್ಕೆ ನಮ್ಮ ಊರಿಗೆ ಹಣ ಸಾಲದು ಎಂದು ಸದಸ್ಯರು ಪೈಪೋಟಿ ಮಾಡತಕ್ಕ ಪರಿಸ್ಥಿತಿಯಲ್ಲಿ ಇರಬಾರದು. ಅಭಾವ ಬಂದಾಗ ಯಾವ ಯಾವ ಗ್ರಾಮದಲ್ಲಿ ಏನೇನು ಮಾಡಬೇಕು ಎನ್ನ ತಕ್ಕಂಥಾದ್ದನ್ನು ಸಮರ್ಪಕವಾಗಿ ಮಾಡುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಮತ್ತು ಅದನ್ನು ಶಾಶ್ವತವಾಗಿ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಅದು ಮಾಡದೇ ಸುಮ್ಮನೆ ಯಾವೊತ್ತೋ ಒಂದು ದಿವಸ ಕ್ಷಾಮ ಬಂದಾಗ ಪರಿಹಾರ ಕಾರ್ಯಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈ ಅಭಾವ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುತ್ತಿರುವುದು ಮತ್ತು ಕೇಳುತ್ತಿರುವುದು ಇವೊತ್ತಿನ ಪ್ರಶ್ನೆಯಲ್ಲ. ಅನೇಕ ವರ್ಷಗಳಿಂದ ಈ ಅಸೆಂಬ್ಲಿಯಲ್ಲಿ ಕೇಳುತ್ತಿದ್ದಾರೆ. ಆದ್ದರಿಂದ ನಾನು ಸರ್ಕಾರಕ್ಕೆ ಸಲಹೆ ಮಾಡತಕ್ಕದ್ದು ಏನೆಂದರೆ, ಇದಕ್ಕೆ ಒಂದು ತಜ್ಞರ ಸಮಿತಿಯನ್ನು ತಕ್ಷಣ ಏರ್ಪಾಡು ಮಾಡಬೇಕು. ಅವರ ಸಲಹೆಯಂತೆ ಅಭಾವ ಪೀಡಿತ ಪ್ರದೇಶಗಳಲ್ಲಿ ಏನೇನು ಕೆಲಸ ಕಾರ್ಯಗಳು ನಡೆಯಬೇಕೋ ಅವು ತನ್ನಷ್ಟಕ್ಕೇ ತಾನೇ ನಡೆದುಕೊಂಡು ಹೋಗಬೇಕು. ಸದಸ್ಯರು ಸರ್ಕಾರಕ್ಕೆ ಹೇಳಬೇಕು ಅವರು ಕೇಳಬೇಕು ಎನ್ನುವ ವ್ಯವಸ್ಥೆ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೂ ಈ ಸಮಸ್ಯೆ ಪರಿಹಾರವಾಗುವುದಿಲ್ಲ.

ಇನ್ನು ಲೆವಿ ಪದ್ಧತಿ ವಗೈರೆ ಏನಿದೆ ಇದರ ಬಗ್ಗೆ ಎರಡು ಮಾತನ್ನು ಹೇಳುತ್ತೇನೆ. ಇವೊತ್ತು ದೇಶದಲ್ಲಿ ಈ ಅನಿಶ್ಚಿತವಾದ ಅಭಾವ ಪರಿಸ್ಥಿತಿಯ ವಿಷಯದಲ್ಲಿ ಅಡಗಿರುವ ಸರ್ಕಾರದ ನೀತಿ, ಭೂಕಂದಾಯದ ನೀತಿ, ಆಹಾರದ ನೀತಿ ಮತ್ತು ನೀರಾವರಿಯ ನೀತಿ ಈ ನೀತಿಗಳಲ್ಲಿ ಬಹಳ ತೀವ್ರವಾದ ಲೋಪದೋಷಗಳಿವೆ. ಈ ಕಷ್ಟಪರಂಪರೆಗಳು ಸುಮಾರು 20 ವರ್ಷಗಳಿಂದ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಸಮರ್ಪಕವಾಗಿ ತೀರ್ಮಾನ ವಾಗಿಲ್ಲ. ಮತ್ತು ನಮ್ಮ ಆಹಾರ ಉತ್ಪನ್ನದ ನೀತಿ ಏನಿದೆ ಇದರಲ್ಲಿಯೂ ಲೋಪದೋಷಗಳಿವೆ. ಇದರ ಬಗ್ಗೆ ಜನಗಳು businesslike ಆಗಿ ಕುಳಿತುಕೊಂಡು ಯೋಚನೆ ಮಾಡಿಲ್ಲ. ಇವೊತ್ತಿನ ದಿವಸ ಆಹಾರದ ಅಭಾವ ಪರಿಸ್ಥಿತಿ ಏತಕ್ಕೋಸ್ಕರ ಬಂತು? ಆಹಾರವನ್ನು ಉತ್ಪನ್ನ ಮಾಡತಕ್ಕ ವನಿಗೆ ಸರ್ಕಾರದವರು ಎಲ್ಲಿಯವರೆಗೆ ಹಿಂಸಾತ್ಮಕವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳು ತ್ತಾರೆಯೋ ಅಲ್ಲಿಯವರೆಗೂ ದೇಶದಲ್ಲಿ ಅಭಾವ ಹೋಗುವುದಿಲ್ಲ. ಭಾಷಣಗಳಿಂದ ಆಹಾರ ಉತ್ಪನ್ನ ವಾಗುವುದಿಲ್ಲ. ಅಥವಾ ಬೆಂಗಳೂರಿನಲ್ಲಿ ಆಹಾರ ಉತ್ಪನ್ನವಾಗುವುದಿಲ್ಲ. ದೇಶದಲ್ಲಿ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡಿ ಸಮೃದ್ಧಿ ಸಾಧನೆ ಮಾಡಬೇಕಾಗಿದ್ದರೆ ಯಾರು ಹೊಲ ಗದ್ದೆಗಳಲ್ಲಿ ದುಡಿಮೆ ಮಾಡುತ್ತಾನೆಯೋ ಅವನು ಮಾತ್ರ ಕೆಲಸವನ್ನು ಸರಿಯಾಗಿ ಮಾಡಿದರೆ ಅದು ಸಾಧ್ಯ ವಾಗುತ್ತದೆ. ಆದ್ದರಿಂದ ಅವನು ಸರಿಯಾಗಿ ಕೆಲಸ ಮಾಡಬೇಕಾದರೆ ಆಹಾರದ ನೀತಿ ಭೂಕಂದಾಯದ ನೀತಿ, ನೀರಾವರಿಯ ನೀತಿ ಆಹಾರದ ಉತ್ಪನ್ನದ ನೀತಿ ಇವುಗಳಲ್ಲಿರತಕ್ಕ ಅಡ್ಡಿ ಆತಂಕಗಳನ್ನು, ಲೋಪದೋಷಗಳನ್ನು ತೊಡೆದು ಹಾಕದ ಹೊರತು ಆ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ; ನಾನು ಮೊನ್ನೆ ಭರತಖಂಡವನ್ನೆಲ್ಲಾ ಸಂಚಾರ ಮಾಡಿ ಸಂಗ್ರಹ ಮಾಡಿದಂತಹ ವಿಷಯಗಳಲ್ಲಿ ನಾನು ಮೇಲೆ ಹೇಳಿದಂತಹ ವಿಷಯಗಳು ವ್ಯಕ್ತವಾಗಿವೆ.

7-30 P.M.

ಒಂದು ಸಣ್ಣ ಉದಾಹರಣೆಯನ್ನು ಹೇಳುವುದಾದರೆ, ಸಕ್ಕರೆ ನೀತಿಯನ್ನು ಬದಲಾವಣೆ ಮಾಡಿ ಕೇವಲ 24 ಗಂಟೆಯೊಳಗೆ ಕೋಟಿ ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡಿಬಿಟ್ಟರು. ಈ ಬಗ್ಗೆ ನಿಮ್ಮನ್ನು ಆಕ್ಷೇಪಣೆ ಮಾಡುವುದಿಲ್ಲ. ಏಕೆಂದರೆ, ನೀವು ಆ ವಿಚಾರದಲ್ಲಿ ಸ್ವತಂತ್ರರಾಗಿಲ್ಲ. ಈ ಆಹಾರ ನೀತಿ ಏನಿದೆ, ಲೆವಿ ವಸೂಲು ಮಾಡುವುದು, ಆಹಾರ ಸಂಗ್ರಹಣೆ ಮಾಡುವುದು, ಆಹಾರ ಉತ್ಪನ್ನ ಮಾಡುವುದು ಇವೆಲ್ಲದರ ಅಧಿಕಾರವನ್ನೂ ಸಹ ಕೇಂದ್ರಸರ್ಕಾರದವರು ನಿಮಗೆ ಮೂಗುದಾರ ಹಾಕಿಕೊಂಡು ತಮ್ಮಲ್ಲೇ ಇಟ್ಟುಕೊಂಡಿದ್ದಾರೆ. ಅವರು ಹೇಳಿದಂತೆ ನೀವು ನಡೆದು ಕೊಳ್ಳುತ್ತಿದ್ದೀರಿ. ಇವತ್ತಿನ ದಿವಸ ಮಾರುಕಟ್ಟೆಯಲ್ಲಿ ಒಂದು ಕ್ವಿಂಟಾಲ್ ಸಕ್ಕರೆಗೆ 510 ರೂಪಾಯಿ ಗಳಂತೆ ಮಾರಾಟವಾಗುತ್ತಿದೆ. ಅದೇ ಬಳಕೆದಾರರಿಗೆ ಒಂದು ಕೆ. ಜಿ. ಗೆ ಒಂದೂವರೆ ರೂಪಾಯಿ ನಂತೆ ನೀವು ಹಂಚುತ್ತಿದ್ದೀರಿ. ಇಷ್ಟೊಂದು ವ್ಯತ್ಯಾಸವಿರುವುದರಿಂದ, ನೀವು ಹಂಚುವ ಸಕ್ಕರೆಯನ್ನು ಯಾವ ಅಧಿಕಾರಿ ತಾನೆ ನ್ಯಾಯವಾಗಿ ಜನರಿಗೆ ಸಕ್ಕರೆಯನ್ನು ಹಂಚುತ್ತಾನೆ?

ಒಬ್ಬ ತಹಶಿಲ್‌ದಾರನಿಗೆ ನೀವು 10 ಕ್ವಿಂಟಾಲ್ ಸಕ್ಕರೆಯನ್ನು ವಿತರಣೆಗಾಗಿ ಕೊಟ್ಟರೆ, ಅವನು ಒಂದು ಮೂಟೆಯನ್ನು ಜನರಿಗೆ ಹಂಚಿ ಉಳಿದಿದ್ದನ್ನು ಬೇರೆ ಕಡೆ ಮಾರಿದರೆ ನಿಮಗೆ ಯಾವ ರೀತಿ ಗೊತ್ತಾಗುತ್ತದೆ? ಬಹಿರಂಗ ಪೇಟೆಯಲ್ಲಿ ಒಂದು ಕ್ವಿಂಟಾಲ್ ಬತ್ತಕ್ಕೆ 80ರಿಂದ 100 ರೂಪಾಯಿಗಳವರೆಗೆ ಮಾರುತ್ತಿರುವಾಗ ನೀವು ರೈತರಿಗೆ ಕ್ವಿಂಟಾಲ್ ಒಂದಕ್ಕೆ 40 ರೂಪಾಯಿಗಳಂತೆ ಕೊಡಿ ಎಂದು ಹೇಳಿದರೆ ಅವರು ಯಾವ ಮನಸ್ಸಿನಿಂದ ಕೊಡುತ್ತಾರೆ? ಮೊನ್ನೆ ಒಂದು ಪತ್ರಿಕೆಯನ್ನು ಒದುವಾಗ ಅದರಲ್ಲಿ ಶ್ರೀ ಜತ್ತಿಯವರ ಮತ್ತು ಶ್ರೀ ಬದರಿನಾರಾಯಣ್ ಅವರ ಫೋಟೋ ಇತ್ತು. ಆ ಫೋಟೋ ಕೆಳಗೆ ಈ ರೀತಿ ಬರೆದಿತ್ತು, ಏನೆಂದರೆ ಶಿವಮೊಗ್ಗದ ರೈತರು ಬಹಳ ಉತ್ಸಾಹದಿಂದ, ಬಹಳ ಸಂತೋಷದಿಂದ ಲೆವಿ ಬತ್ತವನ್ನು ಗಾಡಿಗಳಲ್ಲಿ ಹಾಕಿಕೊಂಡು ಬಂದು ಕಂಟ್ರೋಲ್ ರೇಟ್‌ನಲ್ಲಿ ಕೊಟ್ಟಿದ್ದಾರೆಂದು.

ಶ್ರೀ ಬಿ. ಡಿ. ಜತ್ತಿ.—ನಾವು ಅವರನ್ನು ಬಲವಂತ ಮಾಡಲಿಲ್ಲ, ಅವರೇ ಸಂತೋಷದಿಂದ ತಂದು ಕೊಡುತ್ತಿದ್ದಾರೆ. ಪತ್ರಿಕೆಯಲ್ಲಿ ಬಂದಿರುವುದು ಸುಳ್ಳಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮಾರುಕಟ್ಟೆಯಲ್ಲಿ ಕ್ವಿಂಟಾಲ್‌ಗೆ 80-90-100 ರೂಪಾಯಿಗಳಂತೆ ಮಾರಾಟವಾಗುತ್ತಿರುವಾಗ ನಿಮಗೆ ಸಂತೋಷದಿಂದ ತಾವುಂದು ನಾವುಂದು ಎಂದುಕೊಂಡು ಯಾರಾದರೂ 40 ರೂಪಾಯಿಗೆ ಒಂದು ಕ್ವಿಂಟಾಲ್‌ನಂತೆ ತಂದು ಕೊಡುತ್ತಾರೆಯೇ?

ಶ್ರೀ ಬಿ. ಡಿ. ಜತ್ತಿ.—ಅವರು ಸಂತೋಷದಿಂದ ಕೊಟ್ಟಿದ್ದಾರೆ ಎಂಬುದನ್ನು ತಾವು ಒಪ್ಪಬೇಕು. ಬೇಕಾದರೆ ನಾವು ಮತ್ತು ನೀವು ಕೂಡಿ ಹೋಗಿ ಬರೋಣ ಬನ್ನಿ, ನಂತರ ನಿಜ ಸ್ಥಿತಿ ಗೊತ್ತಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಕೇವಲ ಪ್ರಚಾರಕ್ಕಾಗಿ ಆ ರೀತಿ ನಡೆಯುತ್ತದೆ. ನಿಮ್ಮ ಅಧಿಕಾರಿಗಳ ಕಿರುಕುಳದಿಂದ ಅವರು ಕೊಡುತ್ತಿದ್ದಾರೆಯೇ ವಿನ ಸತ್ಯದಿಂದ ಕೊಟ್ಟಿಲ್ಲ, ಸಂತೋಷದಿಂದ ಕೊಟ್ಟಿಲ್ಲ.

ಶ್ರೀ ಬಿ. ಡಿ. ಜತ್ತಿ.—ಅವರು ಸಂತೋಷದಿಂದಲೇ ಕೊಟ್ಟಿರುವುದು.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅವರು ನಿಜವಾಗಿಯೂ ಸಂತೋಷದಿಂದ ಕೊಟ್ಟಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಎಲ್ಲಿಯವರೆಗೆ............

Sri S. D. KOTHAVALE.—What about consumers?

Sri H. M. CHANNABASAPPA.—You are a lawyer. You speak for farmers.

Sri S. D. KOTHAVALE.—I am putting a straight question......

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಕ್ರಿಮಿಕೀಟಗಳಿಂದ ಮೊದಲಾಗಿ ಸರ್ಕಾರದವರಿಗೆ ಎಲ್ಲರೂ ರೈತರನ್ನು ಶೋಷಣೆ ಮಾಡುವವರೇ ಆಗಿದ್ದಾರೆ. ಜಮೀನಿನಲ್ಲಿ ಬೆಳೆ ಬಂದಾಗ ಕ್ರಿಮಿಕೀಟಗಳು ತಿಂದು ಹಾಳುಮಾಡುತ್ತವೆ. ನಂತರ ನಿಮ್ಮ ಅಧಿಕಾರಿಗಳು ಲೆವಿ ವಸೂಲು ಮಾಡುತ್ತಾರೆ. ನಂತರ ವರ್ತಕರು ಬಂದು ಹಣದ ಆಶೆಯನ್ನು ತೋರಿ ಇದ್ದಬದ್ದ ಧಾನ್ಯವನ್ನು ತೆಗೆದುಕೊಂಡು ಹೋಗಿ ಬಿಡುತ್ತಾರೆ. ಈ ಪ್ರಕಾರ ಎಲ್ಲರೂ ರೈತರನ್ನು ಶೋಷಣೆ ಮಾಡುವವರೇ ಹೊರತು, ರೈತರನ್ನು ಉದ್ಧಾರ ಮಾಡುವವರು ಯಾರೂ ಇಲ್ಲ. ಒಬ್ಬ ರೈತನಿಗೆ ಒಂದು ಎಕರೆ ಜಮೀನು ಇರಲಿ ಎರಡು ಎಕರೆ ಜಮೀನು ಇರಲಿ, ಅವನ ಜಮೀನಿನಲ್ಲಿ ಸರಿಯಾಗಿ ನೀರಿನ ಅನುಕೂಲವಿತ್ತೇ, ಸರಿಯಾಗಿ ಮಳೆಯಾಗಿತ್ತೇ ಏನಾದರೂ ಬೆಳೆಗೆ ರೋಗ ಬಂತೇ, ಯಾವುದನ್ನು ಸಹ ನೋಡದೆ ಅವನಿಂದ ಲೆವಿಯನ್ನು ವಸೂಲು ಮಾಡುತ್ತಿದ್ದೀರಿ. ಕೆಲವೊಂದು ಸಾರಿ ದನಕರುಗಳು ಜಮೀನಿಗೆ ನುಗ್ಗಿ ಬೆಳೆ ಹಾಳಾಗಿರುತ್ತದೆ. ಅಂತಹವರಿಂದಲೂ ಸಹ ಲೆವಿ ವಸೂಲು ಮಾಡುತ್ತಿದ್ದೀರಿ. ಈ ಪ್ರಕಾರ ರೈತರಿಂದ ಧಾನ್ಯಗಳನ್ನು ವಸೂಲು ಮಾಡಿ ಲಕ್ಷಲಕ್ಷ ಗಟ್ಟಲೆ ದಾಸ್ತಾನು ಮಾಡಿ ರಾತ್ರೋ ರಾತ್ರಿ ಮಾರಿಕೊಳ್ಳುತ್ತಿದ್ದೀರಿ ನಿಮ್ಮ ಅಧಿಕಾರಿಗಳು ಏನು ಮಾಡಿದರೂ ಸಹ ನೀವು ಸುಮ್ಮನಿರುತ್ತೀರಿ.

ಶ್ರೀ ಎಸ್. ಶಿವಪ್ಪ.—ಆ ಅಧಿಕಾರಿಗಳಿಗೆ ಸರ್ಕಾರದ ರಕ್ಷಣೆ ಇದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—6 ತಿಂಗಳ ಹಿಂದೆ ಕಾವೇರಿ ನದಿಯಿಂದ ಬೇರೆ ಕಡೆಗೆ ನೀರನ್ನು ಒದಗಿಸಲು 6 ಲಕ್ಷ ರೂಪಾಯಿಗಳ ಸಪ್ಲಿಮೆಂಟರಿ ಗ್ರಾಂಟನ್ನು ಕೇಳಿದ್ದೀರಿ.

(ಶ್ರೀ ಎಚ್. ಎಂ. ಚೆನ್ನಬಸಪ್ಪ)

ಅದು ಮಂಜೂರು ಸಹ ಆಯಿತು. ಆತುರದಲ್ಲಿ ನೀವು ಆ ನೀರಾವರಿ ಯೋಜನೆಯನ್ನು ಕೈಕೊಳ್ಳುತ್ತೀವೆಂದು ಹೇಳಿದ್ದರೂ ಸಹ ಇವತ್ತಿನವರೆಗೂ ಸಹ ಎಸ್ಟಿಮೇಟ್ ತಯಾರಾಗಿಲ್ಲ. Please make a note of it. You are serious about politics and not business.

Sri S. D. KOTHAVALE.—You speak gently we can listen to you.

Sri H. M. CHANNABASAPPA.—You have never been a farmer and you do not know anything about him. Please sit down.

Sri S. D. KOTHAVALE.—That is wrong. You are claiming too much.

Sri D. M. SIDDIAH.—How can the hon'ble Member Sri H. M. Channabasappa ask another member to sit down?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಆದ್ದರಿಂದ ಈ ಲೆವಿ ಪದ್ಧತಿ ಏನಿದೆ ಅದನ್ನು ಯಾವ ಒಂದು ನ್ಯಾಯ ಪರಿಸ್ಥಿತಿಯಲ್ಲೂ ಒಪ್ಪತಕ್ಕಂಥಾದ್ದಲ್ಲ. ಯಾವ ಒಂದು ನೈತಿಕ ಪರಿಸ್ಥಿತಿಯಲ್ಲೂ ಒಪ್ಪತಕ್ಕಂಥಾದ್ದಲ್ಲ ಒಪ್ಪುವುದಕ್ಕೆ ಸಾಧ್ಯವೂ ಇಲ್ಲ. ಇವತ್ತಿನ ದಿವಸ ರೈತನ ಅವನು ಬೆಳೆದ ಬೆಳೆಯನ್ನು ಮಾರುಕಟ್ಟೆಯಲ್ಲಿ ಮಾರಿಕೊಳ್ಳುವುದಕ್ಕೆ ಪ್ರತಿಬಂಧಕವನ್ನು ತಂದಿದ್ದೀರಿ. ಕಾರಣ ಅವನು ಓದಿದವನು ಅಲ್ಲ ಎಂಬುದಾಗಿ. ನೀವು ರೈತನಿಂದ ಕ್ವಿಂಟಾಲಿಗೆ 40 ರೂಪಾಯಿಗಳಂತೆ ಕೊಂಡುಕೊಳ್ಳುವಾಗ, ಅವನಿಗೆ ಬೇಕಾಗುವ ಟ್ರ್ಯಾಕ್ಟರ್‌ಗಳನ್ನು, ಫರ್ಟಿಲೈಜರ್ಸ್‌ನ್ನು ಶೇಕಡ 50ರಷ್ಟು ಕಡಿಮೆ ರೇಟ್‌ನಲ್ಲಿ ಒದಗಿಸಬೇಕೆಂದು ಸಂಬಂಧಪಟ್ಟ ಕಂಪನಿಗಳವರಿಗೆ ಹೇಳಿದ್ದೀರಾ? ಕಡಿಮೆ ಬೆಲೆಯಲ್ಲಿ ರೈತನಿಗೆ ಬೀಜ ಮತ್ತು ಗೊಬ್ಬರವನ್ನು ಏನಾದರೂ ಒದಗಿಸುತ್ತಿದ್ದೀರಾ? ಇವತ್ತಿನ ದಿವಸ ಒಂದು ಟ್ರ್ಯಾಕ್ಟರ್ ಬೆಲೆ 10 ಸಾವಿರ ರೂಪಾಯಿಗಳು ಇದ್ದರೆ, ಮಾರುಕಟ್ಟೆಯಲ್ಲಿ 40 ಸಾವಿರ ರೂಪಾಯಿಗಳು, ಎಂದು ಹೇಳಿದರೆ, ರೈತನು ಅಷ್ಟನ್ನು ಕೊಟ್ಟು ತೆಗೆದುಕೊಳ್ಳಬೇಕಾಗಿದೆ. ಒಂದು ಸ್ಪೇರ್ ಪಾರ್ಟಿನ ಬೆಲೆ 3 ಆಣೆ ಇದ್ದರೆ ಮೂರು ರೂಪಾಯಿ ಹೇಳುತ್ತಾರೆ. ಈ ಪ್ರಕಾರ ರೈತರಿಗೆ ಇಲ್ಲಸಲ್ಲದ ಅಡ್ಡಿ ಆತಂಕಗಳನ್ನು ಎಲ್ಲರೂ ತಂದೊಡ್ಡಿದರೆ ಅವರು ಮುಂದುವರೆಯುವುದು ಹೇಗೆ? ಆದಷ್ಟು ರೈತರಿಗೆ ಪ್ರೋತ್ಸಾಹ ಕೊಡಬೇಕು. ಇವತ್ತಿನ ದಿವಸ ಆಹಾರ ಪರಿಸ್ಥಿತಿ ಸುಧಾರಣೆಯಾಗಬೇಕಾದರೆ, ರೈತರು ಉತ್ಸಾಹದಿಂದ ಕೆಲಸಮಾಡಬೇಕಾದರೆ, ಅವರ ಕುಂದುಕೊರತೆಗಳನ್ನು ನಿವಾರಣೆ ಮಾಡಬೇಕು ಅಡ್ಡಿಆತಂಕಗಳನ್ನು ತಂದೊಡ್ಡಿದರೆ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಆದ್ದರಿಂದ ನಾನು ಹೇಳುವುದು ಇಷ್ಟೆ: ಲೆವಿ ಪದ್ಧತಿಯನ್ನು ವಜಾಮಾಡಿ. ಈ ಪದ್ಧತಿಯಿಂದ ನಿಮಗೂ ಶ್ರಮ, ರೈತರಿಗೂ ಶ್ರಮ, ಮತ್ತು ನಿಮ್ಮ ಅಧಿಕಾರಿಗಳಿಗೂ ಶ್ರಮ. ಅಲ್ಲದೆ ಹೆಚ್ಚು ಆಹಾರದ ಉತ್ಪಾದನೆ ಕೂಡ ಆಗುವುದಿಲ್ಲ. ನೀವು ಏನು ಹೇಳುತ್ತಾ ಇರುವುದು ಎಂದರೆ, ಲೆವಿ ಕಲೆಕ್ಟ್ ಮಾಡುತ್ತಾ ಇರುವುದರಲ್ಲಿ ರೈತರಿಗೆ ಏನು ಕಷ್ಟ ಇಲ್ಲ ಎಂದು ಹೇಳುತ್ತೀರಿ. ಅದನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕು. ಅಲ್ಲಿರತಕ್ಕಂಥ ರೈತರಿಗೆ ಯಾವ ರೀತಿ ಇದೆ ಎಂದು ನಿಮಗೆ ಗೊತ್ತಾಗುವುದಿಲ್ಲ.

ಭೂಕಂದಾಯದ ವಿಚಾರದಲ್ಲಿ ಸರ್ಕಾರ ಹೇಳುವುದು ಏನೆಂದರೆ, ಯಾವ ರೈತನಾಗಲಿ ಇದುವರೆಗೆ ಬಂದು ಭೂಕಂದಾಯವನ್ನು ವಜಾ ಮಾಡಿ ಎಂದು ಕೇಳಲಿಲ್ಲ; ಅವರಿಗೆ ಯಾವ ತೊಂದರೆಯೂ ಇಲ್ಲ ಎಂದು. ಬ್ರಿಟಿಷರು ಹೇಳುತ್ತಾ ಇದ್ದಂಥ ಮಾತು ಜ್ಞಾಪಕಕ್ಕೆ ಬರುತ್ತದೆ. ಸರ್ ಮಿರ್ಜಾ ಸಾಹೇಬರೂ ಸಹ ಅದೇ ರೀತಿಯಲ್ಲಿ ಬಂದು ಯಾವ ರೈತನಾಗಲಿ ತನಗೆ ಜವಾಬ್ದಾರಿ ಸರ್ಕಾರ ಬೇಕು ಎಂದು ಕೇಳಲಿಲ್ಲ ಎಂದು ಹೇಳುತ್ತಾ ಇದ್ದರು. ಇದರ ವಿಚಾರದಲ್ಲಿ ಇರತಕ್ಕಂಥ ಕಷ್ಟನಷ್ಟಗಳನ್ನು ಅರಿತುಕೊಂಡು ಸರ್ಕಾರದವರು ಬಡ್ಜೆಟ್ ಸ್ಪೀಚ್‌ನಲ್ಲಿ ಕಂದಾಯವನ್ನು ವಜಾ ಮಾಡುತ್ತೇವೆ ಎಂದು ಪ್ರಕಟಣೆ ಮಾಡಿದರು, ಆದರೆ ಅವರಿಗೆ ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಶಕ್ತಿ ಇಲ್ಲ. ಹಿಂದುಮುಂದು ನೋಡುತ್ತಿದ್ದಾರೆ.

ಎರಡನೆಯದು ಕಾವೇರಿ ಬೇಸಿನ್‌ನಲ್ಲಿ ಕೆಲವು ಕೆಲಸಗಳಿಗೆ 6 ಲಕ್ಷ ರೂಪಾಯಿಗಳನ್ನು ಒದಗಿಸುತ್ತೇವೆ ಎಂದು ಹೇಳಿದರು. ಇದುವರೆಗೆ ಅದರ ಅಂದಾಜೂ ಕೂಡ ತಯಾರಾಗಿಲ್ಲ. ನೀವು businesslike ಆಗಿ ಸರ್ಕಾರವನ್ನು ನಡೆಸುತ್ತಾ ಇದ್ದೀರಾ? ಈ ರೀತಿ ಆದರೆ ಹೆಚ್ಚು ಆಹಾರೋತ್ಪಾದನೆ ಯಾವ ರೀತಿ ಆಗುತ್ತದೆ? ನೀವು ಅಂದಾಜು ಮಾಡುವ ಪ್ಲಾನುಗಳನ್ನು ಕಾರ್ಯಗತ ಮಾಡುವ ತೊಂದರೆಯನ್ನು ತೆಗೆದುಕೊಂಡಿಲ್ಲ. ನಾವು ಇಂಜನಿಯರುಗಳನ್ನು ಕೇಳಿದರೆ ಅವರು ಯಾವ ಬಾಬಿನಲ್ಲೂ ಗ್ರ್ಯಾಂಟ್ ಇಲ್ಲ ಎಂದು ಹೇಳುತ್ತಾರೆ. ಈ ರೀತಿ ಆದರೆ ಹೆಚ್ಚು ಉತ್ಪಾದನೆ ಹೇಗೆ ಆಗುತ್ತದೆ?

ನೀವು ಬ್ಲ್ಯಾಕ್ ಮಾರ್ಕೆಟ್‍ನ್ನು ತಡೆಗಟ್ಟಬೇಕಾದರೆ ಪಾರ್‍ಪ್ಯುಟಿಂಗ್ ರೀತಿಯಲ್ಲಿ ಕೆಲಸಗಳನ್ನು ನಡೆಸ ಬೇಕು. ಯಾವರೀತಿ ಅಡ್ಡಿ ಆತಂಕಗಳು ಬರಲಿ ಅವನ್ನು ಧೈರ್ಯವಾಗಿ ಎದುರಿಸಬೇಕು. ಆವಾಗ ಆಹಾರ ಸಮಸ್ಯೆ ಬಗೆಹರಿಯುತ್ತದೆಯೇ ಹೊರತು ಇಲ್ಲವಾದರೆ ಇಲ್ಲ. ನೀವು ಅದರ ಬದಲು ಲೆವಿಸಿಸ್ಟಂ ನಂಥ ಮಿನಿಮಮ್ ಪ್ರೈಸ್ ಮಾಡಿ ರೈತರಿಗೆ ಜಾಸ್ತಿ ಕಿರುಕುಳ ಮಾಡುತ್ತಾ ಇದ್ದೀರಿ. ನೀವು ಹೇಳತಕ್ಕಂಥ ಮಾತುಗಳೆಲ್ಲವೂ ಬ್ಲ್ಯಾಕ್‍ಮಾರ್ಕೆಟ್‍ಗೆ ಸಹಾಯವಾಗುತ್ತದೆಯೇ ಹೊರತು ಮತ್ತೆ ಬೇರೆ ಏನೂ ಇಲ್ಲ. ಕಾಂಗ್ರೆಸ್ ಅಧ್ಯಕ್ಷರು ಒಂದೊಂದು ಕಾಲದಲ್ಲಿ ಒಂದೊಂದು ರೀತಿ ಹೇಳುತ್ತಾರೆ. ಯಾರೇ ಸರ್ಕಾರ ನಡೆಸಲಿ ಅವರು ಒಂದು ಪಾಠವನ್ನು ಕಲಿಯಬೇಕು. ಅದು ಏನು ಭೂಕಂದಾಯ ವಜಾ ಮಾಡುತ್ತೇವೆ ಎಂದು ಹೇಳಿಕೊಂಡು ತಿರುಗುವುದು ಅಷ್ಟು ಏನೂ ಕೀರ್ತಿ ತರುವಂಥದ್ದಲ್ಲ. ನೀವು ಕಡ್ಡಾಯವಾಗಿ ಭೂಕಂದಾಯವನ್ನು ವಜಾ ಮಾಡಬೇಕು ಎಂದು ಆ ರೀತಿ ಹೇಳಿದ್ದೀರಾ?

ಇನ್ನು ಬೆಲೆಯ ವಿಚಾರದಲ್ಲಿ ನಿಗದಿ ಮಾಡುವುದಕ್ಕೆ ರಾಜ್ಯ ಸರ್ಕಾರದ ಕೈಯಲ್ಲಿಲ್ಲ ಕೇಂದ್ರ ಸರ ಕಾರದ ಕೈಯಲ್ಲಿ ಇದೆ ಎಂದು ಹೇಳಿದಿರಿ. ಈ ಬೆಲೆಗಳನ್ನು ನಿಗದಿ ಮಾಡಬೇಕಾದರೆ ಪ್ರೈಸ್ ಕಮೀ ಷನ್ ಫಿಕ್ಸ್ ಮಾಡುತ್ತಾರೆ ಎಂದು ಹೇಳಿದರು. ನಾವು ಪ್ರೈಸ್ ಕಮೀಷನ್‍ನಲ್ಲೂ ವಿಚಾರಣೆ ಮಾಡಿದಾಗ ಅವರೂ ಕೂಡ ಈ ಬೆಲೆಗಳನ್ನು ಯಾವ ಆಧಾರದಮೇಲೆ ನಿಗದಿ ಮಾಡಿದ್ದೇವೆಂದು ಹೇಳುವುದಕ್ಕೆ ಗೊತ್ತಾಗುತ್ತಿಲ್ಲ. ಅಲ್ಲಿ ಬಹಳ ಒಳ್ಳೆಯ ಎಕ್ಸ್‍ಪರ್ಟ್ಸ್ ಇದ್ದಾರೆ, ಬಹಳ ಬುದ್ಧಿ ವಂತರು ಇದ್ದಾರೆ, ಆರ್ಥಿಕ ನಿಪುಣರು ಇದ್ದಾರೆ, ಆದರೆ ಅವರಿಗೆ ರೈತರ ಕಷ್ಟಸುಖಗಳು ಏನು ಎಂಬುದು ತಿಳಿದಿಲ್ಲ. ಅವರನ್ನು ನಾನು ವಿಚಾರಿಸಿದಾಗ ನಿಮ್ಮ ಪ್ಲಾನ್ ಏಕೆ ಫೇಲ್ ಆಗಿದೆ ಎಂದು ಕೇಳಿದರೆ ಅವರು ಇಲ್ಲಿ ಎಲ್ಲವೂ ಯಶಸ್ವಿಯಾಗಿ ನಡೆಯುತ್ತದೆ ಎಂದು ಹೇಳಿದರು. ಏನೋ ಒಬ್ಬ ಹಿಂದೆ 60 ಮಿಲಿಯನ್ ಟನ್ ಬೆಳೆಯುತ್ತಾ ಇದ್ದವನು ಈವಾಗ 90 ಮಿಲಿಯನ್ ಟನ್ ಬೆಳೆಯ ಬಹುದು. ಅದಕ್ಕೆ ನಾನು ಪ್ರತಿಯೊಂದು ಅಂಕಿಅಂಶಗಳನ್ನು ತರಿದಿದ್ದೀರಾ ಎಂದು ಕೇಳಿದ್ದಕ್ಕೆ ಅವರು ಶ್ಯಾನುಭೋಗರ ಹತ್ತಿರ ತಂದೆವು ಎಂದು ಹೇಳುತ್ತಾರೆ. ಹಾಗಾದರೆ ಶ್ಯಾನಭೋಗರು ಎಂದರೆ ಅವರು ಪ್ರೈಸ್ ಕಮಿಷನ್‍ನವರೇ? ಅವರು ಹೇಳುತ್ತಾರೆ, ಇವರು ಕೇಳಿಕೊಂಡು ಬರೆಯು ತ್ತಾರೆ. ಇದು ತಪ್ಪು ಸ್ಟ್ಯಾಟಿಸ್ಟಿಕ್ಸ್. ಆದ್ದರಿಂದ ನಾವು ಹೇಳುವುದು ಈ ಭೂಕಂದಾಯವನ್ನು ವಜಾ ಮಾಡಿ. ಯಾರು ಕೊಡಲು ಶಕ್ತಿ ಇದ್ದಾರೋ ಅಂತಹವರಿಂದ ವಸೂಲ್ ಮಾಡಿ. ಅವ ರಿಗೆ ಹೆಚ್ಚು ಹಾಕಿ. ಅವರಿಗೆ ಹೆಚ್ಚು ಕೊಡುವ ಸಾಮರ್ಥ್ಯ ಇರುತ್ತದೆ.

ಇನ್ನು ಇನ್‍ಕಂಟ್ಯಾಕ್ಸ್ ವಿಚಾರವಾಗಿ ಹೇಳುವುದಾದರೆ ಇನ್‍ಕಂಟ್ಯಾಕ್ಸ್ ಕೊಡತಕ್ಕಂಥ ವರು ಬಹಳ ಜನ ಇದ್ದಾರೆ. ಅದನ್ನು ಕೊಡುವುದಕ್ಕೆ ಅವರು ಶಕ್ತರಾಗಿದ್ದಾರೆ. ಎಷ್ಟೋ ಸಲ ಇನ್‍ಕಂಟ್ಯಾಕ್ಸ್ ಕೆಲವು ಅಧಿಕಾರಿಗಳು ನಿಗದಿತಕರನ್ನು ಪೀಡಿಸುತ್ತಾ ಇರುವುದನ್ನು ನೋಡಿದ್ದೇನೆ. ಆ ಇಲಾಖೆಯೂ ಕೂಡ ಅಷ್ಟು ದಕ್ಷತೆಯಿಂದ ನಡೆಯುತ್ತಾ ಇಲ್ಲ ಎಂದು ಹೇಳಬಹುದು. ನೀವು ನಡೆಸತಕ್ಕಂಥ ಸರ್ಕಾರದಲ್ಲಿ ದಕ್ಷತೆ ಇರಬೇಕು. ನೀವು ರೈತನಿಗೆ ಹೆಚ್ಚು ಉತ್ತೇಜನ ಕೊಟ್ಟರೆ ಅವನು ಹೆಚ್ಚು ಬೆಳೆ ಬೆಳೆಯುವುದಕ್ಕೆ ಸಹಾಯವಾಗುತ್ತದೆ. ಅದು ಬಿಟ್ಟು ನಿಮ್ಮ ಲೆವಿ ಪದ್ಧತಿ ಯನ್ನು ಮುಂದುವರಿಸಿಕೊಂಡು ಹೋದರೆ ಅವನ ಕಷ್ಟ ಸುಖಗಳನ್ನು ಬಗೆಹರಿಸುವಂತೆ ಆಗುವುದಿಲ್ಲ. ಇದರಿಂದ ಆಗುವ ಪರಿಣಾಮ ಏನು ಎಂದರೆ, ಮಧ್ಯವರ್ತಿ ವರ್ತಕರು ಸುಗ್ಗಿ ಕಾಲದಲ್ಲಿ ಅವರಿಂದ ಕಡಿಮೆ ಬೆಲೆಯಿಂದ ಧಾನ್ಯವನ್ನು ಸಂಗ್ರಹಿಸಿ ಮುಂದೆ ಅವರು ಹೆಚ್ಚು ಬೆಲೆಗೆ ಮಾರಿ ಹೆಚ್ಚು ದುಡ್ಡನ್ನು ಸಂಪಾದನೆ ಮಾಡುತ್ತಾರೆ. ಅಂತಹ ಮನುಷ್ಯರು ಇಲ್ಲಿ ಎಷ್ಟೋ ಜನ ಇದ್ದಾರೆ. ... ಹೀಗೆ ಒಬ್ಬರಿಂದ ಮತ್ತೊಬ್ಬರಿಗೆ ಕೊಡಿಸಿ ಹೆಚ್ಚು ಲಾಭವನ್ನು ಗಳಿಸುತ್ತಾರೆ. ಅಂಥಹ ...ರು ಎನ್ನುವುದು ನಮಗೆ ಗೊತ್ತು. ಆದರೆ ನೀವು ಇದಕ್ಕೇನು ಕ್ರಮ ತೆಗೆದುಕೊಳ್ಳಲು ... ಹೀಗಿರುವಾಗ ನೀವು ಮನಸ್ಸಿಗೆ ಬಂದಹಾಗೆ ರೈತನಮೇಲೆ ಲೆವಿ ಹೊರಿಸುತ್ತಾ ...ಕಾನೂನು ನೀತಿಗೆ ಆಧಾರವೇ ಇಲ್ಲ. ನೀವು ರೈತನಿಗೆ ಯಾವ ತರಹ ಅನುಕೂಲ ...ಟ್ಟಿಲ್ಲ. ನೀವು ರೈತನಿಗೆ ಬೇಕಾದ ಗೊಬ್ಬರ, ಹಣಕಾಸಿನ ಸಹಾಯ, ಟ್ರ್ಯಾಕ್ಟರ್ ...ದ ಸಹಾಯವನ್ನೂ ಮಾಡಿಕೊಟ್ಟಿಲ್ಲ.

...ಕೋ-ಆಪರೇಟಿವ್ ಸೊಸೈಟಿಯಿಂದ ರೈತ ಏನಾದರೂ ಸಾಲ ತೆಗೆದುಕೊಂಡರೆ ...ಹಾಕುತ್ತೀರಿ. ಅದರಲ್ಲಿ ಏನು ನ್ಯಾಯ ಇದೆ? ರಿಸರ್ವ್ ಬ್ಯಾಂಕಿನವರು ಕೋ-... ...ಗಳಿಗೆ 4 ಪರ್ಸೆಂಟ್ ಬಡ್ಡಿಯಂತೆ ಹಣವನ್ನು ಕೊಡುತ್ತಾರೆ. ಅದಕ್ಕೆ ನೀವು ...ಳ್ಳತಕ್ಕಂಥಾದ್ದು 10 ಪರ್ಸೆಂಟ್ ಬಡ್ಡಿಯಂತೆ ತೆಗೆದುಕೊಳ್ಳುತ್ತೀರಿ. ಏತಕ್ಕೆ ... ಅದು ಏತಕ್ಕೆ ಎಂದರೆ ನಿಮ್ಮ ಒಂದು ದೊಡ್ಡ ಕೋ-ಆಪರೇಟಿವ್ ಇಲಾಖೆ ...ಆಫೀಸರ್‍ಗಳ ಶ್ರೇಣಿಯನ್ನು ಕಾಪಾಡುವುದಕ್ಕೆ ಈ ದುಡ್ಡನ್ನು ಬಳಸುತ್ತಾ

ಅವರು ಯಾ...
ವರು ...
ಶಕ್ತರಾಗಿದ್ದಾರೆ ...
ಇದ್ದೀರಿ. ಮಾಡಿಕೊ...
ಏನು ... ವಿಧವಾ...
ಯಾವುದೇ ...
ಇನ್ನು ...
10 ಪರ್ಸೆಂಟ್
ಆಪರೇಟಿವ್
ರೈತನಿಂದ
ಇವು ...
ಯಲ್ಲಿರತ...
ಇದ್ದೀರಿ.

(ಶ್ರೀ ಎಚ್. ಎಂ. ಚೆನ್ನಬಸಪ್ಪ)

ಇನ್ನು ಸಕ್ಕರೆಯೂ ಸಹಿತ ಈಗ ಮಾಡಿರತಕ್ಕಂಥ ಪದ್ಧತಿಯಿಂದ ಬ್ಲ್ಯಾಕ್ ಮಾರ್ಕೆಟ್‌ನಲ್ಲಿ ಹೋಗುತ್ತಾ ಇದೆ, ಇಷ್ಟೊಂದು ಡಿಟೇಲ್ ಆಗಿ ಹೇಳುತ್ತಿರಲಿಲ್ಲ. ಕೊನೆಗೆ ನೀವಾಗೇ ನನ್ನನ್ನು ಉದ್ರೇಕಿಸಿ ಈ ವಿಷಯಗಳನ್ನು ಪರಿಶೀಲನೆ ಮಾಡಿಸುತ್ತಾ ಇದ್ದೀರಿ.

ಆದುದರಿಂದ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ, ತಮ್ಮ ನೀತಿ ಏನಿದೆ ಆ ನೀತಿಯನ್ನು ಬದಲಾವಣೆ ಮಾಡಿ. ಒಂದು ವೇಳೆ ನಿಮಗೆ ಸಾಧ್ಯವಿಲ್ಲ ಎಂದರೆ, ಕೇಂದ್ರ ಸರ್ಕಾರ ಈ ನೀತಿಯನ್ನು ಬದಲಾವಣೆ ಮಾಡಬೇಕು. ಕೇಂದ್ರ ಸರ್ಕಾರ ವ್ಯವಸಾಯ ಅಧಿಕಾರಿಗಳ ಸಂಬಳ, ಟಿ.ಎ. ಮತ್ತು ಡಿ. ಎ. ಇಷ್ಟಕ್ಕೂ ಕೂಡ ಐದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇದು ತಮಗೆಲ್ಲ ಗೊತ್ತಿದೆ. ಈ ಎಲ್ಲ ವಿಷಯಗಳನ್ನೂ ತಾವು ಪರಿಶೀಲನೆ ಮಾಡಿ ಆದಷ್ಟು ತೀವ್ರವಾಗಿ ಈ ನೀತಿಗಳನ್ನು ಬದಲಾವಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.

† ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಮಾಲೂರು).—ಮಾನ್ಯ ಅಧ್ಯಕ್ಷರೇ, ಇಷ್ಟು ಹೊತ್ತು ಮಾತನಾಡಿದಂಥ ಅನೇಕ ಸ್ನೇಹಿತರುಗಳು ಸಂಸ್ಥಾನಾದ್ಯಂತ ಮಳೆ ಇವತ್ತಿನ ದಿವಸ ಮಳೆ ಬೆಳೆಗಳು ಚೆನ್ನಾಗಿ ಆಗದೆ ಬಹಳ ಕಷ್ಟ ಪರಿಸ್ಥಿತಿಯಲ್ಲಿರತಕ್ಕ ವಿಷಯವನ್ನು ಸರ್ಕಾರದವರ ಗಮನಕ್ಕೆ ತಂದಿದ್ದಾರೆ. ಕೋಲಾರ ಜಿಲ್ಲೆಯಲ್ಲಾದರೂ ಬತ್ತದ ಬೆಳೆ ಸುತರಾಂ ಆಗಿಲ್ಲ, ರಾಗಿಯಂತೂ ಬಹುಶಃ ಒಂದು ತಿಂಗಳಿಂದ ಮೂರು ತಿಂಗಳವರೆಗೂ ರೈತರಿಗೆ ಸಾಕಾಗಬಹುದು. ಈ ಒಂದು ಪರಿಸ್ಥಿತಿಯಲ್ಲಿ ರೈತರಿಗೆ ತಮ್ಮ ದನಕರುಗಳಿಗೆ, ಕುಡಿಯುವುದಕ್ಕೆ ನೀರಿಲ್ಲದೆ ಇರತಕ್ಕ ಪರಿಸ್ಥಿತಿ ಬಹಳ ಜಾಗ್ರತೆ ಬರುತ್ತಿದೆ. ಕೆರೆಗಳಲ್ಲಿ ಈವಾಗ ನೀರೇ ಇಲ್ಲ. ಬಾವಿಗಳಲ್ಲಿ ಈಗಿನವರೆಗೆ ನೀರು ಸಿಕ್ಕುತ್ತಿದೆ. ಇನ್ನು ಒಂದು ತಿಂಗಳಾದಮೇಲೆ ಅಲ್ಪಸ್ವಲ್ಪವಾಗಿ ಬೆಳೆದಿರತಕ್ಕ ರೈತರ ರಾಗಿ ಬೆಳೆ ಮುಗಿದಮೇಲೆ ಅವರು ಏನು ಕೆಲಸ ಮಾಡಬೇಕೋ ದಿಕ್ಕು ತೋಚದೆ ಇರತಕ್ಕ ಪರಿಸ್ಥಿತಿ ಒದಗಿದೆ. ಸರ್ಕಾರದವರು ಈಗಾಗಲೇ ಮುಂಜಾಗ್ರತೆ ಕಾರ್ಯಕ್ರಮಗಳನ್ನು ತೆಗೆದುಕೊಂಡು ಡಿವಿಜನಲ್ ಕಮಿಷನರಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ತಕ್ಕ ಸೂಚನೆಗಳನ್ನು ಕಳಿಸಿ ಕ್ಷಾಮ ನಿವಾರಣೆ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದರೂ ಇನ್ನೂ ಕೆಲಸಗಳನ್ನು ತೆಗೆದುಕೊಳ್ಳದೆ ಅವರು ಹಿಂದುಮುಂದು ನೋಡುತ್ತ ಇರತಕ್ಕ ಪರಿಸ್ಥಿತಿ ಇದೆ. ನಾನಾದರೂ ಈಗ ಮಾನ್ಯ ರೆವೆನ್ಯೂ ಮತ್ತು ಆಹಾರ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಈ ಪರಿಸ್ಥಿತಿ ಒದಗಿರತಕ್ಕ ಕಡೆ, ಈ ವರ್ಷವೇ ಅಲ್ಲ, ಆಗಾಗ್ಗೆ ಇಂಥ ಪರಿಸ್ಥಿತಿ ಒದಗುತ್ತಲೇ ಇದೆ. ಕೇವಲ ಹತ್ತು ವರ್ಷಗಳಿಂದಲೂ ಅಲ್ಲ, ಅನೇಕ ವರ್ಷಗಳಿಂದಲೂ ಇದೆ. ಇದಕ್ಕೆ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಏರ್ಪಾಡು ಮಾಡಬೇಕೆಂದು ನಮ್ಮ ಮೈಸೂರು ಸಂಸ್ಥಾನದ ಮುಖ್ಯ ಮಂತ್ರಿಗಳು ಮತ್ತು ದಕ್ಷಿಣ ಇಂಡಿಯಾದೇಶದ ಇತರ ಸಂಸ್ಥಾನಗಳ ಮುಖ್ಯ ಮಂತ್ರಿಗಳು, ಆಂಧ್ರ ಪ್ರದೇಶ, ಮದ್ರಾಸ್ ಮತ್ತು ಕೇರಳದ ಮುಖ್ಯ ಮಂತ್ರಿಗಳು ನಂದಿ ಬೆಟ್ಟದಲ್ಲಿ ಸೇರಿದ್ದನ್ನು ಈ ಸಂದರ್ಭದಲ್ಲಿ ಜ್ಞಾಪಕ ಮಾಡಿಕೊಳ್ಳಬೇಕಾಗಿದೆ. ಆ ಸಂದರ್ಭದಲ್ಲಿ 40 ಕೋಟಿ ರೂಪಾಯಿಗಳನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದಿಟ್ಟು ಅದನ್ನು ಒಂದು ಸರ್ವೆ ಮಾಡುವುದಕ್ಕೆ ಉಪಯೋಗಿಸಿಕೊಳ್ಳಬೇಕು ಎಂದು ತೀರ್ಮಾನವಾದ ಹಾಗೆ ಕಾಣಿಸುತ್ತದೆ. ಸರ್ವೆ ಆಯಿತೋ ಏನಾಯಿತೋ ಗೊತ್ತಿಲ್ಲ. ಕೇವಲ ಸರ್ವೆ ಆದರೆ ಸಾಲದು, ಅದಕ್ಕೆ ತಕ್ಕಷ್ಟು ಮೊಬಲಗನ್ನು ತೆಗೆದಿಟ್ಟು ಕ್ಷಾಮ ನಿವಾರಣಾ ಕಾಮಗಾರಿ ಯೋಜನೆಗಳನ್ನು, ಶಾಶ್ವತವಾದ ಕ್ಷಾಮ ನಿವಾರಣೆಗಾಗಿ ಹಾಕತಕ್ಕ ಏರ್ಪಾಡನ್ನು ಮಾಡಿ ನಾಲ್ಕನೆ ಯೋಜನೆಯಲ್ಲಿ ಸೂಕ್ತ ಪರಿಹಾರ ಕಾರ್ಯಕ್ರಮಗಳನ್ನು ದಕ್ಷಿಣ ಇಂಡಿಯಾದ ಅನೇಕ ಭಾ ಕ್ಷಾಮ ಆಗಾಗ್ಗೆ ತಲೆದೋರತಕ್ಕ ಸ್ಥಳಗಳಲ್ಲಿ ತೆಗೆದುಕೊಳ್ಳತಕ್ಕದು ಬಹಳ ಅವಶ ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳಬೇಕಾಗಿದೆ. ನಮ್ಮ ಮಾನ್ಯ ಗಳು ಈ ದಿಸೆಯಲ್ಲಿ ಏನು ಹೆಜ್ಜೆ ಇಟ್ಟಿದ್ದಾರೆ, ಅದನ್ನು ಮುಂದುವರಿಸಬೇಕಾ ದಿಂದ ಅವರು ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾರೆ. ಅವರು ಸಂಬಂಧದಲ್ಲಿ ಶಾಶ್ವತವಾದ ಏರ್ಪಾಡನ್ನು ಮಾಡಬೇಕೆಂದು ನಾನು ಅವರಲ್ಲಿ ತ್ತಿದ್ದೇನೆ.

ನಮ್ಮ ಆಹಾರ ಮಂತ್ರಿಗಳಾದ ಜತ್ತಿ ಅವರು ಹಿಂದೆ ಮುಖ್ಯ ಮಂತ್ರಿ ರಿಲೀಫ್ ಬೋರ್ಡ್ ಎಂದು ಹಿಂದೆ ಮಲೆನಾಡು ಡೆವಲಪ್‌ಮೆಂಟ್ ಬೋ ಅಭಿವೃದ್ಧಿಗೆ ಒಂದು ಬೋರ್ಡ್ ಇದ್ದ ಹಾಗೆ ಕ್ಷಾಮ ಬರತಕ್ಕ ಪ್ರದೇ ಕ್ಷಾಮ ನಿವಾರಣಾ ಕಾರ್ಯಕ್ಕಾಗಿ ಒಂದು ಬೋರ್ಡನ್ನು ಏರ್ಪಾಡು ಸೂಚನೆಯಿತ್ತು. ಅದನ್ನು ಈಗಲಾದರೂ ಸರ್ಕಾರದವರು ಕ ಅವಶ್ಯಕವಾಗಿದೆ ಎಂದು ಸರ್ಕಾರದಲ್ಲಿ ಈ ಸಂದರ್ಭದಲ್ಲಿ ಒತ್ತಾಯ

ಈಗ ಪ್ರಕೃತದಲ್ಲಿ ಶಾಶ್ವತವಾದ ಕ್ಷಾಮ ನಿವಾರಣಾ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಈಗ ಒದಗಿರತಕ್ಕ ಕಷ್ಟ ಪರಿಹಾರಕ್ಕಾಗಿ ನಾನಾ ಇಲಾಖೆಗಳ ಇಂಟ್‌ಗ್ರೇಟೆಡ್ ಫ್ಯಾಮಿನ್ ರಿಲೀಫ್ ಸ್ಕೀಂ ಅನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಮತ್ತು ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲಿಯೂ ಏರ್ಪಾಡು ಮಾಡತಕ್ಕದ್ದು ಬಹಳ ಅವಶ್ಯಕವಾಗಿದೆ ಎಂದು ಈ ಸಂದರ್ಭದಲ್ಲಿ ನಮ್ಮ ಎಲ್ಲ ಡೆವಲಪ್ ಮೆಂಟ್ ಇಲಾಖೆಗಳ ಮಂತ್ರಿಗಳನ್ನೂ ಒತ್ತಾಯಪಡಿಸಲು ಇಚ್ಛಿಸುತ್ತೇನೆ. ತಾಲ್ಲೂಕು ಮಟ್ಟದಲ್ಲಿ ಒಂದು ಕೋ-ಆರ್ಡಿನೇಷನ್ ಕಮಿಟಿಯನ್ನು ಮಾಡಿದ್ದಾರೆ. ಇರಿಗೇಷನ್, ಸಾಯಿಲ್ ಕನ್‌ಸರ್ವೇಷನ್ ಸೆರಿಕಲ್ಚರ್, ಅನಿಮಲ್ ಹಸ್ಬೆಂಡ್ರಿ ಈ ಮುಂತಾದ ಇಲಾಖೆಗಳನ್ನು ಸೇರಿಸಿ ಅವರು ಒಂದು ಯೋಜನೆ ಯನ್ನು ತಯಾರುಮಾಡಿ ಅದನ್ನು ಕಾರ್ಯಗತ ಮಾಡತಕ್ಕ ಕ್ಷಾಮ ನಿವಾರಣಾ ಸಮಿತಿಯನ್ನು ಮಾಡಿದ್ದಾರೆ. ಕೇವಲ ತಾಲ್ಲೂಕು ಮಟ್ಟದಲ್ಲಿ ಇಂಥ ಕಮಿಟಿಗಳನ್ನು ಮಾಡಿದರೆ ಸಾಲದು. ಜಿಲ್ಲಾ ಮಟ್ಟದಲ್ಲಿ ಕೂಡ ಇವನ್ನು ಮಾಡಬೇಕಾದ್ದು ಅವಶ್ಯಕವಿದೆ. ಈಗಿನ ಯೋಜನೆಯ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಕ್ಷಾಮ ನಿವಾರಣಾ ಸಮಿತಿ ಇಲ್ಲ. ಹಣದ ಪ್ರಶ್ನೆ ಬಂದಾಗ ಜಿಲ್ಲಾ ಮಟ್ಟದಲ್ಲಿ ಇರುವ ಎಕ್ಸಿಕ್ಯೂಟಿವ್ ಇಂಜನಿಯರ್, ಸಾಯಿಲ್ ಕನ್‌ಸರ್ವೇಷನ್ ಆಫೀಸರ್ ಮತ್ತು ಇತರೆ ಡೆವಲಪ್ ಮೆಂಟ್ ಇಲಾಖೆಯ ಅಧಿಕಾರಿಗಳು ವಿವೇಚನೆಯಿಂದ ಯೋಜನೆಗಳನ್ನು ಹಾಕತಕ್ಕದ್ದೂ, ಹಣವನ್ನು ಖರ್ಚು ಮಾಡಲು ಕೊಡತಕ್ಕದ್ದೂ, ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಪರಿಹಾರವನ್ನು ಕಳಿಸತಕ್ಕದ್ದೂ ಇವಕ್ಕೆಲ್ಲ ಜಿಲ್ಲಾಮಟ್ಟದಲ್ಲಿರುವ ಅಧಿಕಾರಿಗಳಿಗೆ ಅವಕಾಶವಿದೆ. ತಾಲ್ಲೂಕು ಮಟ್ಟದಲ್ಲಿರುವ ಸಣ್ಣ ಪುಟ್ಟ ಅಧಿಕಾರಿಗಳಿಗೆ ಇಷ್ಟು ಅವಕಾಶವಿರುವುದಿಲ್ಲ. ಆದುದರಿಂದ ಜಿಲ್ಲಾ ಮಟ್ಟದಲ್ಲಿ ಒಂದು ಕ್ಷಾಮ ನಿವಾರಣಾ ಸಮಿತಿಯನ್ನು ಏರ್ಪಾಡು ಮಾಡಿ ಅದರಲ್ಲಿ ಅಧಿಕಾರಿಗಳು ಮತ್ತು ಖಾಸಗಿ ಮಹನೀಯರುಗಳು ಒಂದು ಸಂಬಂಧವನ್ನಿಟ್ಟುಕೊಂಡು ಕ್ಷಾಮ ನಿವಾರಣೆಗೆ ಇಂಟ್‌ಗ್ರೇಟೆಡ್ ಫ್ಯಾಮಿನ್ ರಿಲೀಫ್ ಸ್ಕೀಮನ್ನು ಹಾಕಿ ಅದರ ಮುಖಾಂತರ ಅನುಕೂಲವನ್ನು ಮಾಡತಕ್ಕದ್ದು ಬಹಳ ಅವಶ್ಯಕವಾಗಿದೆ ಎಂದು ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳಬೇಕಾಗಿದೆ.

ನಾನಾ ಇಲಾಖೆಗಳು ಹಣವನ್ನು ಖರ್ಚು ಮಾಡುತ್ತಿವೆ. ಪಬ್ಲಿಕ್ ವರ್ಕ್ಸ್ ಇಲಾಖೆ ಹೆಚ್ಚು ಹಣವನ್ನು ಬೆಂಗಳೂರು, ಕೋಲಾರ, ಚಿತ್ರದುರ್ಗ ಮತ್ತು ಕ್ಷಾಮ ಡಾಮರಗಳಿಗೆ ತುತ್ತಾಗಿರುವ ಬಿಜಾಪುರ, ರಾಯಚೂರು, ಈ ಜಿಲ್ಲೆಗಳಲ್ಲಿ ಖರ್ಚು ಮಾಡತಕ್ಕದ್ದು ಬಹಳ ಅವಶ್ಯಕವಾಗಿದೆ ಎಂದು ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳಬೇಕಾಗಿದೆ. ಇಲಾಖೆಗಳವರು ಬಜೆಟ್ಟಿನಲ್ಲಿ ಒದಗಿಸಿರುವುದನ್ನು ಸಾಮಾನ್ಯವಾಗಿ ಖರ್ಚು ಮಾಡುತ್ತಾರೆ. ಆದರೆ ಇಂಥ ವಿಶೇಷ ಸನ್ನಿವೇಶದಲ್ಲಿ ಕ್ಷಾಮ ಸ್ಥಿತಿ ಭೀಕರ ರೂಪದಲ್ಲಿ ತಲೆದೋರಿದಾಗ, ಹೆಚ್ಚಿನ ಹಣವನ್ನು ಇಲಾಖೆಗಳವರಿಗೆ ಒದಗಿಸಿ ಕೊಡಬೇಕು. ನಾಲ್ಕನೆಯ ಯೋಜನೆಯಲ್ಲಿ ನಾಲ್ಕು ಕೋಟಿ ರೂಪಾಯಿಗಳನ್ನು ಒದಗಿಸುತ್ತಿದ್ದಾರೆ ನಮ್ಮ ಮೈಸೂರು ಸರ್ಕಾರದವರು ಈಗಿರತಕ್ಕ ಪರಿಸ್ಥಿತಿಯಲ್ಲಿ ಅತ್ಯಂತ ಸ್ವಲ್ಪ ಹಣವನ್ನು ಖರ್ಚು ಮಾಡಿದರೆ ಭೀಕರ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಹೆಚ್ಚಿನ ಹಣವನ್ನು ಒದಗಿಸುವ ಏರ್ಪಾಡನ್ನು ನಮ್ಮ ಸರ್ಕಾರದವರು ಮಾಡಿ, ಇಂಡಿಯಾ ಸರ್ಕಾರದವರು ಸುಮಾರು ಹತ್ತು ಕೋಟಿ ರೂಪಾಯಿಗಳನ್ನಾದರೂ ಈ ಕೆಲಸಕ್ಕಾಗಿ ಒದಗಿಸುವಂತೆ ಮಾಡಿದರೆ ಆ ಹಣವನ್ನು ಉಪಯೋಗಿಸಿ ನಾನಾ ಇಲಾಖೆಗಳ ಮುಖಾಂತರ ತಾಲ್ಲೂಕುಗಳಲ್ಲಿ ಕ್ಷಾಮ ಪರಿಹಾರ ಕಾರ್ಯಗಳನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ, ಇದು ಬಹಳ ಅವಶ್ಯಕವಾದುದು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳಬೇಕಾಗಿದೆ.

ಆಹಾರ ಇಲಾಖೆಯ ವಿಷಯದಲ್ಲಿ ನಮ್ಮ ಸ್ನೇಹಿತರನೇಕರು ಸೂಚನೆಗಳನ್ನು ಕೊಟ್ಟಿದ್ದಾರೆ. ಬೆಳೆಯಾಗಿಲ್ಲದೆ ಇರುವ ಪರಿಸ್ಥಿತಿಯಲ್ಲೂ ಎಕರೆಗೆ ಇಷ್ಟು ದವಸ ಕೊಡಿ ಎಂದು ಏನೂ ಬೆಳೆಯದೆ ಇರತಕ್ಕ ರೈತರನ್ನು ಕೇಳಿದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಈಗಾಗಲೇ ಅನೇಕರು ಗಾಬರಿಪಟ್ಟಿದ್ದಾರೆ. ಎಲ್ಲೆಲ್ಲಿ ಬೆಳೆಯಾಗಿಲ್ಲ ಅಂಥ ಕಡೆಗಳಲ್ಲಿ ಪ್ರೊಕ್ಯೂರಮೆಂಟ್ ಮಾಡುವುದಿಲ್ಲ ಎನ್ನುವ ಒಂದು ಭರವಸೆಯನ್ನು ರೈತರಿಗೆ ಸರ್ಕಾರದವರು ಕೊಡತಕ್ಕದ್ದು ಬಹಳ ಅವಶ್ಯಕ.

8-00 P.M.

ಈಗ ಷಾರ್ಟ್ ಟರ್ಮ್ ಕ್ರಾಪ್ಸ್ ಬೆಳೆಯುವುದಕ್ಕೆ ಸಾಧ್ಯವಿರುವ ಕಡೆ ಅವನ್ನು ಬೆಳೆಯಬೇಕು, ಉಳಿದ ಕಡೆ ರಾಗಿ, ಹೈಬ್ರಿಡ್ ಜೋಳ ಮುಂತಾದುವುಗಳನ್ನು ಬೆಳೆಸುವುದಕ್ಕೆ ತಕ್ಕ ಏರ್ಪಾಡು ಮಾಡುವುದಕ್ಕೆ ಕೂಡ ಗಮನಕೊಡುವುದಕ್ಕೆ ಅವಕಾಶವಿದೆ ಎಂದು ಇಷ್ಟು ಹೇಳಿ ಸರಕಾರದವರು ಈ ವಿಷಯದ ಬಗ್ಗೆ ಹೆಚ್ಚಿನ ನಿಗಾ ಇಟ್ಟು ರೈತರನ್ನು ಬೇಸಿಗೆಯಲ್ಲಿ ಕ್ಷಾಮದಿಂದ ಕಾಪಾಡುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಸನ್ಮಾನ್ಯ ಸಭಾಧ್ಯಕ್ಷರೇ, ಈಗಾಗಲೆ ಈ ಸದನದ ಮಾನ್ಯ ಸದಸ್ಯರು ಎಲ್ಲೆಲ್ಲಿ ಆಹಾರ ಧಾನ್ಯದ ಕೊರತೆಯಿದೆ, ಯಾವ ಯಾವ ಭಾಗದಲ್ಲಿ ಕ್ಷಾಮವಿದೆ ಮತ್ತು ನಮ್ಮ ರಾಜ್ಯದಲ್ಲಿ ಲೆವಿಗೆ ಸಂಬಂಧಪಟ್ಟ ಕಾನೂನಿನಿಂದ ಏನೇನು ತೊಂದರೆಯಾಗಿದೆ ಎಂಬುದನ್ನು ಸರಕಾರದ ಅವಗಾಹನೆಗೆ ತಂದಿದ್ದಾರೆ. ನಾನು ಹೆಚ್ಚಾಗಿ ಲೆವಿ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ನಮ್ಮದು ಮಲೆನಾಡು ಪ್ರಾಂತ್ಯ. ಆದುದರಿಂದ ಅದರ ವಿಚಾರ ಹೇಳುತ್ತೇನೆ. ಒಂದು ಉದಾಹರಣೆ ಹೇಳುತ್ತೇನೆ, ಮಲೆನಾಡು ಪ್ರದೇಶ ಶಿವಮೊಗ್ಗ ಜಿಲ್ಲೆ ಬತ್ತದ ಕಣಜ ಎಂಬ ಹೆಸರಿದೆ. ಈ ಹೆಸರು ಈಗ ರಾಜ್ಯ ಸರಕಾರ ಕೊಟ್ಟಿರುವುದಲ್ಲ, ಹಿಂದಿನಿಂದ ಅದು ಅನೂಚಾನವಾಗಿ ಬಂದಿದೆ. ಆದರೆ ನಮ್ಮ ಮಲೆನಾಡಿನಲ್ಲಿ ಗಂಜನೂರು ಡ್ಯಾಂ, ಭದ್ರಾ ಡ್ಯಾಂ ಮುಂತಾದ್ದನ್ನು ಕಟ್ಟಿದ್ದರೂ ಕೂಡ ಅದರ ಉಪಯೋಗ ಮೈದಾನಕ್ಕೆ ಆಗುತ್ತಿದೆ. ಶರಾವತಿ ಬಳಿ ದೊಡ್ಡ ವಿದ್ಯುತ್ ಕೇಂದ್ರವಿದ್ದರೂ ಕರೆಂಟನ್ನು ಎಲ್ಲಿಗೆ ಕೊಡುತ್ತಾರೆಂಬುದನ್ನು ನೋಡಬಹುದು. ಯಾವ ಮಲೆನಾಡಿನಲ್ಲಿರುವ ಪ್ರಕೃತಿ ಸಂಪತ್ತನ್ನು ಉಪಯೋಗ ಮಾಡಿಕೊಂಡು ದುರುಪಯೋಗಪಡಿಸಿ ಬೇರೆಯವರಿಗೆ ಕೊಡುತ್ತಿದ್ದಾರೆ. ಇದರ ಅರ್ಥ ಬೇರೆಯವರಿಗೆ ಕೊಡಬಾರದೆಂದಲ್ಲ, ನಮಗೆ ದೊರೆಯಬೇಕಾದ ಸೌಲಭ್ಯ ಮಲೆನಾಡಿಗೆ ದೊರೆಯದೆ ಬೇರೆಯವರಿಗೆ ದೊರೆಯುತ್ತಿದೆ. ಮೊದಲು ನಮಗೆ ಕೊಟ್ಟು ನಂತರ ಬೇರೆಯವರಿಗೆ ಕೊಡಬೇಕಾಗಿತ್ತು.

ಲಿಫ್ಟ್ ಇರಿಗೇಷನ್ ಯೋಜನೆ ನಮ್ಮ ಪ್ರದೇಶದಲ್ಲಿದೆ. ಸೊರಬ ತಾಲ್ಲೂಕು ಲಕ್ಕವಳ್ಳಿಯಲ್ಲಿ ಅದಿದೆ. ಆದರೆ 1954ರಲ್ಲೇ ಈ ಯೋಜನೆ ಜಾರಿಗೆ ಬಂದರೂ ಕೂಡ ಅಲ್ಲಿ ಜನರಿಗೆ ನೀರು ದೊರೆತಿಲ್ಲ. ಈಗ ಅಲ್ಲಿ ಮೆಷಿನರಿ ಹರಾಜು ಮಾಡುವುದಕ್ಕೆ ನೋಟೀಸು ಕೊಟ್ಟಿದ್ದಾರೆ. ಸರಕಾರ ಈ ಯೋಜನೆಯನ್ನು ತಾನೇ ಜಾರಿಗೆ ತಂದು ಈಗ ಅದರಿಂದ ಅನುಕೂಲ ಕಲ್ಪಿಸದೆ ಅದಕ್ಕೆ ಸಂಬಂಧಪಟ್ಟ ಸಾಮಾನುಗಳನ್ನು ಹರಾಜು ಮಾಡುತ್ತಿದ್ದಾರೆ. ಜನರು ಸೊಸೈಟಿ ಮೂಲಕ ತಮ್ಮ ಆಸ್ತಿಯನ್ನು ದೀಡು ಮಾಡಿರುವುದನ್ನು ಹರಾಜಿಗೆ ತರಲು ಯೋಚನೆ ಮಾಡುತ್ತಿದ್ದಾರೆ. ಇಂಥ ಯೋಜನೆ ನಮ್ಮ ಕಡೆ ಇದೆ. ನಮ್ಮ ಮಲೆನಾಡಿಗೆ ನೀರಾವರಿ ಸೌಕರ್ಯ ಮಾಡಿಕೊಟ್ಟಿಲ್ಲ. ಮಾಡಿಕೊಡುವುದಾದರೆ ವರದಾ ನದಿಯ ಎರಡು ಕಡೆಯೂ ಪಂಪುಸೆಟ್ಟು ಬೇಕಾದಷ್ಟು ಹಾಕಿ ನೀರಿನ ಸೌಕರ್ಯ ಕಲ್ಪಿಸಬಹುದು, ನೀರು ಬೇಕಾದಷ್ಟಿದೆ. ಆದರೆ ಆ ರೀತಿ ಮಾಡಿಲ್ಲ. ಇಲ್ಲಿಯವರೆಗೆ ಒತ್ತಾಯ ಮಾಡಿದರೂ ಕೂಡ ಸರಕಾರ ಮಾಡಿಲ್ಲ. ಲೆವಿ ಮಾತ್ರ ಹಾಕುತ್ತಿದ್ದಾರೆ. ನಮ್ಮಲ್ಲಿ ಯಥೇಚ್ಛವಾಗಿ ಬತ್ತ ಬೆಳೆದು ದೇಶಕ್ಕೆಲ್ಲಾ ಸರಬರಾಯಿ ಮಾಡುತ್ತಿದ್ದೇವೆ. ಆದರೆ ಆಕಾಶದಿಂದ ಅದು ಬೀಳುವುದು ಎಂಬ ಭಾವನೆ ಇದೆ. ಆಹಾರ ಮಂತ್ರಿಗಳಿಗೆ ನಮ್ಮ ಕಡೆಗೆ ಬಂದು ನೋಡಿ ಎಂದು ಆಹ್ವಾನ ಕೊಡುತ್ತೇನೆ. ನಮ್ಮ ಕಡೆ ಸಿಕ್ಕಾಪಟ್ಟೆ ಕಂದಾಯ ಹಾಕಿದ್ದಾರೆ; ಬಹಳ ಜಾಸ್ತಿ ಹಾಕಿದ್ದಾರೆ. ಬೆಳೆಯುವವರ ಬಗ್ಗೆ ತೋರಿಸುವ ಪ್ರೋತ್ಸಾಹವಿದು. ಹೀಗಾದರೆ ಸಾಕಷ್ಟು ಬೆಳೆಯಲು ಸಾಧ್ಯವೇ ? ಅನಪಟ್ಟೆ ಜಲಾಶಯವಿರುವ ಕಡೆ ಸಿಕ್ಕಾಪಟ್ಟೆ ಲೆವಿ ಹಾಕಿದ್ದಾರೆ. ಫಾರಂ ಭರ್ತಿಮಾಡಿಕೊಟ್ಟು ವಿನಾಯಿತಿ ಕೇಳಬೇಕೆಂದು ಹೇಳುವುದು ಸರಿಯಲ್ಲ, ಕಾನೂನಿನ ಪ್ರತಿಯಿಂದ ವಿನಾಯಿತಿ ಪಡೆಯಿರಿ ಎಂದು ಹೇಳಬಾರದು. ನಮಗೆ ರಕ್ಷಣೆ ಕೊಡಿ. ಫಾರಂ ಕೊಟ್ಟರೆ ಲಂಚ ತೆಗೆದುಕೊಳ್ಳದೆ ಪರಿಹಾರ ನೀಡುವುದಿಲ್ಲ, ಶಾಸನದಂತೆ ನಡೆಯುವ ಅಧಿಕಾರಿಗಳಿಲ್ಲ. ಲಂಚ ಕೊಡಲು ಫಾರಂ ಭರ್ತಿಮಾಡಿ ಕೊಡಬೇಕು. ಲಂಚ ಕೊಡುವ ಪದ್ಧತಿ ನಮ್ಮ ಕಡೆ ಕಡಮೆ ಇದೆ. ಅದನ್ನು ಜಾಸ್ತಿ ಮಾಡಲು ಅವಕಾಶ ಕೊಡುವುದು ಬೇಡ. ಲೆವಿ ವಸೂಲು ಮಾಡುವುದಕ್ಕೆ ಕಾನೂನಿದೆ. ಆಹಾರ ಪದಾರ್ಥಗಳ ವಿಚಾರದಲ್ಲಿ ಸರಕಾರ ದರ ನಿಗದಿ ಮಾಡಿದೆ, ಅದಕ್ಕೆ ಸಬ್ಸಿಡಿಯಿಲ್ಲ, ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲದಿರುವುದರಿಂದ ಸಬ್ಸಿಡಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ದರವನ್ನೂ ಜಾಸ್ತಿಮಾಡುವುದಕ್ಕಾಗುವುದಿಲ್ಲವೆಂದು ತಿಳಿಸಿದ್ದಾರೆ. ಆದರೆ ಒಂದು ವಿಷಯ. ಯಾವ ಕಡೆ ಕ್ಷಾಮವಿದೆ, ಯಾವ ಕಡೆ ಇಲ್ಲ ಎಂದು ದರದ ವಿಚಾರದಲ್ಲಿ ಒಂದು ವಿಭಾಗವಾದರೂ ಮಾಡಿ. ಅದನ್ನೂ ಮಾಡಿಲ್ಲ. ಈ ವರ್ಷ ಪ್ರತಿಯೊಬ್ಬ ರೈತನಿಗೂ ಲೆವಿ ನೋಟೀಸು ಜಾರಿಯಾಗಿದೆ. ಕಾನೂನು ಪ್ರಕಾರ ಫಾರಂ ಭರ್ತಿಮಾಡಿಲ್ಲವೆಂದು ನೋಟೀಸು ಜಾರಿ ಮಾಡಿ ಅಧಿಕಾರಿಗಳು ಮನೆಗೆ ನುಗ್ಗುತ್ತಾರೆ. ಕಳೆದ ವರ್ಷ ಚುನಾವಣೆಯಾದ ಕೂಡಲೆ ಪೋಲೀಸಿನವರು, ರೆವಿನ್ಯೂ ಅಧಿಕಾರಿಗಳು, ಆಹಾರ ಇಲಾಖೆಯವರು ಮನೆಗೆ ನುಗ್ಗಿದ್ದಾರೆ. ಇದನ್ನು ಗಮನಕ್ಕೆ ತಂದೆ. ನಮಗೆ ರಕ್ಷಣೆಯಿಲ್ಲ, ನಾವೇ ಮಾಡಿಕೊಳ್ಳಬೇಕು. ಇಂಥ ಪರಿಸ್ಥಿತಿ ಈ ದಿವಸ ಕೂಡ ಇದೆ. ಈ ಅಧಿವೇಶನ ನಡೆಯುವಾಗ ನನಗೆ ಸುಮಾರು 35 ಪತ್ರಗಳು ಬಂದಿವೆ. ಆಹಾರ ಸಚಿವರಿಗೆ ಒಂದು ಪತ್ರ ಕಳುಹಿಸಿದ್ದೇನೆ, ಮಂತ್ರಿಗಳು ಸಹಾಯಮಾಡಲು ಸಿದ್ಧರಿದ್ದಾರೆ ಸಂತೋಷ. ಆದರೆ ಇದುವರೆಗೆ ದೊಡ್ಡವರಿಂದ ವಸೂಲುಮಾಡದೆ ಸಣ್ಣವರಿಂದ ವಸೂಲುಮಾಡುತ್ತಿದ್ದಾರೆ. ಮೊದಲು ದೊಡ್ಡವರಿಂದ ವಸೂಲು ಮಾಡಬೇಕೆಂದು ಹೇಳಿದರೂ ಅದನ್ನು ಮಾಡುತ್ತಿಲ್ಲ. ಸಣ್ಣ ರೈತರ ಮನೆಗೆ ಮೊದಲು ಹೋಗುತ್ತಾರೆ. ಲೆವಿ ಪ್ರಕಾರ ಆಹಾರ ಪದಾರ್ಥಗಳನ್ನು ವಸೂಲು

ಮಾಡುವಾಗ ಮನೆಗೆ ನುಗ್ಗುವುದು ತಪ್ಪಿಸಬೇಕು. ಹೋದವರ್ಷ ಮಾಡಿದಹಾಗೆ ಮಾಡುವುದಾದರೆ ಸರಕಾರದಿಂದ ರಕ್ಷಣೆ ದೊರೆಯದಿದ್ದರೆ ಮುಂದೆ ಬಹಳ ತೊಂದರೆಗೀಡಾಗಬೇಕಾಗುತ್ತದೆ. ಈಗಾಗಲೆ ತೊಂದರೆಯಾಗುವುದನ್ನು ಎದುರಿಸಲು ಜನ ಸಿದ್ಧವಾಗಿದ್ದಾರೆ ಯಾವ ರೈತರಿಂದ ಓಟು ಪಡೆದು ಬಂದು ಯಾರು ಸರಕಾರ ನಡೆಸುತ್ತಿದ್ದಾರೋ ಅವರು ರೈತರಿಗೆ ರಕ್ಷಣೆ ಕೊಡದಿದ್ದರೆ ರೈತರು ಅವರನ್ನು ಎದುರಿಸಲು ಗಟ್ಟಿಯಾಗಿ ನಿಲ್ಲುತ್ತಿದ್ದಾರೆ. ಮುಂದೆ ಸರಕಾರವಾಗಲಿ ಯಾರೇ ಆಗಲಿ ರೈತರಿಗೆ ತೊಂದರೆಮಾಡಿದರೆ ಅವರಿಗೂ ತೊಂದರೆಯಾಗಲಿದೆ. 20 ವರ್ಷಗಳಿಂದ ಕಾಂಗ್ರೆಸ್ ಆಡಳಿತವಿದೆ, ಬೇಕಾದಷ್ಟು ಹರಿಜನರಿದ್ದಾರೆ, ಬಂಜರು ಬೇಕಾದಷ್ಟು ಇದೆ. ಇರುವ ಭೂಮಿಯನ್ನು ಬೇಕಾದವರಿಗೆ ಕೊಡುವುದಕ್ಕೆ ಶಕ್ತಿಯಿಲ್ಲ, ನೀರಾವರಿ ಸೌಕರ್ಯ ಒದಗಿಸಲು ಶಕ್ತಿಯಿಲ್ಲ. ಆದರೆ ಕೆಟ್ಟ ಕಾನೂನು ಮಾಡಿ ಲೆವಿ ವಸೂಲು ಮಾಡುತ್ತಿದ್ದಾರೆ. ಜಡೆ ಹೋಬಳಿ ಅನವಟ್ಟಿಗೆ ಬನ್ನಿ, ಹರಕಲು ಬಟ್ಟೆ ತೊಡುವ, ಮುರುಕಲು ಗುಡಿಸಲುಗಳಲ್ಲಿ ವಾಸಮಾಡುವ ಹರಿಜನರನ್ನು ನೋಡಿ ಅವರ ಕಡೆ ಗಮನಕೊಡಿ.

ಬೇಕಾದಷ್ಟು ಬಂಜರು ಜಮೀನು ಇದೆ ಅದನ್ನು ದಾನ ಮಾಡಿ, ಕೊಡಿ, ನಂಬಿಕೆಯಿಂದ ಅವರು ತಮ್ಮ ಜೀವನ ಮಾಡುತ್ತಾರೆ. ಇದೇ ಪ್ರಕಾರ ಮುಂದುವರಿಸಿದ್ದೇ ಆದರೆ ಈ ಲೆವಿಗೆ ಸಂಬಂಧಪಟ್ಟ ಕಾನೂನನ್ನು ಮತ್ತು ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಅರ್ಜಿ ಹಾಕಬೇಕೆಂದು ಏನು ಹೇಳುತ್ತೀರಿ ಅದನ್ನು ಮತ್ತು ಕಂದಾಯದ ಬಗ್ಗೆ ಕಾನೂನು ಭಂಗ ಚಳುವಳಿಯನ್ನು ಇದೇ ಜನವರಿಯಲ್ಲಿ ಪ್ರಾರಂಭ ಮಾಡುತ್ತೇವೆ ಎಂದು ಹೇಳಿ ತಮಗೆ ಎಚ್ಚರಿಕೆ ಕೊಡುತ್ತಾ ಇದ್ದೇನೆ. ಆದ ರಿಂದ ಈಗಲಾದರೂ ಯೋಚನೆ ಮಾಡಿ ಜಮೀನು ಇಲ್ಲದವರಿಗೆ ಜಮೀನು ಕೊಡಿ, ಮತ್ತು ಅವರಿಗೆ ಇರತಕ್ಕ ಕಷ್ಟಪರಿಸ್ಥಿತಿಯನ್ನು ಹೋಗಲಾಡಿಸಲು ಪ್ರಯತ್ನ ಮಾಡಿ ಎಂದು ಹೇಳಿ ಇಷ್ಟು ಮಾತ ನಾಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ಆರ್. ಹಾಲಸ್ವಾಮಿ (ಜಗಳೂರು)—ಸನ್ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಅನೇಕ ಜನ ಮಾತನಾಡಿದ್ದಾರೆ. ಚಿತ್ರದುರ್ಗ ಜಿಲ್ಲೆಯೂ ಕೂಡ ಪದೇಪದೇ ಅಭಾವ ಪೀಡಿತ ಪ್ರದೇಶ ಗಳಾಗಿರುವ ಜಿಲ್ಲೆಗಳಲ್ಲಿ ಒಂದು. ಕಳೆದ ಮೂರುನಾಲ್ಕು ವರ್ಷಗಳಿಂದಲೂ ಸಹಾ ಚಿತ್ರದುರ್ಗ ತಾಲ್ಲೂಕು, ಜಗಳೂರು ತಾಲ್ಲೂಕು, ಚಳ್ಳಕೆರೆ ತಾಲ್ಲೂಕು, ಮೊಳಕಾಲ್ಮೂರು ತಾಲ್ಲೂಕು, ಹಿರಿಯೂರು ತಾಲ್ಲೂಕುಗಳು ಕಷ್ಟ ಪರಿಸ್ಥಿತಿಯನ್ನು ಎದುರಿಸುತ್ತಾ ಇರತಕ್ಕದ್ದು ಎಲ್ಲರಿಗೂ ಗೊತ್ತಿದೆ. ಜಗಳೂರು ತಾಲ್ಲೂಕಿನಲ್ಲಿ ಕಳೆದ ಎರಡು ಮೂರು ವರ್ಷಗಳಿಂದಲೂ ಸಕಾಲದಲ್ಲಿ ಮಳೆಬಾರದೆ ರೈತರು ಬಹಳ ಕಷ್ಟದಲ್ಲಿದ್ದಾರೆ. ಅಲ್ಲಿಯೂ ಕೂಡ ಶೀಘ್ರವಾಗಿ ಪರಿಹಾರ ಕಾಂಗಾರಿ ಗಳನ್ನು ಕೈಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸರ್ಕಾರದವರು ಶಾಶ್ವತ ಪರಿಹಾರ ಕಾರ್ಯಕ್ರಮಗಳನ್ನು ಕೈಕೊಳ್ಳಲು ಅಭಾವ ಪೀಡಿತ ಪ್ರದೇಶ ಎಂದು ಪರಿಗಣಿಸಿರತಕ್ಕ 7 ತಾಲ್ಲೂಕುಗಳಲ್ಲಿ ಜಗಳೂರು ತಾಲ್ಲೂಕನ್ನೂ ಕೂಡ ಸೇರಿಸಿದ್ದಕ್ಕಾಗಿ ಸರ್ಕಾರದವರಿಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುವುದರ ಜೊತೆಗೆ ಈ ಒಂದು ಕಾರ್ಯಕ್ರಮ ಶೀಘ್ರವಾಗಿ ಕಾರ್ಯರೂಪಕ್ಕೆ ಬರುವಂತೆ ಮಾಡಲು ಪ್ರಯತ್ನ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಈ ಸಂಬಂಧದಲ್ಲಿ ರಿಲೀಫ್ ಕಾಂಗಾರಿಗಳನ್ನು ಹಗರಿಯಿಂದ ನಾಯಕನಹಟ್ಟಿವರೆಗೂ ಒಂದು ಫೀಡರ್ ಚಾನಲ್‌ನ್ನು ಬೇಗನೆ ಪ್ರಾರಂಭಿಸುವಂತೆ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇದರಿಂದ ಚಳ್ಳಕೆರೆ ಮತ್ತು ಜಗಳೂರು ಎರಡು ತಾಲ್ಲೂಕು ಗಳಿಗೂ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

[MR. SPEAKER in the Chair]

ಮಾನ್ಯ ರೆವಿನ್ಯೂ ಮಂತ್ರಿಗಳು ಆರಿಸಿಕೊಂಡಿರುವ ರಿಲೀಫ್ ಕಾಂಗಾರಿ ಕೆಲಸಗಳಲ್ಲಿ ಎರಡು ಕೆಲಸಗಳನ್ನು ಬಿಟ್ಟಿದ್ದಾರೆ, ಅದರಲ್ಲಿ ಗೋ ಕಟ್ಟೆಗಳ ರಿಪೇರಿ ಮತ್ತು ಹೊಸ ಗೋಕಟ್ಟೆಗಳನ್ನು ಕಟ್ಟುವ ಕೆಲಸವನ್ನೂ ಕೂಡ ತೆಗೆದುಕೊಳ್ಳುವುದನ್ನು ಸೇರಿಸಬೇಕು. ಮತ್ತು ಯಾವ ಯಾವ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಯಲ್ಲಿ ಸಾಕಷ್ಟು ನೀರಿಲ್ಲದೆ ಜನರು ಕಷ್ಟಪಡುತ್ತಾ ಇದ್ದಾರೆ ಅಂತಹ ಪ್ರದೇಶದಲ್ಲಿ ಕುಡಿಯುವ ನೀರಿನ ಬಾವಿಯನ್ನು ಆಳಪಡಿಸುವ ಕೆಲಸವನ್ನೂ ಆ 9ರಲ್ಲಿ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮೈಸೂರು ಲ್ಯಾಂಡ್ ಡೆವಲಪ್‌ಮೆಂಟ್ ಆಕ್ಟ್ ಸೆಕ್ಷನ್ 37, 1ರ ಪ್ರಕಾರ ಡಿಕ್ಲೇರ್ ಮಾಡುವುದಕ್ಕೆ ಬಹಳ ತಡವಾಗುತ್ತಾ ಇದೆ. ಜಿಲ್ಲಾಧಿಕಾರಿಗಳಿಗೇ ಆ ಅಧಿಕಾರವನ್ನು ಕೊಟ್ಟರೆ ಬೇಗನೆ ಡಿಕ್ಲೇರ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಸೂಚನೆ ಮಾಡಬಯಸುತ್ತೇನೆ. ರಿಲೀಫ್ ವರ್ಕ್ಸ್‌ನಲ್ಲಿ ಯಾವ ಯಾವ ಕಾರ್ಯಕ್ರಮವನ್ನು ಪ್ರಾರಂಭಿಸು

(ಶ್ರೀ ಜೆ. ಆರ್. ಹಾಲಸ್ವಾಮಿ)

ತ್ತೀರಿ ಅಂತಹ ಕಡೆಗಳಲ್ಲಿ ಕೊನೆ ಪಕ್ಷ 50 ಪರ್ಸೆಂಟ್ ಅದರೂ ಆಹಾರ ಧಾನ್ಯದ ರೂಪದಲ್ಲಿ ಕೊಡಬೇಕು ಮತ್ತು ಪ್ರತಿದಿವಸವೂ ಕೂಡ ಕೂಲಿಗಾರರಿಗೆ ಧಾನ್ಯವನ್ನು ಕೊಡತಕ್ಕ ವ್ಯವಸ್ಥೆ ಮಾಡುವುದು ಬಹಳ ಅವಶ್ಯಕ ಏಕೆಂದರೆ ಬೆಳಗ್ಗಿನಿಂದ ಸಾಯಂಕಾಲದವರೆಗೂ ಕೆಲಸ ಮಾಡಿ ಮನೆಗೆ ಹೋಗುವುದರಲ್ಲಿ ಸೊಸೈಟಿಗಳಲ್ಲಿ ಕಾಳೇ ಸಿಕ್ಕುವುದಿಲ್ಲ. ಅದ್ದರಿಂದ ಈ ಒಂದು ವ್ಯವಸ್ಥೆಯನ್ನು ಖಂಡಿತ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಲೆವಿ ವಿಚಾರದಲ್ಲಿ ಶ್ರೀಮಾನ್ ಚನ್ನಬಸಪ್ಪನವರು ಬಹಳ ದೀರ್ಘವಾಗಿ ಭಾಷಣ ಮಾಡಿದರು ಆದರೆ ಉತ್ತಮವಾದ ಸಲಹೆಯನ್ನು ಕೊಡಲಿಲ್ಲ. ಲೆವಿ ರೇಟ್ ಜಾಸ್ತಿ ಮಾಡಬೇಕು ಇಲ್ಲದೇ ಇದ್ದರೆ ರೈತರಿಗೆ ತೊಂದರೆಯಾಗುತ್ತದೆ ಎಂಬ ವಿಷಯವನ್ನು ಪ್ರತಿಯೊಬ್ಬರೂ ಹೇಳುತ್ತಾರೆ, ಈ ಲೆವಿಯಲ್ಲಿ ತೀವ್ರತರವಾದ ಮಾರ್ಪಾಡನ್ನು ಮಾಡಬೇಕು. ಈಗ ಕೊಡುತ್ತಾ ಇರತಕ್ಕ ರೇಟ್ ಯಾವ ವಿಧದಲ್ಲೂ ಉತ್ತೇಜನಕರವಾಗಿಲ್ಲ. ಕೇವಲ 45 ರೂಪಾಯಿ ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಎಷ್ಟೇ ತೊಂದರೆ ಇದ್ದರೂ ಕೊಡ ಹಣದ ಮುಗ್ಗಟ್ಟಿದ್ದರೂ ಕೂಡ ಲೆವಿ ರೇಟ್ ನಿಗದಿ ಮಾಡಿರುವುದನ್ನು ಜಾಸ್ತಿಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ, ಚಿತ್ರದುರ್ಗ ತಾಲ್ಲೂಕಿನಲ್ಲಿ ಹಾಗೂ ತುರುವನೂರು ಹೋಬಳಿಯಲ್ಲಿ ಮಳೆ ಇಲ್ಲದೇ ತೊಂದರೆಯಾಗಿದೆ ಎಂದು ಹೇಳುವುದಲ್ಲದೆ. ಈ ಸಾರಿ ನೀರುಳ್ಳಿ ಅಡಲ್ಟ್ರೇಟೆಡ್ ಬೀಜ ಕೊಟ್ಟದ್ದರಿಂದ ಬಹಳ ಲುಕ್ಸಾನಾಗಿದೆ, ಅದನ್ನು ಮಾರಿದವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಈ ಸಂದರ್ಭದಲ್ಲಿ ಹೇಳುತ್ತೇನೆ. ಚಿತ್ರದುರ್ಗ ಜಿಲ್ಲೆಯಲ್ಲಿ ಮತ್ತು ನನ್ನ ತಾಲ್ಲೂಕಿನಲ್ಲಿ ನೀರುಳ್ಳಿ ಯಾರು ಅಂತಹ ಬೀಜಗಳನ್ನು ಮಾರಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಅವರೆಲ್ಲ ಬಹಳ ನಷ್ಟವನ್ನು ಹೊಂದಿದ್ದಾರೆ. ಎಂದು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಮಾನ್ಯ ಸಭಾಪತಿಗಳೇ, ಈ ದಿವಸ ಈ ಬರಗಾಲ ಪರಿಸ್ಥಿತಿ ಬಗ್ಗೆ ಮಾತನಾಡುವಾಗ ಅನೇಕರು ತಮ್ಮ ತಮ್ಮ ಕಡೆಗಳಲ್ಲಿ ಬರಗಾಲ ತಲೆದೋರುತ್ತಾ ಇದೆ ಎಂಬುದನ್ನು ಹೇಳಿದ್ದಾರೆ. ನಮ್ಮ ರಾಜ್ಯದ ಬಹುಭಾಗದ ಪ್ರದೇಶಗಳಲ್ಲಿ ಬರಗಾಲ ತಲೆದೋರುತ್ತಾ ಇದೆ. ಅದರಂತೆ ಪ್ರತಿವರ್ಷವೂ ಬರಗಾಲಕ್ಕೆ ತುತ್ತಾಗಿರುವ ಬಿಜಾಪುರ ಜಿಲ್ಲೆ, ಬೆಳಗಾಂ ಹಾಗೂ ಧಾರವಾಡ ಜಿಲ್ಲೆಯ ಉತ್ತರ ಭಾಗಗಳು ಈ ಸಲವೂ ಕೂಡ ಬರಗಾಲದಿಂದ ಮುಕ್ತವಾಗಿಲ್ಲ. ಎಷ್ಟೋ ನೀರಾವರಿ ಕೆಲಸಗಳನ್ನು ಮಾಡಿದಾಗ್ಯೂ ಕೂಡ ಮುಧೋಳ್ ತಾಲ್ಲೂಕು, ಮಡಗಡ್ಡದ ಹತ್ತಿರ ಚಿಕ್ಕ ನೀರಾವರಿ ಸಲುವಾಗಿ ಒಂದು ಕರೆಯನ್ನು ನಿರ್ಮಾಣ ಮಾಡಲಾಗಿದೆ—ಆದರೂ ಕೂಡ ಇವತ್ತಿನ ದಿವಸ ಬರಗಾಲದ ಪರಿಸ್ಥಿತಿ ತಲೆದೋರಿದೆ ಎಂಬುದಕ್ಕೆ ಅದು ಸಾಕ್ಷಿಯಾಗಿದೆ. 3 ಲಕ್ಷ ರೂಪಾಯಿಗಿಂತ ಹೆಚ್ಚು ಖರ್ಚು ಮಾಡಿ ಕೆರೆ ಕಟ್ಟಿಸಿದ್ದಾರೆ, ಅದರಲ್ಲಿ ಈಗ ತಿಂಗಳ ಹಿಂದಿನಿಂದ ನೀರು ಇಲ್ಲದಂತಾಗಿದೆ. ಬಂಟನೂರಿನ ಹಳ್ಳಿ ಹತ್ತಿರ ಚಿಕ್ಕ ನೀರಾವರಿ ಕೆರೆಯನ್ನು ಕಟ್ಟಿದ್ದಾರೆ, ಅದರಲ್ಲಿ ನೀರಿನ ಅಭಾವ ಉಂಟಾಗಿದೆ. ಈ ಕರೆಗಳಲ್ಲಿ ನೀರು ಇಲ್ಲದೇ ಇರುವಾಗ ಉಳಿದ ಪ್ರದೇಶದಲ್ಲಿ ಮಳೆ ಸ್ವಲ್ಪ ಪ್ರಮಾಣದಲ್ಲಿ ಆಗಿದ್ದರೂ ಕೂಡ ಬೆಳೆ ಬರುವಹಾಗಿಲ್ಲ. ಇವತ್ತಿನ ದಿವಸ ಈ ವರ್ಷ ಮುಂಗಾರಿ ಮಳೆ ಆಗಿದ್ದರೂ ಮುಂಗಾರಿ ಬೆಳೆಯಾಗಿಲ್ಲ. ಹಿಂಗಾರಿ ಮಳೆ ಬತ್ತಕ್ಕೆ ಒಂದು ಮಳೆಯೇ ಅಲ್ಲ. ಇದಕ್ಕಿಂತ ಸ್ವಲ್ಪ ಮುಂಚೆ ಮಳೆಯಾಗಿತ್ತು. ಅದರಿಂದಾಗಿ ಬರತಕ್ಕ ಪೀಕಿನಿಂದ ಮಂತ್ರಿಗಳು ಅಥವಾ ಯಾರು ನೋಡಲಿಕ್ಕೆ ಬರುತ್ತಾರೋ ಅವರ ಕಣ್ಣಿಗೆ ಹಚ್ಚಗೆ ಹಸುರಾದ ಹೊಲ ಕಾಣಿಸುತ್ತದೆ. ಆ ರೀತಿ ಕಾಣುವುದರಿಂದ ಅಲ್ಲಿ ಸರಿಯಾವ ಅಣೆವಾರಿ ಮಾಡಿಸಬೇಕು, 8 ಅಣೆ ಬೆಳೆ ಬಂದಿದೆ ಎಂದು ಅಧಿಕಾರಿಗಳು ಒತ್ತಾಯ ಮಾಡಬಹುದು. ನಿಜವಾಗಿಯೂ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಎಲ್ಲಾ ಕಡೆಯೂ ಬರಗಾಲ ಇದೆ. ಪರಕೀಯರ ಸರ್ಕಾರ ಇದ್ದಾಗ ವಿಜಾಪುರ ಜಿಲ್ಲೆಯನ್ನು ಬರಗಾಲಪೀಡಿತ ಪ್ರದೇಶ ಎಂದು ಪರಗಣಿಸಿದ್ದರು, ಬರಬಿದ್ದಾಗ ಯಾವ ಪರಿಹಾರ ಕಾಂಗಾರಿಗಳನ್ನು ಮಾಡಬೇಕೆಂಬುದನ್ನು ಮುಂಜಾಗರೂಕತೆಯಿಂದ ತಿಳಿದುಕೊಂಡು ಆ ಕಾರ್ಯಗಳನ್ನು ಮಾಡುತ್ತಾ ಇದ್ದರು. ನಮ್ಮ ರಾಜ್ಯವನ್ನು ಕಳೆದು 20 ವರ್ಷಗಳಿಂದಲೂ ನಮ್ಮ ಮಂತ್ರಿಗಳು ಆಳುತ್ತಿದ್ದರೂ ಇವರಿಗೆ ಇನ್ನೂ ಒಕ್ಕಲುತನದಲ್ಲಿ ಸಾಕಷ್ಟು ಅನುಭವವಿಲ್ಲ. ರಾಜ್ಯದಲ್ಲಿ ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದು ನಾಲ್ಕನೆಯದನ್ನು ಪ್ರಾರಂಭಿಸುತ್ತಿದ್ದೇವೆ. ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದರೂ ಅದಕ್ಕೆ ತಕ್ಕ ಪ್ರತಿಫಲ ಮಾತ್ರ ದೇಶಕ್ಕೆ ಸಿಕ್ಕಲಿಲ್ಲ. ಇದರಿಂದ ನಮ್ಮ ಮಂತ್ರಿಗಳು ದಕ್ಷತೆಯಿಂದ ಕೆಲಸ ಮಾಡಲಿಲ್ಲ ಎಂಬುದು ಎದ್ದು ಕಾಣುತ್ತಿದೆ. ಇವರು ಅಲ್ಲಲ್ಲೇ ಮಣ್ಣು ಕಾಂಗಾರಿಗಳನ್ನು ನಡೆಸುತ್ತಿದ್ದಾರೆ. ಆದರೆ ಅದನ್ನು ಒಂದು ವಿಚಕ್ಷಣೆಯಿಂದ ಮಾಡುವುದಿಲ್ಲ. ಅಲ್ಲಲ್ಲೇ ಒಡ್ಡುಗಳನ್ನು ಹಾಕಲು ಹೊಸ ಕೆಲಸಗಳನ್ನು ಕೈಗೊಳ್ಳುತ್ತಾರೆ. ಅದರಿಂದ ಜನರಿಗೂ ಕೂಲಿಯೇನೋ ಸಿಕ್ಕು

ತ್ತದೆ: ಆದರೆ ಆ ಕೆಲಸ ಮಾತ್ರ ರೈತರಿಗೆ ಅನುಕೂಲ ಮಾಡುವುದಿಲ್ಲ. ಇದಕ್ಕೆ ಒಂದು ಖಾಯಂ ಸಮಿತಿಯನ್ನು ನೇಮಕ ಮಾಡುವುದು ಒಳ್ಳೆಯದು. ಅವರು ಒಂದು ದೇಶಕ್ಕೆಲ್ಲಾ ಅಗತ್ಯವಾದ ಶಾಶ್ವತವಾದ ಸ್ಕೀಮನ್ನು ತಯಾರು ಮಾಡಿ ಇದನ್ನು ಒಂದು ಶಾಸ್ತ್ರೀಯ ರೀತಿಯಲ್ಲಿ ಮಾಡಿದರೆ ಜನರಿಗೆ ಬಹಳ ಅನುಕೂಲವಾಗುತ್ತದೆ. ಈ ದಿವಸ ನಾವು ಪ್ರತಿ ಒಂದು ಹಳ್ಳಿಗೂ ರಸ್ತೆಗಳನ್ನು ನಿರ್ಮಾಣಮಾಡುವುದಕ್ಕಾಗುವುದಿಲ್ಲ. ಅಂಥಾ ಕಡೆಗಳಲ್ಲಿ ಭೂಮಿಯನ್ನು ಅಭಿವೃದ್ಧಿ ಮಾಡಲು ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಹೊಸದಾಗಿ ಕೆರೆಗಳನ್ನು ಮಾಡಿದ ಕಡೆ ಅದಕ್ಕೆ ಹಳ್ಳಗಳಿಂದ ಮಣ್ಣು ಬಹಳವಾಗಿ ಬರುತ್ತದೆ. ಹೀಗಾಗಿ ಆ ಕೆರೆಗಳು ಬಹು ಬೇಗ ಮಣ್ಣಿನಿಂದ ಮುಚ್ಚಿಹೋಗುತ್ತವೆ. ಎಲ್ಲೆಲ್ಲಿ ಕಪ್ಪು ಬಣ್ಣದ ಭೂಮಿ ಇದೆಯೋ ಅಲ್ಲೆಲ್ಲಾ ಮಳೆ ಬಿದ್ದಾಗ ಅಲ್ಲಿರತಕ್ಕ ಮಣ್ಣನ್ನು ಹಳ್ಳಗಳು ತಂದು ಕೆರೆಗೆ ತುಂಬುತ್ತವೆ. ಹೀಗಾಗಿ ನಮ್ಮ ಹೊಸಕೋಟೆಯ ಹತ್ತಿರ ಇರತಕ್ಕ ಕೆರೆ ಅಲ್ಲಿರತಕ್ಕ ಕರೀ ಮಣ್ಣಿನಿಂದ ಮುಚ್ಚಿಹೋಗಿದೆ. ಕರೆ ಮಣ್ಣು ಇರತಕ್ಕ ಕಡೆ ಕೆರೆಗಳನ್ನು ಕಟ್ಟಿದರೆ ಹೀಗಾಗಲೇಬೇಕು. ಆದರೆ ಹಳ್ಳಗಳಲ್ಲಿ ಈ ಹುಸುಕು ಮಣ್ಣನ್ನು ತಡೆಯುವುದಕ್ಕೆ ಸಾಧ್ಯವಿದೆ: ಅದನ್ನು ಮಾಡದಿದ್ದರೆ ಕಡೆಗೆ ಭೂಮಿಯಲ್ಲಿರತಕ್ಕ ಸಾರವೆಲ್ಲ ಸಮುದ್ರದ ಪಾಲಾಗುವುದು. ದೊಡ್ಡ ದೊಡ್ಡ ಹಳ್ಳಗಳಿಗೆ ಬಂಧಾರಗಳನ್ನು ಹಾಕುವುದರ ಮೂಲಕ ಹುಸುಕು ಬರುವುದನ್ನು ತಡೆಗಟ್ಟಬಹುದು. ಆಗ ಭೂಸಾರವನ್ನು ಕೂಡ ನಾವು ರಕ್ಷಣೆಮಾಡಿದ ಹಾಗೆ ಆಗುತ್ತದೆ. ರಸ್ತೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲದ ಭಾಗಗಳಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಅಲ್ಲಿ ಮಾರ್ಗೇಜ್ ಬ್ಯಾಂಕುಗಳಿಂದ ಸಾಲವಾಗಿ ಹಣವನ್ನು ಕೊಡಿಸಿ ಅಲ್ಲಿ ಒಡ್ಡು ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಲೆವಿ ವಿಚಾರಕ್ಕೆ ಬಂದರೆ ನಮ್ಮ ಮಂತ್ರಿಗಳು ಇನ್ನು 20 ವರ್ಷಗಳವರೆಗೆ ತಮ್ಮ ಸ್ಥಾನಭದ್ರವಾಗಿರುವುದಕ್ಕೇನು ಬೇಕೊ ಅದನ್ನೆಲ್ಲಾ ಮಾಡಿಕೊಂಡಿದ್ದಾರೆ. ಅವರು ದೊಡ್ಡ ದೊಡ್ಡ ರೈತರ ಹಗೇವುಗಳನ್ನಾಗಲಿ ಅಥವಾ ದೊಡ್ಡ ದೊಡ್ಡ ವರ್ತಕರ ಗೋಡೌನುಗಳನ್ನಾಗಲೀ ಒಂದನ್ನೂ ಜಪ್ತಿಮಾಡಿರುವುದಿಲ್ಲ. ಅದಕ್ಕೆ ತದ್ವಿರುದ್ಧವಾಗಿ ಬಡವರ ಹಾಗೂ ನಿರ್ಗತಿಕರಾದ ರೈತರನ್ನು ಬಂಧನಕ್ಕೆ ಒಳಪಡಿಸಿ ಅವರಿಂದ ಕಡ್ಡಾಯವಾಗಿ ಧಾನ್ಯ ವಸೂಲ್ಮಾಡುತ್ತಿದ್ದಾರೆ. ಇನ್ನು ಮುಂದೆ ಈ ಲೆವಿ ವಸೂಲ್ಮಾಡತಕ್ಕ ಸಂದರ್ಭದಲ್ಲ ಆಯಾಯ ಕ್ಷೇತ್ರದ ಶಾಸನ ಸಭಾ ಸದಸ್ಯರನ್ನು ಜೊತೆಯಲ್ಲಿಟ್ಟುಕೊಂಡು ಪ್ರತಿಯೊಂದು ಹಳ್ಳಿಗೂ ಹೋಗಿ ಧಾನ್ಯ ವಸೂಲಿ ಮಾಡಬೇಕೆಂದು ಹೇಳುತ್ತೇನೆ. ಯಾರು ಹೆಚ್ಚಾಗಿ ಬೆಳೆದಿದ್ದಾರೋ ಅವರಿಂದ ಧಾನ್ಯವನ್ನು ವಸೂಲ್ಮಾಡಿ ಇನ್ನು ಅಲ್ಪಸ್ವಲ್ಪ ಬೆಳೆದಿರತಕ್ಕವರನ್ನು ಮುಫತ್ತಾಗಿ ಬಿಟ್ಟುಬಿಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಲ್. ಶಿವಪ್ಪ (ತಿಪಟೂರು).—ಸ್ವಾಮಿ ಅಧ್ಯಕ್ಷರೇ, ಈ ದಿವಸ ರಾಜ್ಯದಲ್ಲಿ ಎಲ್ಲೆಲ್ಲಿ ಅಭಾವ ಪರಿಸ್ಥಿತಿಯುಂಟಾಗಿದೆಯೋ ಅಲ್ಲೆಲ್ಲಾ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕೆಂಬ ಒಂದು ತಃಖ್ತೆಯನ್ನು ಈಗ ನಮ್ಮ ಮುಂದೆ ಇಟ್ಟಿದ್ದಾರೆ. ಇದನ್ನು ನೋಡಿದರೆ ಇಲ್ಲಿ ಮೈನರ್ ಇರಿಗೇಷನ್ ಬಾಬಿನಲ್ಲಿ ಬಾವಿಗಳಿಗೆ ಒದಗಿಸಿರತಕ್ಕ ಹಣವೇನಿದೆ ಇದನ್ನು ಸರ್ಕಾರದವರು ಸುಮ್ಮನೆ ಇಲ್ಲಿ ನೆಪಕ್ಕಾಗಿ ತೋರಿಸಿದ್ದಾರೆಂದು ಹೇಳಬೇಕಾಗಿದೆ. ಈ ಹಣ ಬರುವ ಮಾರ್ಚಿ ಆಖೈರಿನೊಳಗಾಗಿ ಖರ್ಚಾಗುವುದು ಬಹಳ ಕಷ್ಟ. ಇದು ಹಾಗೇ ಉಳಿದು ಲ್ಯಾಪ್ಸ್ ಆಗುತ್ತದೆ. 1968ನೇ ಮಾರ್ಚಿ ಆಖೈರಿನೊಳಗೆ 45 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲು ಖಂಡಿತಾ ಸಾಧ್ಯವಿಲ್ಲ. ಆ ಅವಧಿಯಲ್ಲಿ ಒಂಬತ್ತು ಸಾವಿರ ಬಾವಿಗಳನ್ನು ಪೂರ್ತಿ ಮಾಡುವುದಕ್ಕೂ ಸಹಾ ಸಾಧ್ಯವಾಗುವುದಿಲ್ಲ. ರೈತರ ಕೈಗೆ ದುಡ್ಡು ಸೇರಬೇಕಾದರೆ ಮಾರ್ಚಿ ತಿಂಗಳಲ್ಲೇ. ಅಂದಾಗ ಇನ್ನು ಈ ಕೆಲಸಗಳನ್ನು ಮುಗಿಸುವುದಾದರೂ ಹೇಗೆ ? ಈ ಹಿಂದೆ ಸರ್ಕಾರದವರು 1961-62ರಲ್ಲಿ ಬಾವಿ ಒಂದಕ್ಕೆ ಮೂರು ಸಾವಿರ ರೂಪಾಯಿಗಳನ್ನು ಮಂಜೂರು ಮಾಡುತ್ತಿದ್ದರು. ಇತ್ತೀಚೆಗೆ ಇದನ್ನು ಎರಡು ಸಾವಿರಕ್ಕೆ ಇಳಿಸಿದ್ದರಿಂದ ಅನೇಕ ಬಾವಿಗಳ ಕೆಲಸ ಪೂರ್ತಿಯಾಗದೆ ಹಾಗೇ ಉಳಿದಿದೆ. ಆಗಲಾದರೂ ಅವುಗಳನ್ನು ಮುಗಿಸಲು ರೈತರಿಗೆ ಅಗತ್ಯವಾದ ಹಣವನ್ನು ಒದಗಿಸುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕಾದ್ದು ಅತ್ಯಗತ್ಯ ಎಂದು ಹೇಳುತ್ತೇನೆ.

ಇನ್ನು ಸರ್ಕಾರದವರು ರೈತರಿಗೆ ಕೊಡುತ್ತಿರುವ ಅಲ್ಪಾವಧಿ ಸಾಲಗಳೇನಿವೆ ಅವುಗಳಿಂದ ರೈತರಿಗೇನೂ ಪ್ರಯೋಜನವಾಗುತ್ತಾ ಇಲ್ಲ. ಅಲ್ಲಿ ಎರಡು-ಮೂರು ವರ್ಷಗಳಿಂದ ಮಳೆಯಿಲ್ಲದೆ ಜನರು ಇದ್ದ ಆಸ್ತಿಪಾಸ್ತಿಗಳನ್ನೆಲ್ಲಾ ಮಾರಾಟ ಮಾಡಿಕೊಂಡು ತಿಂದುಹಾಕಿದ್ದಾರೆ. ಆದುದರಿಂದ ಈ ದಿವಸ ಅವರಲ್ಲ ಸೆಕ್ಯೂರಿಟಿ ಇಡಲು ಬೇರಾವ ಆಸ್ತಿಯೂ ಇಲ್ಲದಿರುವ ಕಾರಣ ಈ ಅಲ್ಪಾವಧಿಯ ಸಾಲ ರೈತರಿಗೆ ವಿನಿಯೋಗವಾಗದೆ ಹಾಗೇ ಉಳಿಯಬಹುದು ಎಂಬ ಸಂಶಯ ನನಗಿದೆ. ಈ ಮೊಬಲಗನ್ನು ಬೆಂಗಳೂರು ಡಿವಿಜನ್ನಿಗೆ 6 ಲಕ್ಷ ಇಟ್ಟು ಇನ್ನುಳಿದ ಡಿವಿಜನ್‌ಗಳಿಗೆ 5 ಲಕ್ಷ ಮಾತ್ರ ಇಟ್ಟಿದ್ದಾರೆ.

(ಶ್ರೀ ಎ. ಎಚ್. ಶಿವಪ್ಪ)

ಇದನ್ನು ತಾಲ್ಲೂಕ್‌ವಾರ್ ಹಂಚಿದರೆ ಒಂದೊಂದು ತಾಲ್ಲೂಕಿಗೂ 30-40 ಸಾವಿರಕ್ಕೆ ಜಾಸ್ತಿ ಬರುವುದಿಲ್ಲ. ಅಂದಾಗ ಕೆಲಸವಿಲ್ಲದೆ ಇರತಕ್ಕ ಬಡ ರೈತರಿಗೆ ಸಾಕಷ್ಟು ಕೂಲಿ ಕೆಲಸಗಳು ಸಿಕ್ಕಲು ಸಾಧ್ಯವಿಲ್ಲ. ಸರ್ಕಾರದವರು ಸಹಾ ಅಲ್ಲಿ ಹೆಚ್ಚು ಹಣವನ್ನು ಖರ್ಚುಮಾಡುವುದಿಲ್ಲ. ಆದುದರಿಂದ ಈ ಗ್ರಾಂಟನ್ನು ಜಾಸ್ತಿ ಮಾಡಬೇಕು.

8-30 P.M.

ಆಮೇಲೆ ನಮ್ಮ ತುಮಕೂರು ಜಿಲ್ಲೆಯಲ್ಲಿರುವ ನಮ್ಮ ತಾಲ್ಲೂಕ್ ಒಂದು ವಿಚಿತ್ರವಾದ ತಾಲ್ಲೂಕಾಗಿದೆ. ಅಲ್ಲಿ ನೀರಾವರಿಯಾಗತಕ್ಕ ಪ್ರದೇಶ ಶೇಕಡ ಒಂಬತ್ತು ಭಾಗ ಎಂದಿದ್ದರೂ ಕನಿಷ್ಟಪಕ್ಷ ಶೇಕಡಾ ಅರರಷ್ಟು ಬಾಗಾಯತು ಜಮೀನಿಗೆ ನೀರು ಸಿಗುವುದೂ ಕಷ್ಟ, ಇಲ್ಲಿ ಅಹಾರಕ್ಕೆ ಯಾವತ್ತೂ ಕೊರತೆ ಇದ್ದೇ ಇದೆ. ಇಲ್ಲಿಗೆ ಬೇರೆ ಕಡೆಯಿಂದ ಅಹಾರಧಾನ್ಯಗಳನ್ನು ಕೊಂಡುಕೊಂಡು ಬಂದು ಹಂಚಬೇಕು. ಅಹಾರ ದವಸಗಳನ್ನು ಬೆಳೆಯಲು ಜಮೀನುಗಳೇ ಇಲ್ಲ. ಅದರಲ್ಲೂ ನಮ್ಮ ಕಡೆ ಮೂರು ನಾಲ್ಕು ವರ್ಷಗಳಿಂದಲೂ ಮಳೆಯೇ ಬಾರದ ಕಾರಣ ತೆಂಗಿನ ಫಸಲೂ ಕೂಡ ಇಲ್ಲ, ಅಹಾರ ಬೆಳೆಯುವ ತಾಲ್ಲೂಕು ನಮ್ಮದಲ್ಲ. ತೆಂಗಿನ ಬೆಳೆಯೂ ಕೂಡ ಇಲ್ಲಿ ಆಗಲಿಲ್ಲ. ಆದುದರಿಂದ ಸರಕಾರದವರು ಇಲ್ಲಿಗೆ ಹೆಚ್ಚು ಅಹಾರ ದವಸಗಳನ್ನು ಒದಗಿಸಿ ಕೊಡತಕ್ಕದ್ದು ಸರಕಾರದ ಅದ್ಯ ಕರ್ತವ್ಯ. ಇಂತಹ ಸನ್ನಿವೇಶದಲ್ಲಿ ಸರಕಾರ ಇದರ ಬಗ್ಗೆ ಗಮನ ಕೊಡಬೇಕು, ಇನ್ನು ಇದರಲ್ಲಿ ಕೊಟ್ಟಿರುವ ಹೇಳಿಕೆಯಲ್ಲಿ ಕಾಮಗಾರಿಗಳನ್ನು ಪ್ರಯಾರಿಟಿ ಎಂದು ಕೆಲವು ಐಟಂಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ರೋಡು ವರ್ಕ್‌ಗಳು ಹಾಗೂ ಬಂಡಿಂಗ್ ವರ್ಕುಗಳನ್ನು ಮಾಡಬೇಕು ಎಂದಿದೆ. ಇಲ್ಲಿ ವ್ಯವಸಾಯ ಮಾಡುವುದಕ್ಕೆ ಸಾಕಷ್ಟು ಜಮೀನುಗಳಿಲ್ಲ. ಆದುದರಿಂದ ಎಲ್ಲ ಕೆಲಸಗಳನ್ನೂ ಮಾಡುವುದಕ್ಕೆ ಇಲ್ಲಿ ಅವಕಾಶವಿಲ್ಲ. ಆದುದರಿಂದ ಸರಕಾರ ಸರಿಯಾದ ತತ್ವಗಳನ್ನು ಇದರಲ್ಲಿ ನಿರೂಪಿಸಬೇಕು. ನಮ್ಮ ತಾಲ್ಲೂಕಿನಲ್ಲಿ ರೋಡು ವರ್ಕುಗಳನ್ನು ಹೆಚ್ಚಾಗಿ ಮಾಡಿದರೆ ಇಲ್ಲಿನ ಜನರಿಗೆ ಕೂಲಿ ಸಿಗುತ್ತದೆ ಮತ್ತು ರಸ್ತೆ ಸಾರಿಗೆ ಸಂಪರ್ಕಗಳನ್ನೂ ಅನುಕೂಲ ಮಾಡಿಕೊಡಲು ಸಹಾಯವಾಗುತ್ತದೆ. ಆದುದರಿಂದ ಪ್ರಯಾರಿಟಿಗಳನ್ನು ನಿಗದಿ ಮಾಡುವಾಗ ಎಲ್ಲ ಕಡೆಯಂತೆ ನಮ್ಮ ಭಾಗದಲ್ಲಿ ಮಾಡದೇ ಮೊದಲಿಗೆ ರೋಡು ವರ್ಕ್ಸ್‌ಗಳು, ಆ ನಂತರ ಕಾಂಟೂರು ಬಂಡಿಂಗ್ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಸರಕಾರದಲ್ಲಿ ಮನವಿ ಮಾಡುತ್ತೇನೆ. ಇದರಿಂದ ನಮ್ಮ ತಾಲ್ಲೂಕಿನಲ್ಲಿರುವ ಎಲ್ಲ ಜನಗಳಿಗೂ ಕೆಲಸ ಮಾಡಲು ಒಂದು ಹೆಚ್ಚಿನ ಅವಕಾಶ ಸಿಗುತ್ತದೆ. ಇವೆರಡಕ್ಕೂ ಮೊದಲು ಪ್ರಯಾರಿಟಿಗಳು ಇರುವಂತೆ ಮಾಡಬೇಕೆಂದು ಹೇಳುತ್ತೇನೆ ಇದರಿಂದ ಬಹು ಜನರಿಗೆ ಅನುಕೂಲವಾಗುತ್ತದೆ.

ಇನ್ನು ಲೆವಿ ಪದ್ಧತಿ ವಿಚಾರವಾಗಿ ಹೇಳಬೇಕಾಗಿದೆ. ಲೆವಿ ಪದ್ಧತಿಯನ್ನು ವಿಮರ್ಶೆ ಮಾಡುವಾಗ ಇಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರು ಒಂದು ವಿಚಾರ ಹೇಳಿದರು. ಬೆಳೆಯುವವನ ಹತ್ತಿರ ಅವನು ತನಗೆ ಬೇಕಾದಷ್ಟನ್ನು ಇಟ್ಟುಕೊಂಡು ಉಳಿಕೆಯಾದ ಭಾಗವನ್ನು ಲೆವಿ ರೂಪದಲ್ಲಿ ಮಾತ್ರ ವಸೂಲು ಮಾಡಬೇಕು. ಇಲ್ಲದಿದ್ದರೆ ಲೆವಿ ವಸೂಲು ಮಾಡಕೂಡದು. ಹಿಂದೆ ಕೂಡ ಇದೇ ರೀತಿಯ ಪದ್ಧತಿ ಪೂರ್ವದಲ್ಲಿ ಇತ್ತು. ಆಹಾರ ದಿನಸಿ ಏನು ಬೆಳೆಯುತ್ತಾರೋ ಅದರಲ್ಲಿ ತನಗೆ ಬೇಕಾದಷ್ಟನ್ನು ಇಟ್ಟುಕೊಂಡು ಉಳಿಕೆಯನ್ನು ಹೊರಕ್ಕೆ ಕೊಡುತ್ತಿದ್ದರು. ಯಾರಾದರೂ ಹೆಚ್ಚು ಬೆಳೆಯುವವರು ಇದ್ದರೆ ಅವರಿಂದ ಹೆಚ್ಚು ದಿವಸಗಳು ಉಳಿಯುತ್ತಿದ್ದರೆ ಅಂತಹವರು ಇಷ್ಟು ಕೊಡಬೇಕು ಎಂದು ಹೇಳುವುದರಲ್ಲಿ ನ್ಯಾಯವಿದೆ. ಇಂತಹ ಕಾಲದಲ್ಲಿ ಕೆಲವು ಕಡೆ ಎಕರೇವಾರು ಕೊಡಬೇಕು ಎಂದು ಈಚೆಗೆ ಮಾಡಿದ ಲೆವಿ ಆರ್ಡರಿನಂತೆ ಮಾಡಿದ್ದಾರೆ. ಆದರೆ ಬಡವರಾಗಿರುವವರು ಅವರಿಗೆ ತಿನ್ನುವುದಕ್ಕೆ ಕಾಳು ಸಿಗದೇ ಇರುವಾಗ ಅವರು ಲೆವಿಯನ್ನು ಹೇಗೆ ತಾನೆ ಕೊಡಲು ಸಾಧ್ಯ ? ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಏನೋ ಶ್ರೀಮಂತರಾಗಿರುವ ರೈತರು ಹೆಚ್ಚಾಗಿ ಬೆಳೆಗಳನ್ನು ಬೆಳೆಯುತ್ತಾರೆ ಅವರುಗಳು ಹೇಗಾದರೂ ಮಾಡಿ ದವಸವನ್ನು ಕೊಡಬಹುದು ಮತ್ತು ಅವರಿಗೆ ದವಸ ಉಳಿಯುವುದಕ್ಕೂ ಅವಕಾಶವಿದೆ. ಆದರೆ ಬಡವರಿಂದ ಕಡ್ಡಾಯವಾಗಿ ಲೆವಿ ವಸೂಲ್ ಮಾಡಬೇಕೆಂದು ಕೆಲವುಕಡೆ ಸರಕಾರ ಮಾಡುತ್ತಿರವುದು ಸರಿಯಲ್ಲ. ಇದನ್ನು ತೆಗೆಯಬೇಕು. ಇದರ ಬಗ್ಗೆ ಸರಕಾರ ಇಲಾಖೆಯವರೆಗೂ ಎಷ್ಟೋ ಮನವಿಗಳು ಬಂದಿದ್ದಾಗ್ಯೂ ಇನ್ನೂ ಗಮನಕ್ಕೆ ತೆಗೆದುಕೊಳ್ಳದೇ ಇರುವುದು ಬಹು ವಿಷಾದದ ಸಂಗತಿ. ಮೂರು ನಾಲ್ಕು ಪಲ್ಲ ಬೆಳೆಯುವ ಸಣ್ಣ ರೈತರುಗಳಿಂದ ಕಡ್ಡಾಯವಾಗಿ ಲೆವಿಯನ್ನು ವಸೂಲ್ ಮಾಡಬೇಕೆಂದು ಮಾಡುವುದು ಸರಿಯಲ್ಲ. ನಮ್ಮ ತಿಪಟೂರು ತಾಲ್ಲೂಕಿನಲ್ಲಿ ಲೆವಿ ಹಾಕಿರುವುದನ್ನು ಪುನರ್ವಿಮರ್ಶೆ ಮಾಡಬೇಕು. ಇಲ್ಲಿ ಬೆಳೆಗಳೇ

ಬೆಳೆಯುತ್ತಿಲ್ಲ. ಇಂತಹ ಕಡೆ ಲೆವಿ ಕೊಡಬೇಕು ಎಂದರೆ ಹೇಗೆ? ಅದುದರಿಂದ ಕೆಲವು ಭಾಗಗಳಲ್ಲಿ ಕಡ್ಡಾಯವಾಗಿ ಲೆವಿ ಎಂದು ವಸೂಲು ಮಾಡುವುದನ್ನು ನಿಲ್ಲಿಸಬೇಕು. ನಮ್ಮ ತಾಲ್ಲೂಕಿನಲ್ಲಿ ಪ್ರತಿ ವರ್ಷವೂ ಹೊರಗಿನಿಂದ ಆಹಾರದವಸಗಳನ್ನು ಕೊಂಡುಕೊಂಡು ತರಬೇಕಾಗಿದೆ. ಅದೂ ತಿಪಟೂರು ತಾಲ್ಲೂಕಿಗೆ ಸುಮಾರು ನಾಲ್ಕೈದು ವರ್ಷಗಳಿಂದಲೂ ಮಳೆಯೇ ಇಲ್ಲ, ಸರಕಾರ ಸುಮಾರು 18-20 ವರ್ಷಗಳಿಂದ ಯಾವ ಯಾವ ತಾಲ್ಲೂಕುಗಳಲ್ಲಿ ಮಳೆಯಾಗುತ್ತದೆ ಎಲ್ಲಿ ಆಗುತ್ತಿಲ್ಲ ಎನ್ನುವುದನ್ನೆಲ್ಲಾ ಪರಿಶೀಲನೆ ಮಾಡಿ ಎಲ್ಲಿ ಹೆಚ್ಚು ಬೆಳೆಯುತ್ತಿದ್ದಾರೋ ಅಂತಹ ಕಡೆಗಳಲ್ಲಿ ಮಾತ್ರ ಲೆವಿ ವಸೂಲುಮಾಡುವ ಪದ್ಧತಿಯನ್ನು ಅನುಸರಿಸಬೇಕು. ಇತರ ಕಡೆಗಳಲ್ಲಿ ಲೆವಿಯನ್ನು ವಸೂಲು ಮಾಡಬಾರದು ಮತ್ತು ದೇಶದ ಜನರ ಕಲ್ಯಾಣವಾಗುವಂತಹ ಕೆಲಸಗಳನ್ನು ಸರಕಾರ ಕೈಕೊಳ್ಳಬೇಕು ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎನ್. ರಾಮೇಗೌಡ (ಸಿರಾ).—ಸ್ವಾಮಿ, ಈಗಾಗಲೇ ದೇಶದ ನಾನಾ ಭಾಗಗಳಲ್ಲಿರುವ ತೀವ್ರವಾದ ಅಭಾವ ಪರಿಸ್ಥಿತಿ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರುಗಳು ಅವರ ಅಭಿಪ್ರಾಯಗಳನ್ನು ಇಲ್ಲಿ ಹೇಳಿದ್ದಾರೆ. ಇದೇರೀತಿ ಹೆಚ್ಚು ತೀವ್ರವಾಗಿ ತುಮಕೂರಿನ ಜಿಲ್ಲೆಯ ಕೆಲವು ಭಾಗಗಳಲ್ಲಿ ಸಾಕಷ್ಟು ಕ್ಷಾಮಕ್ಕೆ ತುತ್ತಾಗಿ ಜನನೊಂದು ಪರಿತಪಿಸುತ್ತಿದ್ದಾರೆ. ಇವರ ಕಷ್ಟಗಳನ್ನು ಪರಿಹಾರ ಮಾಡಬೇಕು ಎಂದು ಸರಕಾರ ಹಿಂದೆ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದರು. ಇದರಿಂದ ಜನ ಅನುಕೂಲ ಮಾಡಿಕೊಳ್ಳಬೇಕು ಎಂದು ಇದ್ದ ಎರಡು ವರ್ಷಗಳ ಅವಧಿಯಲ್ಲೇ ಸಕಾಲದಲ್ಲಿ ಮಳೆ ಬಾರದೆ ಮತ್ತೆ ತೀವ್ರವಾದ ಅಭಾವ ಪರಿಸ್ಥಿತಿ ಅಲ್ಲಲ್ಲಿ ಉಂಟಾಗಿದೆ. ತುಮಕೂರು ಜಿಲ್ಲೆಯಲ್ಲಿ ಸುಮಾರು ಹತ್ತು ತಾಲ್ಲೂಕುಗಳಲ್ಲಿ ತೀವ್ರವಾದ ಅಭಾವ ಪರಿಸ್ಥಿತಿಗೊಳಗಾಗಿದ್ದಾಗ ಇಲ್ಲಿನ ಜನರಿಗೆ ಮುಂಗಾರು ಬೆಳೆಕೂಡ ಆಗಲಿಲ್ಲ. ಮುಂಗಾರು ಬೆಳೆ ಬಂದಿದ್ದರೆ ಏನೋ ಅಲ್ಪಸ್ವಲ್ಪ ಭತ್ತದಬೆಳೆ ಬರುತ್ತಿತ್ತು. ಮುಂಗಾರುಬೆಳೆ ಬಾರದೇ ಇರುವುದರಿಂದಾಗಿ ಸುಮಾರು 50-60 ಸಾವಿರ ಎಕರೆಗಳ ಪ್ರದೇಶದಲ್ಲಿ ರೈತರು ಭತ್ತಬೆಳೆಯುವುದಕ್ಕೆ ಅವಕಾಶವಿಲ್ಲದಂತಾಗಿದೆ ಮತ್ತು ಉತ್ಪತ್ತಿಕೂಡ ಆಗದೆ ಜನರಿಗೆ ಬಹಳ ಕಷ್ಟವಾಗಿದೆ. ಅದರಲ್ಲೂ ಭೂಮಿಯನ್ನೇ ನಂಬಿಕೊಂಡು ಇದ್ದ ಜನ ಅವರಲ್ಲಿದ್ದ ಬಂಡವಾಳವನೆಲ್ಲಾ ಈ ಭೂಮಿಗೇ ಹಾಕಿ ಹಣ ಹಾಳುಮಾಡಿಕೊಂಡಿದ್ದಾರೆ. ಅದರಲ್ಲೂ ತುಮಕೂರು ಜಿಲ್ಲೆಯಲ್ಲಿ ಕೆಲವು ಕಡೆಗಳಲ್ಲಿ ರೈತರು ಭಿಕಾರಿಗಳಾಗಿರುವ ಪರಿಸ್ಥಿತಿ ಬಂದಿದೆ. ನಮ್ಮ ಜಿಲ್ಲೆ ಹಿಂದೆ ಆಹಾರದ ಕಣಜ ಎಂದು ಇತ್ತು. ಇಂದು ನಮ್ಮ ಜಿಲ್ಲೆಯ ಕುಣಿಗಲು ತಾಲ್ಲೂಕು ಕ್ಷಾಮಕ್ಕೆ ಸಿಕ್ಕಿ ಬಹಳ ತೀವ್ರವಾದ ಪರಿಸ್ಥಿತಿಗೆ ಒಳಗಾಗಿದೆ. ಇದು ಬಹಳ ವಿಷಾದದ ಸಂಗತಿ. ನಮ್ಮ ಜಿಲ್ಲೆಯ ಹತ್ತಿರದಲ್ಲೇ ಮಾರ್ಕೋನಹಳ್ಳಿ ಜಲಾಶಯ ಹಿಂದು ದೊಡ್ಡ ಜಲಾಶಯ ಅಚ್ಚುಕಟ್ಟಿನಲ್ಲಿರುವ ರೈತರಿಗೆ ಅನುಕೂಲ ಮಾಡಿಕೊಟ್ಟರೆ ಸುಮಾರು ಹತ್ತು ಸಾವಿರ ಎಕರೆಗಳಷ್ಟು ಭೂಮಿಯಲ್ಲಿ ಭತ್ತದ ಫಸಲಿಗೆ ನೀರು ಸಿಗದೇ ಭತ್ತದ ಪಸಲೆಲ್ಲಾ ಒಣಗಿ ಹೋಗಿದೆ ಒಂದು ಸೇರು ಭತ್ತ ಕೂಡ ಬರುವುದಕ್ಕೆ ಅವಕಾಶ ಇದೆಯೋ ಇಲ್ಲವೋ ಎನ್ನುವಂತಹ ಸ್ಥಿತಿಗೆ ಬಂದಿದೆ. ಇಲ್ಲಿನ ರೈತರು ಭಿಕಾರಿಗಳಾಗುವ ಸ್ಥಿತಿ ಬಂದಿದೆ. ಇವರಿಗೆ ಪರಿಹಾರವಾಗಿ ಅಲ್ಲಲ್ಲೇ ಪರಿಹಾರ ಕೆಲಸಗಳನ್ನು ಒದಗಿಸಿಕೊಡಬೇಕು ಹಾಗೂ ಕಾಳುಗಳನ್ನು ಕೊಳ್ಳಲು ಜನರಿಗೆ ಕೆಲಸ ಒದಗಿಸಿ ಸರಕಾರ ಹಣ ಕೊಟ್ಟು ಸಹಾಯ ಮಾಡಬೇಕಾದುದು ಅಗತ್ಯ. ಇದೇ ರೀತಿ ನಮ್ಮ ಜಿಲ್ಲೆಯ ಇತರ ಭಾಗಗಳಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಸುಮಾರು 5-10 ಸಾವಿರ ಎಕರೆಗಳಷ್ಟು ಭೂಮಿಯಲ್ಲಿ ಭತ್ತವನ್ನು ಹಾಕಿದ್ದರು. ಮುಂಗಾರು ಮಳೆ ಬಾರದೇ ಈ ಭತ್ತದ ಫಸಲೆಲ್ಲಾ ಒಣಗಿ ಹೋಗಿದೆ ಮತ್ತು ಇದಕ್ಕೆ ರೈತರು ಹಾಕಿದ್ದ ಬಂಡವಾಳವೂ ಹಾಳಾಗಿ ಬಹಳ ತೊಂದರೆ ಅನುಭವಿಸುವಂತಹ ಪರಿಸ್ಥಿತಿ ಇದೆ. 1965 ನೇ ಇಸವಿಯಿಂದೀಚೆಗೆ ಇಲ್ಲಿನ ಜನರು ಬಹಳ ಕಷ್ಟಕ್ಕೆ ಈಡಾಗಿ ಬಹು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಅದರಲ್ಲೂ ಕೆಲವರು ಮನೆಗಳಲ್ಲಿ ಊಟಕ್ಕೆ ಇಟ್ಟುಕೊಂಡಿದ್ದ ತಟ್ಟೆ ಹಾಗೂ ಕುಡಿಯಲು ಇಟ್ಟುಕೊಂಡಿದ್ದ ಪಾತ್ರೆಗಳು ಇವನ್ನೆಲ್ಲಾ ಜಾಗಟೆ ಹಾಗೂ ಭವನಾಶಿಯಂತೆ ಮಾಡಿಕೊಂಡು ಬೀದಿಯಲ್ಲಿ ಭಿಕ್ಷಾಟನೆ ಮಾಡುವ ಪರಿಸ್ಥಿತಿಗೆ ಬಂದಿದ್ದಾರೆ. ಇದಕ್ಕೆ ಕಾರಣ ನಮ್ಮ ಭಾಗದಲ್ಲಿರುವ ದಾರುಣವಾದ ಕ್ಷಾಮ ಪರಿಸ್ಥಿತಿ. ಇದರಿಂದ ಇಲ್ಲಿನ ಜನರು ಊಟಮಾಡುವ ತಟ್ಟೆಗಳನ್ನು ಜಾಗಟೆಯಾಗಿ ಮಾಡಿಕೊಂಡು ಇತರ ಪಾತ್ರೆಗಳನ್ನು ಭವನಾಸಿಯಂತೆ ಮಾಡಿಸಿಕೊಂಡು ಭಿಕ್ಷೆ ಎತ್ತುವಂತಹ ಸ್ಥಿತಿಗೆ ಬಂದು ಬಹು ಕಷ್ಟವನ್ನು ಅನುಭವಿಸುತ್ತಿದ್ದಾರೆ. ಅದುದರಿಂದ ಈಗ ಸರ್ಕಾರದವರು ಈಗಾಗಲೇ ಕ್ಷಾಮಕ್ಕಾಗಿ ಕೆಲವು ಪರಿಹಾರ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಈ ಕೆಲಸಗಳು ಬಹು ಕಡಿಮೆ. ಈಗಿರತಕ್ಕ ಕಷ್ಟದ ಪರಿಸ್ಥಿತಿಯನ್ನು ಸುಧಾರಿಸುವ ಪರಿಸ್ಥಿತಿಯಲ್ಲಿ ಈ ಕಾಮಗಾರಿ ಕೆಲಸಗಳು ಇಲ್ಲ. ಮತ್ತು ಹೆಚ್ಚು ಪರಿಹಾರದ ಕೆಲಸಗಳನ್ನು ತೆಗೆದುಕೊಂಡಿಲ್ಲ ಆದುದರಿಂದ ಇನ್ನೂ ಹೆಚ್ಚು ಪರಿಹಾರ ಕೆಲಸಗಳನ್ನು ಎಲ್ಲ ಇಲಾಖೆಗಳ ಮೂಲಕ ತೆಗೆದುಕೊಳ್ಳಲು ಅವಕಾಶಗಳಿವೆ. ಇಂತಹ ಕೆಲಸಕಾರ್ಯಗಳನ್ನು ಇನ್ನೂ ಹೆಚ್ಚು ಸಂಖ್ಯೆಯಲ್ಲಿ ತೆಗೆದುಕೊಂಡು ಎಲ್ಲರಿಗೂ

(ಶ್ರೀ ಬಿ. ಎನ್. ರಾಜೇಗೌಡ)

ಕೆಲಸ ಸಿಗುವಂತೆ ಏರ್ಪಾಡು ಮಾಡಬೇಕು ಮತ್ತು ಕೆಲಸ ಮಾಡುವ ಕೂಲಿಯಾಳುಗಳಿಗೆ ಆಹಾರ ಕೊಳ್ಳುವುದಕ್ಕೆ ಬೇಕಾಗುವಷ್ಟು ಹಣವನ್ನು ಒದಗಿಸುವ ಏರ್ಪಾಡು ಮಾಡಬೇಕು. ಸುಮಾರು 8-10 ವರ್ಷಗಳಿಂದಲೂ ನಮ್ಮ ಜಿಲ್ಲೆಯಲ್ಲಿನ ಕೆಲವು ಭಾಗಗಳು ಬಹು ತೀವ್ರವಾದ ಕಷ್ಟ ಪರಿಸ್ಥಿತಿಗೆ ಸಿಕ್ಕಿವೆ. ಇನ್ನೂ ಇಲ್ಲಿ ಸುಗ್ಗಿ ಕಾಲ ಬರಬೇಕಾದರೆ ಹತ್ತು ತಿಂಗಳು ಕಾಲ ಕಾಯಬೇಕು. ಅಲ್ಲಿಯ ವರೆಗೆ ಇಲ್ಲಿ ಹೆಚ್ಚು ಕಾಮಗಾರಿ ಕೆಲಸಗಳನ್ನು ತೆಗೆದು ಕೊಳ್ಳಬೇಕು ಮತ್ತು ದವಸ ಕೊಳ್ಳಲು ಜನಕ್ಕೆ ಹಣಸಹಾಯ ಮಾಡಿಕೊಡಬೇಕು ಮತ್ತು ನಮ್ಮ ಜಿಲ್ಲೆಯಲ್ಲಿರುವ ಸುಮಾರು ಹತ್ತು ತಾಲ್ಲೂಕು ಗಳನ್ನು ಕ್ಷಾಮ ಪ್ರದೇಶ ಎಂದು ಸಾರಬೇಕು ಮತ್ತು ಸರಕಾರ ಕ್ಷಾಮ ಪೀಡಿತರಾಗಿರುವ ಜನರಿಗೆ ಎಲ್ಲ ರೀತಿಯ ಸಹಾಯಗಳೂ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳಿ ನನ್ನ ಎರಡು ಮಾತು ಗಳನ್ನು ಮುಗಿಸುತ್ತೇನೆ.

† Sri P. B. NANDIHALI (Uchagaon).—Hon'ble Speaker, Sir, listening to the long discussion on the problem of levy, I think the Chair and the concerned Ministers will agree that this policy of compulsory collection of levy has definitely failed throughout the State. Of course, it is the bounden duty and responsibility of the Government to see the reason why this policy has failed. We know that the farmers, the peasants and the workers have tried for centuries for the progress of the country. They would be prepared willingly and voluntarily to give levy and there was no necessity of law for this at all. The Government have failed to solve the difficulties of the peasants. The problem of their own food is not solved. They are not at all to till the land. To grow more food, he must be the owner of the land. He must be given sufficient loans to encourage him to cultivate the land. He must be helped by irrigation schemes and irrigation wells and he must be furnished with all the materials he wants. The Government is not supplying him fertilisers in time and at a proper rate. The Government on the other hand is expecting levy from the farmers and the rate is also very low. These are the main things which have to be considered. The next point I want to bring to the kind notice of the concerned Minister is that in the villages, there is a large section of the landless labourers and Harijan people. They have no land at all. The villagers are spread here and there and everywhere and they cannot come to the City and work. They have no small-scale industries. The large section which is the greatest wealth of the nation is neglected entirely by the Government. They are not supplied with food rations. They are not given land. So much of forest lands are there, but they are not released. Especially these people who are landless in the villages are neglected. So far as scarcity relief works are concerned, I want to charge the Government that my constituency has been neglected and even Khanapur Taluk is also neglected due to partiality. Twice or thrice our taluk faced famine, but yet no relief work was started there. The officers tell me they are prepared to co-operate but due to boundary problem and due to the movement that is going on there, those areas are neglected. Sir, I want to bring to the notice of the House and the Government, that when we were carrying on the movement in our student days against the British to drive them out of India, up till the last moment, they served our country and they had kept law and order. But here in my own part, our Government have

failed to conquer the hearts of the people of our Taluk. I request earnestly the Government to change their attitude and start more works in that part so that they will be able to conquer the hearts of Marathi people of the villages there. This will be one of the ways to satisfy the people. Especially this year we are suffering from famine conditions and scarcity relief works are an urgent necessity. The people of Belgaum and Khanapur Taluks are actually starving and so the Government should start relief works by taking up construction of roads and irrigation schemes, etc. I have already given to the Government a list of works that could be started here. About levy, it should not be collected this year. In Belgaum taluk, in most of the villages there are no rains. Fortunately, the Tahasildar is extending co-operation to all the villages. But some of the officers there have started competition in collecting levy so as to satisfy the higher Officers. Please tell them that they should behave in such a manner that the peasant should not be dissatisfied and he must be encouraged to give levy to the Government willingly and voluntarily.

Mr. SPEAKER.—I will make it definitely clear. All these points brought out are facts for the consideration of Government. There is no question of taking vote on that. The Government will have to gather information from the Members representing various constituencies and they deserve every consideration. If they deem fit, a brief statement for five minutes may be made.

Sri B. D. JATTI.—Mr. Speaker Sir, I have heard the speeches of the Hon'ble Members who have participated in today's debate. The points which they have stressed are one or two.

The main point which has been discussed by some of the Hon'ble Members was Levy. Sir, levy system is not a new system which has been introduced this year alone. This system is in vogue for some years past. If there are some difficulties while collecting the levies this of course could be avoided provided we discuss together and find a way out. Particularly in areas where there is scarcity and where there is no great crop some method will have to be adopted. According to the prevailing system in our State, it is not possible for the Government to give general exemption in particular areas. We will have to give exemption to each individual farmer. When we want to implement this policy, there are some difficulties. The farmers are innocent and in many cases illiterate ; they do not know how to fill up the forms. Most of the difficulties pointed out are genuine. How to get over the difficulty is the problem. But I have thought of a practical suggestion. In areas where crops have failed, the representatives of the people, the Members of the village panchayet including the chairman and the revenue inspector who has got the demand register, *plus* the President of the taluk development board, let them sit together, consider the matter by survey numbers and let them prepare a list whether A can pay 100 per cent or 50 per cent or whether he cannot pay and that list they may submit to the Thasildar. He will accept it as correct and legal, because representatives of the people, members of the village panchayet and the

(SRI B. D. JATTI)

President of the taluk development board are responsible people. If there are certain villages where there are groups and if there is going to be any difference of opinion in such matters, my suggestion is, the tahsildar and the President of the Taluk Development Board may decide and whatever they decide should be accepted as final and correct.

SRI P. BHASKAR SETTY (Kaup).—Why not include M.L.A.s also ?

SRI B. D. JATTI.—I have no objections to include M.L.A.s to be there. But my point is, they are elected aud they are going to look forward to future elections also. He should not become unpopular. My idea is that he may keep aloof.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಮಂತ್ರಿಗಳು ಹೇಳಿರುವ ಪ್ರಕಾರ ಚುನಾವಣೆಗೆ ಸಂಬಂಧಪಟ್ಟ ವಿಷಯವೇ ಲೆವಿ ವಸೂಲುಮಾಡುವುದು, ಬಿಡುವುದು. ಇದು ನನಗೆ ಗೊತ್ತಾಗಲಿಲ್ಲ.

SRI B. D. JATTI.—My suggestion is, if legislators are interested, I have no objection. Let the M.L.A. or M.L.C, the tahsildar, President of the Taluk Board, sit and decide if there is any dispute regarding a particular set of persons. This is one of the methods by which we can come to a definite conclusion and solve this problem.

The second point is, without collecting levy it will not be possible for us to supply foodgrains to the areas where there is scarcity. We will have to get it from foreign countries or from other States were they grow. They collect the levy and give us something to feed our people where we have not got any kind of crops. In order to feed the people in the scarcity areas, the levy system is absolutely necessary. Without that we cannot survive. But whatever difficulties are there, they can be solved and I am prepared to hear all the difficulties and complaints and I am prepared to do what is practicable to solve the difficulties. It will not be possible at least during the current year to effect any change in this levy system. If at all we can modify the present system or if a new system has to be introduced which is more practical, we ean consider in the next budget and after the current year is over, we can adopt any other new system or ony changes that may be necessary.

Sir, I do not want to say anything more. But regarding scarcity areas, when the Government declares or announces that are the scarcity areas, in such areas, fair price shops will be opened and food grains will be rushed for supply to all persons in these areas. That arrangement may be made and there will not be any difficulty.

There are some complaints here and there regarding supply of good rice. These are bound to continue also, because we are not growing sufficient paddy or rice in our State. We will have to depend upon others and whatever we get from other States, we will have to distribute and if they send medium type and inferior type, we will have to be satisfied with that type of rice which will be allotted to us by the Government of India.

9-00 P.M.

If some people have done mischief and if it is found out, we have sufficient laws and rules which can be used to punish them and we are trying to take action against all those persons. I do not think there is any necessity to further clarify the matter. Thank you, Sir.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನನಗೆ ಎರಡು ಅನುಮಾನಗಳು ಬಂದಿವೆ. ಮಾನ್ಯ ಮಂತ್ರಿಗಳು ಈಗತಾನೆ ಹೇಳೋಣವಾಯಿತು...........

ಅಧ್ಯಕ್ಷರು.—ನಿಮಗೆ ಅನುಮಾನ ಬಂದಿದ್ದರೆ ಬೇರೆಯವರಿಗೆ ಹಸಿವು ಬಂದಿದೆ.........

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ಜತ್ತಿಯವರು ಹೇಳಿದರು ಲೆವಿ ವಸೂಲ್ಮಾಡತಕ್ಕ ಕಾಲದಲ್ಲಿ ತಾಲ್ಲೂಕ್ ಬೋರ್ಡ್ ಅಧ್ಯಕ್ಷರು, ಗ್ರಾಮ ಪಂಚಾಯಿತಿಯ ಛೇರ್ಮನ್ನರೂ ಮತ್ತು ತಾಶೀಲ್ದಾರರೂ ಇದನ್ನು ಒಟ್ಟಾಗಿ ತೀರ್ಮಾನ ಮಾಡುತ್ತಾರೆ ಎಂದು.........

Mr. SPEAKER.—Hon. member is delivering another speech.

ಶ್ರೀ ಎಸ್ ಬಂಗಾರಪ್ಪ.—ಈ ದಿವಸ ಹಲ್ಲಿಂಗಿಗೆಂದು ಹೋಗತಕ್ಕ ಬತ್ತದ ಗಾಡಿಗಳಲ್ಲಿ ಅನೇಕ ಹೊರಗಡೆಗೆ ಹೋಗುತ್ತಿವೆ. ಅದನ್ನು ತಡೆಗಟ್ಟಲು ಇವರಿಗೆ ಸಾಧ್ಯವಿದೆಯೇ? ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಮೇಲೆ ನಾವಿನ್ನು ಮಾತನಾಡಿಯಾದರೂ ಏನು ಪ್ರಯೋಜನ?

ಅಧ್ಯಕ್ಷರು.—ನೀವು ಈ ಚರ್ಚೆಯಲ್ಲಿ ಭಾಗವಹಿಸಿದ್ದಿರಿ. ಭಾಗವಹಿಸದೆ ಇರತಕ್ಕವರು ಅನೇಕರಿದ್ದಾರೆ. ಯಾವುದಕ್ಕೂ ಒಂದು ಮಿತಿ ಇರಬೇಕು. ಯಾರು ಯಾರೋ ತಪ್ಪು ಮಾಡಿದರೆಂದು ಅದನ್ನು ನನ್ನಮೇಲೆ ಹಾಕುವುದಕ್ಕೆಬಂದರೆ ಅದು ಹೇಗೆ ಸಾಧ್ಯ? ಎಲ್ಲರೂ ಒಂದು ಹೊಂದಾವಣಿಕೆಯಿಂದ ಹೋದರಂತು ಸರಿ. ಆದರೆ ಇಂಥ ಸಂದರ್ಭಗಳಲ್ಲಿ ಕೆಲವರಿಗೆ ಅನಾನುಕೂಲವಾಗತಕ್ಕದ್ದು ಅನಿವಾರ್ಯ. ನಾನು ಇಷ್ಟು ದೈನ್ಯದಿಂದ ತಮ್ಮನ್ನು ಕೇಳಿಕೊಂಡರೂ ತಾವು ನನ್ನ ಮಾತನ್ನು ಉಲ್ಲಂಘನೆ ಮಾಡಿದರೇನು ಮಾಡುವುದು? ಇದು ನನ್ನ ತಪ್ಪಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಇಷ್ಟು ಅವಕಾಶ ನಮಗೆ ಕೊಟ್ಟಿದ್ದರೆ ನಾವು ಹೇಳುವುದನ್ನು ಹೇಳಿ ಮುಗಿಸುತ್ತಿದ್ದೆವು.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಒಬ್ಬೊಬ್ಬರಿಗೆ 2 ನಿಮಿಷ ಕೊಟ್ಟಿದ್ದರೆ ಸಾಕಾಗಿತ್ತು.

Mr. SPEAKER.—I think it is better to adjourn the House because it is impossible to satisfy all.

Now the House stands adjourned to meet tomorrow at 12 Noon.

The House adjourned at Five Minutes past Nine of the Clock to meet again at Twelve of the Clock on Friday the 22nd December 1967.

WD 9791—GPB—600—10-2-68.